# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟೆಂಬರ್ - 2016

## ಎಕನಾಮಿಕ್ಸ್ ವಿಶೇಷ



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 33**

**ಸಂಚಿಕೆ - 12**

**ಸೆಪ್ಟೆಂಬರ್ - 2016**


***ಈ ಸಂಚಿಕೆಯಲ್ಲಿ .....***

**★★ ಎಕನಾಮಿಕ್ಸ್ ವಿಶೇಷ ★★**


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಅಜ್ಜಿಯ ಯುನೀಕ್... | **ಇ.ಆರ್. ರಾಮಚಂದ್ರನ್** | 6 |
| ಸೊನ್ನೆಯ ಬೆಲೆ | **ಆನಂದ** | 10 |
| ಪಾತತ್ತೆಯ ಲೆಕ್ಕಾಚಾರಗಳು | **ಸಹನಾ ಪ್ರಸಾದ್** | 12 |
| ಗಳಕಿ ಉಳಕಿ | **ಭೂಮಿತಾಯಿ** | 14 |
| ಅನರ್ಥಶಾಸ್ತ್ರ | **ಅರ್ಥಶಾಸ್ತ್ರಿ** | 17 |
| ಸಾಸಿವೆ ಡಬ್ಬಿ ಮತ್ತು ... | **ಬೇಲೂರು ರಾಮಮೂರ್ತಿ** | 22 |
| ಅಮೇರಿಕಾ ಮೊಮ್ಮಗ | **ನುಗ್ಗೆಹಳ್ಳಿ ಪಂಕಜ** | 26 |
| ತುಂತುರು | **ದಂನಾಂ** | 28 |
| ಈ ಪಾಟಿ ಮದ್ವೇನಾ? | **ಕುಮುದಾ ಪುರುಷೋತ್ತಂ** | 29 |
| ಆತ್ಮಹತ್ಯೆ ಫಜೀತಿ | **ಡಿ.ವಿ. ಗುರುಪ್ರಸಾದ್** | 32 |
| ಕನಸಿಗೊಂದು ಸೂಟು! | **ಎಂ.ಕೆ. ಭಾಸ್ಕರ ರಾವ್** | 38 |


**ಮುಖಪುಟ ವ್ಯಂಗ್ಯಚಿತ್ರ - ಇಂಟರ್ನೆಟ್ ಕೃಪೆ**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಭಯೋತ್ಪಾದನೆ ನಿಗ್ರಹಕ್ಕೆ ಬದ್ಧ – ನವಾಸ್ ಶರೀಫ್

***● ಇದೊಂದು ದಂತಕತೆ !!***

★★★

ಸೋಮಾರಿತನದಿಂದ ಆರೋಗ್ಯ ವೃದ್ಧಿ – ಸ್ತುತಿ

***● ನಮಗೆ ಇದು ಎಂದೋ ಗೊತ್ತಿತ್ತು !!***

★★★

ಕೆನಡಾದಲ್ಲಿ ಹಣದ ಅಗತ್ಯವಿದ್ದರೆ ರಾಜಕೀಯ ತೊರೆಯಬೇಕು – ಹೇಳಿಕೆ

***● ನಮ್ಮ ರಾಜಕಾರಣಿಗಳು ಈ ಸುದ್ದಿ ಅರ್ಥಮಾಡಿಕೊಳ್ಳುವರೆ ?!***

★★★

ರಾಜ್ಯದ ಎಲ್ಲ ಹಳ್ಳಿಗಳಿಗೂ ಮೊಬೈಲ್ ಸಂಪರ್ಕ – ಪತ್ರಿಕೆ

***● ಪಾಪ !!***

★★★

ಮೃತ ವ್ಯಕ್ತಿಗಳಿಗೂ ಪೆನ್ಷನ್? – ಸುದ್ದಿ

***● ಹೃದಯವಂತಿಕೆ ಅಂದರೆ ಇದೇ !!***

★★★

ಈಗ ಮನೆಯಲ್ಲೇ ಕುಳಿತು ಚಿನ್ನದ ಸಾಲ ಪಡೆಯಬಹುದು – ಪತ್ರಿಕೆ

***● ಚಿನ್ನ ಇರಬೇಕಲ್ಲ !?***

★★★

ಅಮೆರಿಕಾದಲ್ಲಿ ಮತ್ತೆ ಶಾರುಖ್ ತಪಾಸಣೆ – ಸುದ್ದಿ

***● ಇದಕ್ಕೂ ಟ್ರಂಪ್ ಅವರಿಗೂ ಯಾವ ಸಂಬಂಧವೂ ಇಲ್ಲವಂತೆ !!***

★★★

ಮೇಲಿನ ಸುದ್ದಿಗೂ ಭಾರತ ವನಿತೆಯರ ಹಾಕಿ ಪರಾಜಯಕ್ಕೂ ಯಾವ ಅಪಾರ್ಥವೂ ಇಲ್ಲವಂತೆ !!

★★★

# “ನಮ್ಮ ನಿಮ್ಮಲ್ಲಿ”

ಎಪ್ಪತ್ತರ ದಶಕದ ಮಧ್ಯಭಾಗ. ಆಗತಾನೆ ನಾನು ಪೀಣ್ಯದಲ್ಲಿ ಒಂದು ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸಿ ಹೆಣಗಾಡುತ್ತಿದ್ದೆ. ಸಣ್ಣ ಕೈಗಾರಿಕೆ ಎಂದರೆ ಹೆಣಗಾಟ ಎಂಬ ಸುಲಭ ಸೂತ್ರದ ಅರಿವು ನಮಗೆಲ್ಲಾ ಮೂಡತೊಡಗಿತ್ತು. ಹತ್ತಿರದಲ್ಲಿದ್ದ ದೊಡ್ಡ ಕೈಗಾರಿಕೆಗಳೇ ನಮ್ಮ ಗ್ರಾಹಕರು. ಅಲ್ಲಿನ ಪರ್ಚೇಸ್ ಆಫೀಸರುಗಳ ಹತ್ತಿರ ಹೋಗಿ ಅವರ ಬಾಗಿಲು ಕಾದು, ಗೋಗರೆದು ಕೊನೆಗೆ ನಮ್ಮ ಕೈಗಾರಿಕೆ ತಯಾರಿಸಿದ ಬಿಡಿಭಾಗಗಳಿಗೆ ಒಂದು ಆರ್ಡರ್ ಗಳಿಸಿ, ಫ್ಯಾಕ್ಟರಿಗೆ ಹಿಂತಿರುಗುತ್ತಿರುವಾಗ ಕಣ್ಣಿಗೆ ಬಿದ್ದ ಕಾಮತ್ ಕಾಫಿ ಹೌಸಿನಲ್ಲಿ ಕುಳಿತು ಬೆವರೊರೆಸಿಕೊಂಡು ಒಂದು ಕಪ್ ಕಾಫಿ ಆರ್ಡರ್ ಮಾಡುವಾಗ ಏನೋ ಒಂದು ದಿಗ್ವಿಜಯ ಸಾಧಿಸಿದ ಭಾವನೆ ಮನವನ್ನು ಆವರಿಸಿರುತ್ತಿತ್ತು. ಹೀಗೆ ಗಳಿಸಿದ ಆರ್ಡರನ್ನು ಪೂರ್ಣಗೊಳಿಸುವುದೇ ಒಂದು ಗೋಳಿನ ಕಥೆ. ಬೆಳಗ್ಗೆ ಕೆಲಸದ ಪ್ರಾರಂಭದ ವೇಳೆಗೆ ಬರಬೇಕಾದ ಕೆಲಸಗಾರರೆಲ್ಲರೂ ಬಂದರೆ ಅದೇ ಪುಣ್ಯ ಎನ್ನುವಂತಹ ದಿನಗಳು ಅವು. ಇದರ ಮೇಲೆ ಪವರ್ ಕಟ್ ನ ಹಾವಳಿ. ಇದನ್ನೆಲ್ಲಾ ನಿಭಾಯಿಸಿ ಗ್ರಾಹಕನ ಆರ್ಡರ್ ಅನ್ನು ಪೂರೈಸಿ ಅವನಿಗೆ ಬಿಲ್ ಕೊಟ್ಟು ಪೇಮೆಂಟ್ ಕೇಳುಕ್ಕೆ ಹೋದಾಗ, ‘‘ಏನ್ರೀ? ಪೇಮೆಂಟ್ ಬೇರೆ ಕೇಳುಕ್ಕೆ ಬಂದ್ಬಿಟಿದ್ದೀರ. ಮೊನ್ನೆ ತಾನೆ ಕಾಡಿಸಿ, ಪೀಡಿಸಿ ಆರ್ಡರ್ ತಗೊಂಡು ಹೋದ್ರಿ. ಈಗ ಪೇಮೆಂಟೂ ಬೇಕು ಅಂತೀರಲ್ರೀ. ಯಾವುದಾದರೂ ಒಂದು ಮಾತ್ರ ಕೊಡಬಹುದಪ್ಪ . ಸುಮ್ನೆ ಮುಂದಿನ ಕೆಲಸ ನೋಡ್ಕೋ ಹೋಗ್ರಿ. ಇನ್ನೂ ಒಂದು ಆರ್ಡರ್ ಬೇಕು ಅಂದ್ರೆ ಮುಂದಿನ ವಾರ ಬನ್ನಿ ನೋಡೋಣ’’ ಅನ್ನುತ್ತಿದ್ದ ಆ ಆಫೀಸರ್. ಯಾಕೆ ಹೇಳುಕ್ಕೆ ಬಂದೆ ಅಂದ್ರೆ, ಹಣಕಾಸಿನ ನಿರ್ವಹಣೆಯ ಬಗ್ಗೆ ದಾರುಣ ಸತ್ಯಗಳನ್ನು ಇದುರಿಸಬೇಕಾಗಿದ್ದ ಆ ಕೈಗಾರಿಕಾ ಸಮಾಜದಲ್ಲಿ ಈ ಸತ್ಯಗಳನ್ನು ಅವಲೋಕಿಸುವ ದೃಷ್ಟಿಕೋನಗಳೂ ಅಷ್ಟೇ ವೈವಿಧ್ಯಮಯವಾಗಿದ್ದವು ಎನ್ನುವ ಸಂಗತಿಯನ್ನು ಉದಾಹರಣಾಪೂರ್ವಕವಾಗಿ ನಿಮ್ಮ ಮುಂದಿಡುವ ಪ್ರಯತ್ನ ಇದು.

ಮೊದಲಿಗೆ ನಮ್ಮ ಬಲ ಪಕ್ಕದ ಷಡ್ಡಿನ ಚೆಂಗಪ್ಪ . ಅವನು ತೀರಾ ಕನ್ಸರ್ವೇಟಿವ್. ಚಿಕ್ಕಂದಿನಲ್ಲಿ ಅವನಿಗೆ ‘‘ಸಾಲವನು ಕೊಂಬಾಗ....’’ ಎಂಬ ಸರ್ವಜ್ಞನ ಪದವನ್ನು ಅವನ ತಂದೆತಾಯಿಯರು ಚೆನ್ನಾಗಿ ಮನದಟ್ಟು ಮಾಡಿಸಿದ್ದರು ಅಂತ ಕಾಣುತ್ತೆ. ಅವನಿಗೆ ಸಾಲವೆಂದರೆ ಆಗದು. ಯಾವುದೋ ದೊಡ್ಡ ಕಾರ್ಖಾನೆಯಲ್ಲಿ ಜನರಲ್ ಮ್ಯಾನೇಜರಾಗಿದ್ದ ಅವನು ಆ ಕೆಲಸಕ್ಕೆ ರಾಜೀನಾಮೆ ನೀಡಿ, ತನ್ನ ಪಿ ಎಫ್ ಹಣದಿಂದ ಈ ಕಾರ್ಖಾನೆ ಹೂಡಿದ್ದ. ಸಣ್ಣ ಮಟ್ಟದ ಉದ್ಯಮದಲ್ಲೇ ಅವನಿಗೆ ತೃಪ್ತಿ. ಗ್ರಾಹಕರಿಂದ ಹಣ ಬರುವುದು ನಿಧಾನವಾದರೆ ಇದ್ದ ಇಬ್ಬರು ಕೆಲಸಗಾರರಿಗೂ ಸಂಬಳ ನಿಧಾನವಾಗುತ್ತಿತ್ತು. ಹಾಗಾಗಿ ಅನೇಕ ಕೆಲಸಗಾರರು ಹಲವೇ ತಿಂಗಳುಗಳಲ್ಲಿ ಕೆಲಸ ಬಿಟ್ಟು ಹೋಗುತ್ತಿದ್ದರು. ‘‘ಹೋದರೆ ಹೋಗಲಿ, ನಾನೇ ಕೆಲಸ ಮಾಡಿದರಾಯಿತು. ಬ್ಯಾಂಕ್ ಸಾಲ ಮಾತ್ರ ಬೇಡ’’ ಎನ್ನುತ್ತಾ ಚೆಂಗಪ್ಪ ತನ್ನ ಜೀವಯಾತ್ರೆಯನ್ನು ಸಮಾಧಾನದಿಂದ ಸಾಗಿಸುತ್ತಿದ್ದ. ಕೊನೆಗೆ ವಯಸ್ಸಾಗಿ ನಿವೃತ್ತಿ ಹೊಂದುವ ಹೊತ್ತಿಗೆ ಅವನು ಒಂದು ಆಟೋರಿಕ್ಷಾ ಖರೀದಿಸಿ ಪ್ರೈವೇಟ್ ರಿಜಿಸ್ಟ್ರೇಷನ್ ಮಾಡಿಸಿ ಅದನ್ನೇ ಖಾಸಗೀ ವಾಹನವಾಗಿ ಬಳಸುತ್ತಿದ್ದ. ಒಮ್ಮೆ

ಅವನು ತನ್ನ ಪತ್ನಿಯೊಡನೆ ನಮ್ಮ ಮನೆಗೆ ಬಂದು, ಹರಟೆಹೊಡೆದು, ಹಿಂತಿರುಗುವಾಗ , ಆಕೆ, ''ನೋಡು ಶಿವ, ನಾನು ಹೇಗೆ ರಾಣಿಯಂತೆ ಹಿಂದೆ ಕುಳಿತು ಹೋಗುತ್ತಿದ್ದೇನೆ'' ಅಂತ ನಗಾಡಿದ್ದು ಇಂದೂ ನೆನಪಿನಲ್ಲಿದೆ. ಚೆಂಗಪ್ಪನ ಎಕನಾಮಿಕ್ ಪಾಲಿಸಿಯನ್ನ ಹಾಸಿಗೆ ಇದ್ದಷ್ಟು ಕಾಲುಚಾಚು ಎಂಬ ಗಾದೆಯ ಆಧಾರದಮೇಲೆ, ''ಕಾಲುಚಾಚು'' ಎಕಾನಮಿ ಎಂದು ಕರೆಯೋಣ.

ನಮ್ಮ ಎಡ ಪಕ್ಕದ ಷೆಡ್ಡಿನಲ್ಲಿದ್ದ ಗುರುಬಚನ್ ಸಿಂಗನ ದೃಷ್ಟಿಕೋನವೇ ಬೇರೆ. ಆಸ್ತಿ ಮಾಡಬೇಕಾದರೆ ಸಾಲ ಮಾಡದೇ ಸಾಧ್ಯವಿಲ್ಲ ಎಂಬ ಮಾತನ್ನು ಆತ ಖಚಿತವಾಗಿ ನಂಬಿದ್ದ. ಸಾಲವನ್ನು ತೀರಿಸುವುದರಲ್ಲಿಯೂ ಸಹಾ ಅವನಿಗೆ ಅಷ್ಟೇ ನಿಯತ್ತು. ಅವನ ಕಾರ್ಖಾನೆಯಲ್ಲಿ ಬೃಹತ್ ಯಂತ್ರಗಳಿದ್ದವು. ಕೆಲಸಗಾರರೆಲ್ಲಾ ಮಲೆಯಾಳಿಗಳು. ಆಯುಧ ಪೂಜೆಯ ದಿನ ಎಲ್ಲರಿಗೂ ಹೊಸ ಯೂನಿಫಾರಂ, ಬೋನಸ್ ಇವೆಲ್ಲಾ ತಪ್ಪದೇ ಕೊಡುತ್ತಿದ್ದುದರಿಂದ ಅವನ ಕಾರ್ಖಾನೆಯಲ್ಲಿ ಕೈಗಾರಿಕಾ ಸಾಮರಸ್ಯ ಚೆನ್ನಾಗಿಯೇ ಇತ್ತು. ಮೂರು ತಲೆಮಾರುಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದರಿಂದ ಅವನಿಗೆ ಕನ್ನಡ ಬಹು ಚೆನ್ನಾಗಿ ಬರುತ್ತಿತ್ತು. ಒಂದು ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಬಿ.ವಿ.ಕಾರಂತರ ''ಸತ್ತವರ ನೆರಳು'' ಪ್ರದರ್ಶನವಿತ್ತು. ಗುರುಬಚನ್ ಮತ್ತು ನಾನು ಒಟ್ಟಿಗೆ ನಾಟಕವನ್ನು ನೋಡುವ ಹಂಚಿಕೆ ಹಾಕಿದ್ದೆವು. ನನ್ನ ಮೊಟಾರ್ ಸೈಕಲ್ ಕೆಟ್ಟು ಕೂತದ್ದರಿಂದ ಅವನ ಕಾರಿನಲ್ಲೇ ನಾವು ಹೋಗುವುದಿತ್ತು. ಪೀಣ್ಯದಿಂದ ಹೊರಟು, ದಾರಿಯಲ್ಲಿ ನಮ್ಮ ಮನೆಗೆ ಬಂದು ಮುಖತೊಳೆದು ಕಾಫಿ ಕುಡಿದು ಆಮೇಲೆ ಕಲಾಕ್ಷೇತ್ರಕ್ಕೆ ಹೋಗೋಣ ಅಂದುಕೊಂಡು ನಮ್ಮ ಮನೆಗೆ ಬಂದೆವು. ನಾನು ಮುಖತೊಳೆದು ಬಂದನಂತರ, ''ಗುರು, ನೀನೂ ಮುಖತೊಳೆದು ಬಾರೋ'' ಅಂತ ಹೇಳಿದೆ. ಸೋಫಾದಮೇಲೆ ಕುಳಿತಿದ್ದವನು ಅಲುಗಾಡಲಿಲ್ಲ. ''ನಾನು ಮುಖ ತೊಳೆಯೋದು, ರಾತ್ರಿ ಮಲಗುವಾಗಲೇ. ಈ ಟರ್ಬನ್ ಬಿಚ್ಚಿ, ಗಡ್ಡ, ತಲೆಗೂದಲು ಇವುಗಳನ್ನು ತೊಳೆಯಲು ಕನಿಷ್ಠಪಕ್ಷ ಅರ್ಧಗಂಟೆಯಾದರೂ ಬೇಕಾಗುತ್ತೆ'' ಅಂತ ನಗುತ್ತಾ ಹೇಳಿದ. ಅವನು ನಿವೃತ್ತಿ ಹೊಂದುವ ಸಮಯಕ್ಕೆ ಅವನ ಬಳಿ ಟೋಯಟ ಕಾರು, ಪದ್ಮನಾಭನಗರದಲ್ಲಿ ಒಂದು ಮನೆ, ಮದ್ದೂರಿನಲ್ಲಿ ಒಂದು ಫಾರ್ಮ್ ಹೌಸ್ ಇದ್ದವು. ಈತನ ಎಕನಾಮಿಕ್ ಪಾಲಿಸಿಯನ್ನ ''ಬೆಳವಣಿಗೆ'' ಎಕಾನಮಿ ಎಂದು ಹೆಸರಿಸೋಣ.

ನಮ್ಮ ಕಾರ್ಖಾನೆಗೆ ಇದಿರಿನಲ್ಲಿದ್ದ ಪ್ರಭೃತಿಯ ಹೆಸರು ಪೊಟ್ಟಮರಿ ಕಣ್ಣನ್. ಬಹಳ ಉಢಾಫೆ ಮನುಷ್ಯ ಈತ. ನಾವು ಸಾವಿರದ ಮಾತುಗಳನ್ನಾಡುತ್ತಿರುವಾಗ ಈತ ಲಕ್ಷದ ಮಾತು, ನಾವು ಲಕ್ಷ ಮಾತನಾಡುವ ಹಂತ ತಲುಪಿದಾಗ ಈತ ಹತ್ತು ಕೋಟಿ ಹೀಗೆ ಮಾತನಾಡುತ್ತಿದ್ದ. ಈತ ಸಾಲ ತೆಗೆದಿದ್ದ ಮೂರು ಬ್ಯಾಂಕುಗಳ ಮ್ಯಾನೇಜರುಗಳು ಹೃದಯಾಘಾತದಿಂದ ಅಸು ನೀಗಿದ್ದರು. ಹತ್ತು ವರ್ಷದಲ್ಲಿ ಮೂರು ಬಾರಿ ಇವನ ಕಾರ್ಖಾನೆಯಲ್ಲಿ ಮುಷ್ಕರ, ಮ್ಯಾನೇಜರುಗಳ ಮೇಲೆ ಲೇಬರ್ ಯೂನಿಯನ್ನಿನವರ ಹಲ್ಲೆ ಇವೆಲ್ಲಾ ನಡೆದಿದ್ದವು. ಮೂರನೆಯ ಮುಷ್ಕರದ ಸಮಯದಲ್ಲಿ ಕಣ್ಣನ್ ಜಿನೀವಾದಲ್ಲಿ ಹಾಲಿಡೇ ನಡೆಸಿದ್ದ ಎಂದು ಗಾಳಿ ಸುದ್ದಿ ಇತ್ತು. ಒಟ್ಟಿನಲ್ಲಿ ಇವನ ಎಕನಾಮಿಕ್ ಶೈಲಿಯನ್ನು ''ಮಲ್ಯ'' ಎಕಾನಮಿ ಅಂತ ಧಾರಾಳವಾಗಿ ಕರೆಯಬಹುದು.

ಈಗ ಈ ಕಾಲಾಂತರದಲ್ಲಿ ಇದನ್ನೆಲ್ಲಾ ನೆನಪಿಸಿಕೊಂಡಾಗ, ನಾವೆಲ್ಲಾ ಆಡಿದ ನಾಟಕಗಳನ್ನು ನೋಡಿ ನಗು ಬರುತ್ತದೆ. ಕಣ್ಣನ್ ಬಗ್ಗೆ ನಾನು ಹೇಳಿದ್ದು ನೋಡಿ ಅವನು ಒಬ್ಬ ಖಳನಾಯಕನಂತೆ ನಿಮಗೆ ಕಂಡಿದ್ದರೆ, ಅದು ಕೇವಲ ಅರ್ಧ ಸತ್ಯವಾದೀತು. ಆತನ ಕಾರ್ಯವೈಖರಿಯಿಂದ ಅನೇಕ ಕೆಲಸಗಾರರು, ಅನೇಕ ಪೂರೈಕೆದಾರರು ನೆಲ ಕಚ್ಚಿದ್ದು ನಿಜ. ಆದರೆ ನಮ್ಮ ಸರ್ದಾರ್ಜಿ ದೃಷ್ಟಿಯಲ್ಲಿ ಆತ ಆಪದ್ಬಾಂಧವ. ಅದಾದದ್ದು ಹೀಗೆ. ಸರ್ದಾರ್ಜಿಯ ಫ್ಯಾಕ್ಟರಿ ಚೆನ್ನಾಗಿ ನಡೆಯುತ್ತಿದ್ದರೂ, ಅವನಿಗೆ ವಯಸ್ಸಾಗುತ್ತಿದ್ದಂತೆ ಅವನ ಉದ್ಯಮವನ್ನು ಕೈಹಿಡಿದು ನಡೆಸಲು ಅವನ ಮಗ ಮುಂದೆ ಬರಲಿಲ್ಲ. ಅಮೆರಿಕೆಯಲ್ಲಿ ಆತ ಹಿಸ್ಟರಿ ಪ್ರೊಫೆಸರಾಗಿ ಯಾವುದೋ ಯೂನಿವರ್ಸಿಟಿ ಸೇರಿಬಿಟ್ಟಿದ್ದ. ಸ್ವಲ್ಪ ಸಮಯದಲ್ಲಿ ಸರ್ದಾರಿಣಿ ಸಹಾ ತೀರಿಕೊಂಡಳು. ಗುರುಬಚನ್‌ಗೆ ಉತ್ಸಾಹ ಕುಂದಿತು. ಫ್ಯಾಕ್ಟರಿಯನ್ನ ಮಾರಿ ನೆಮ್ಮದಿಯ ಜೀವನವನ್ನು ನಡೆಸುವ ನಿರ್ಧಾರ ಮಾಡಿದ. ಆದರೆ ಆ ಸಮಯಕ್ಕೆ ಸರಿಯಾಗಿ ಮಾರುಕಟ್ಟೆಯ ಹಿಂಜರಿತ ಪ್ರಾರಂಭವಾಗಿ ಅವನ ಫ್ಯಾಕ್ಟರಿಯನ್ನು ಕೊಳ್ಳಲು ಯಾರು ಮುಂದೆ ಬರಲಿಲ್ಲ. ಆ ದಿನಗಳು ನನಗೆ ಚೆನ್ನಾಗಿ ನೆನಪಿದೆ. ಅವನು ನನ್ನ ಆಫೀಸಿಗೆ ಬಂದು, ಖಿನ್ನನಾಗಿ ಕುಳಿತು ''ಏನು ಮಾಡಲಿ ಶಿವು, ರಾತ್ರಿ ಹೊತ್ತು ನಿದ್ದೇನೇ ಬರೋದಿಲ್ಲ. ಬೆಳಗಾದರೆ ಅಸಿಡಿಟಿ.'' ಅಂತೆಲ್ಲಾ ಗೋಳಾಡುತ್ತಿದ್ದ. ನಾನು ''ಹನುಮಾನ್ ಚಾಲೀಸ ಹೇಳು, ನಿದ್ದೆ ಬರುತ್ತೆ'' ಅಂತ ಸಲಹೆ ಕೊಡುತ್ತಿದ್ದೆ. ಹೀಗೆ ಒಮ್ಮೆ ಮಾತನಾಡುತ್ತಾ ಕುಳಿತಿದ್ದಾಗ ಇದಿರು ಫ್ಯಾಕ್ಟರಿಯ ಕಣ್ಣನ್ ಬಂದು ನಮ್ಮೊಂದಿಗೆ ಕೂತ. ನಾನು ಅವನಿಗೆ ಸರ್ದಾರ್ಜಿಯ ಬವಣೆಯನ್ನು ತಿಳಿಸಿದೆ. ಅವನು ಸರ್ದಾರ್ಜಿಯನ್ನು ಕುರಿತು, ''ಕಾರ್ಖಾನೆಗೆ ಎಷ್ಟು ಬೆಲೆ ಅಪೇಕ್ಷಿಸ್ತಾ ಇದ್ದೀಯಾ?'' ಅಂತ ಕೇಳಿದ. ಅದಕ್ಕೆ ಅವನು ''ಮೂರು ಕೋಟಿ, ಆದರೆ ಇಪ್ಪತ್ತು ಲಕ್ಷ ಕಡಿಮೆಯಾದರೂ ಅಡ್ಡಿಯಿಲ್ಲ. ಕೊಟ್ಟು ಕೈತೊಳೆದುಕೊಂಡು ಬಿಡ್ತೇನೆ'' ಅಂದ. ಮಾರನೆಯ ದಿನ ಕಣ್ಣನ್ ಎರಡೂಮುಕ್ಕಾಲು ಕೋಟಿಗೆ ಅವನ ಫ್ಯಾಕ್ಟರಿಯನ್ನ ಕೊಳ್ಳುವ ಕರಾರಿಗೆ ಸಹಿಹಾಕಿ, ಒಂದು ತಿಂಗಳಲ್ಲೇ ವ್ಯಾಪಾರವನ್ನು ಪೂರೈಸಿದ್ದ.

ಚೆಂಗಪ್ಪ, ಸರ್ದಾರ್ಜೀ ಮತ್ತು ಕಣ್ಣನ್ ಇವರುಗಳಲ್ಲಿ ಯಾರ ಎಕಾನಮಿ ದೇಶಕ್ಕೆ ಸೂಕ್ತ ಎಂಬ ನಿರ್ಧಾರ ನಿಮಗೇ ಬಿಟ್ಟಿದ್ದು.

**ಶಿವಕುಮಾರ್**

ನಮ್ಮ ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂದರೂ 1950ರವರೆಗೂ ಬ್ರಿಟಿಷ್ ನಾಣ್ಯಗಳೇ ಬಳಕೆಯಲ್ಲಿದ್ದವು. 1950ರಲ್ಲಿ ಅಶೋಕ ಚಕ್ರವಿರುವ ಮುಂಭಾಗ ಮತ್ತು ಇಂಗ್ಲಿಷಿನಲ್ಲಿ ಗವರ್ನಮೆಂಟ್ ಆಫ್ ಇಂಡಿಯಾ ಎಂಬ ಬರಹವುಳ್ಳ ರೂಪಾಯಿ, ಅರ್ಧರೂಪಾಯಿ ಮತ್ತು ಕಾಲು ರೂಪಾಯಿಗಳು ನಾಣ್ಯಗಳು ಅಚ್ಚಾದವು

# ಅಜ್ಜಿಯ ಯುನೀಕ್ ಎಕನಾಮಿಕ್ಸ್

- ಇ.ಆರ್. ರಾಮಚಂದ್ರನ್

**ನ**ನ್ನ ಅಣ್ಣನ ಮಗ ಗೋಪಿನಾಥ ಎರಡು ವರ್ಷದ ಹಿಂದೆ ಚಿಕಾಗೊ ನಗರದಲ್ಲಿ ಅರ್ಥಶಾಸ್ತ್ರದ ಪ್ರೊಫೆಸರ್ ಆಗಿ ಅಮೆರಿಕಕ್ಕೆ ಹೋಗುವುದಕ್ಕೆ ಮುಂಚೆ ನಮ್ಮ ಮನೆಗೆ ಬಂದಿದ್ದ. ಊಟದ ಮದ್ಯೆ ಗೋಪಿ ಎಕನಾಮಿಕ್ಸ್, ಇನ್ಫ್ಲೇಷನ್, ರಿಸೆಷನ್, ಆರ್ಥಿಕ, ಮುಗ್ಗಟ್ಟು, ಬಡ್ಜೆಟ್ ಸೋರುವಿಕೆ ಇದೆಲ್ಲದರ ಬಗ್ಗೆ ಚೆನ್ನಾಗಿ ಕ್ಲಾಸು ತೊಗೊಂಡ.

ಎರಡು ವರ್ಷದ ಮೇಲೆ ಭಾರತಕ್ಕೆ ರಜಕ್ಕೆ ಬಂದು ಸಂಸಾರ ಸಮೇತನಾಗಿ ಮನೆಗೆ ಬಂದಾಗ ಊಟಕ್ಕೆ ಎಬ್ಬಿಸಿದೆವು.

'ಅಜ್ಜಿ ಮನೆ ಊಟ ನನಗೆ ಬಹಳ ಇಷ್ಟ. ಬಹಳ ರುಚಿ ಮತ್ತು ಎಲ್ಲವೂ ಯಥೇಚ್ಛ! ಅಜ್ಜಿಯ ಕೈ ಒಂದು ಅಕ್ಷಯ ಪಾತ್ರೆ' ಎಂದು ಗೋಪಿ ಹೊಗಳ್ದ. 'ಅದೆಲ್ಲಾ ಯಾವ ಕಾಲದಲ್ಲೋ ಆಯ್ತು ಗೋಪಿ! ಈಗ ಎಲ್ಲಾದರ ಬೆಲೆಯೇರಿ ಮರ ಹತ್ತಿ ಕೂತಿದೆ. ಇನ್ಫ್ಲೇಷನ್ ರೋಗ ಬಡಿದಿದೆ ಅಂತಾರೆ.'

ಊಟಕ್ಕೆ ಕೂತಾಗ ಗೋಪಿ, 'ಅಜ್ಜಿ, ಊಟದ ತಟ್ಟೆ ಬದಲಾಯಿಸಿದೀರಾ?' ಅಂದ.

ಹೂನಪ್ಪ! ಚಿಕ್ಕದಾಗಿದೆ. ನಮ್ಮ ದೇಶದ ಸ್ಥಿತಿ ಚೆನ್ನಾಗಿ ಹೋಗುತ್ತಿದೆ. ಆದರೆ ಜನಗಳ ಪಾಡು ಇನ್ನೂ ನಾಯಿ ಪಾಡೇ. ನಿನಗೆ ಊಟದಲ್ಲಿ ವ್ಯತ್ಯಾಸ ಕಂಡು ಬಂದ್ರೆ ಸ್ವಲ್ಪ ಹೊಂದಿಕೊಂಡು ಹೋಗು ಗೋಪಿ.'

'ಚಪ್ಪಾತಿ ಸೈಜು ಕೂಡಾ ಕಡಿಮೆ ಆದ ಹಾಗಿದೆಯಲ್ಲಾ ಅಜ್ಜಿ?'

'ಹೌದು. ರಿಸೆಷನ್ನಿಂದ.. ಅದರ ಜೊತೆ ಪಲ್ಯದ ಸೌಟು, ಅನ್ನದ ಕೈ ಎಲ್ಲಾ ಒಂದೆರೆಡು ಸುತ್ತು ಕಡಿಮೆ ಮಾಡಿದೀವಿ. ನೀನು ಹೋದ ಸಲ ಹೇಳಿದ್ದೆ ನೋಡು, ಸರ್ಕಾರ ನಡೆಸುವುದಕ್ಕೆ ಜನಗಳು ಕೂಡಾ ತಮಗೆ ಯಾವ ರೀತಿ ಆಗುತ್ತೋ ಹಾಗೆ ಸಹಾಯ ಮಾಡಬೇಕೆಂದು.... ನಮಗೆ 9000 ರೂಪಾಯಿ ಕೋಟಿ ಸಾಲ ವಾಪಸ್ಸು ಬರಬೇಕಾಗಿತ್ತು. ಬ್ಯಾಂಕಿಗಳಿಗೆಲ್ಲಾ ನಾಮ ಹಾಕಿ ಸಾಲ ವಾಪಸ್ಸು ಮಾಡೋದಿರ್ಲಿ, ಬಡ್ಡಿಕೂಡ ಕೊಡದೆ ಇಂಗ್ಲೆಂಡಿಗೆ ಓಡೋಗಿದ್ದಾನೆ ಭಡ್ಡಿ ಮಗ! ಅವನ ಹತ್ರ'ನೊ ಯುವರ್ ಕಸ್ಟಮರ್ (ಕೆ ವೈಸಿ) ಫಾರ್ಮನ ಸಾಲ ಕೊಡುವುದಕ್ಕೆ ಮುಂಚೆ ಬರೆಸಿ ಕೊಂಡ್ರೋ ಇಲ್ವೊ ಗೊತ್ತಿಲ್ಲ! ಅವನು ಅಲ್ಲಿಂದ ಕದಲ್ತಾ ಇಲ್ಲ, ನಮ್ಮ ಸಾಲ ತೀರ್ಸುವ ಹಾಗಿಲ್ಲ. ನಷ್ಟ ತುಂಬುವುದಕ್ಕೆ ನಾವು ಸಾಮಾನ್ಯ ಜನರು ಹೊಟ್ಟೆಬಟ್ಟೆ ಕಟ್ಟಿಟ್ಟು ಗವರ್ನಮೆಂಟಿಗೆ ಅಲ್ಪ ಸ್ವಲ್ಪ ಸಹಾಯ ಮಾಡ್ತಿದೀವಿ.

'ಎಂಥ ಕಿಲಾಡಿ.... ತರಕಾರಿ ಈಗ ಕಡಿಮೆ ತಿನ್ತಿದೀರಾ?'

'ಏನು ಮಾಡೋದು? ಇವತ್ತು ನೀನು ಬಂದಿದೀಂತ ಒಂದಿಷ್ಟು ಹುರುಳಿಕಾಯಿ ಪಲ್ಯ ಮಾಡಿದೀನಿ. ಎರಡು ತಿಂಗಳಿಂದ ಹುರುಳಿಕಾಯಿ 150 ರೂ ಕಿಲೊ. ಬೆಲೆ ಅಟ್ಟಕ್ಕೆ ಹತ್ತಿ ಕೂತಿದೆ. ಈಗೀಗ ನಾವು ತಿನ್ನೋದು ಬರೀ ಸಪ್ಪೆ ಸೊಪ್ಪೆ. ದಂಟಿನ ಸೊಪ್ಪು, ಮೆಂತ್ಯದ

ಸೊಪ್ಪು, ಪಾಲಕ್, ಬಸಲೇ ಸೊಪ್ಪು, ಚಕ್ಕೋತ್ನೆ ಸೊಪ್ಪು. ಸೊಪ್ಪಿನಲ್ಲಿ ಹುಳಿ, ಸಾರು ಮಾಡ್ತಿನಿ, ಪುದೀನ ಅಥವಾ ಕೊತ್ತಂಬರಿ ಸೊಪ್ಪಿನಲ್ಲಿ ಚಟ್ನಿ. ತರಕಾರಿ ನಾವು ತರಲ್ಲ ಈಗ. ಮೂರು ಹೊತ್ತೂ ಸೊಪ್ಪು ಮೆಯ್ತಿವಿ! ನಮ್ಮ ರಕ್ತದಲ್ಲಿ ಹೆಮೊಗ್ಲಾಬಿನ್ ತುಂಬಿ ತುಳುಕುತಾ ಇರ್ಬೇಕು! ತೊಗರಿ ಬೇಳೆ, ಹೆಸರುಬೇಳೆ, ಕಡಲೇ ಬೇಳೆ ಎಲ್ಲಾ ಚಿನ್ನ, ಬೆಳ್ಳಿ ತರಹ ಆಗಿದೆ. ಹುಡುಕುದ್ರೂ ಸಿಗೊಲ್ಲ. ಕಲ್ಯಾಣ್ ಜ್ಯುವೆಲರ್ಸ್, ಭೀಮ ಜ್ಯುವೆಲರ್ಸ್, ಕೃಷ್ಣಯ್ಯ ಚೆಟ್ಟಿ ಇವರೆಲ್ಲಾ ಚಿನ್ನ, ಬೆಳ್ಳಿ ವ್ಯಾಪಾರ ಬಿಟ್ಟು ಬೇಳೆಗೆ ಧುಮುಕಿದ್ರೆ ಆಶ್ಚರ್ಯವಾಗಲ್ಲ. ಸುಮ್‌ಸುಮ್ಮನೆ ಜಾಸ್ತಿ ದುಡ್ಡು ಕೊಟ್ಟು ಬೇಳೆ ತರಬೇಡಿ, ಬ್ಲಾಕ್ನಲ್ಲಿ ಮಾರೋವ್ರಿಗೆ ಬುದ್ದಿ ಕಲಿಸಿ ಅಂತ ನಮ್ಮ ಎಫ್ ಎಮ್ ಅರುಣ್ ಜೆಯ್ಟ್ಲಿ ಆಗಾಗ್ಗೆ ಸಲಹೆ ಕೊಡ್ತಾ ಇರ್ತಾರೆ.'

'ಅಜ್ಜಿ! ತರಕಾರಿ ಚೆನ್ನಾಗಿ ತಿನ್ನಬೇಕು. ಬೇಳೆಲಿ ಪ್ರೋಟೀನ್ ಸಿಗುತ್ತೆ. ಬೆಳೆಯುವ ಮಕ್ಕಳಿಗೆ ಅವು ಬಹಳ ಮುಖ್ಯ. ಅದಿಲ್ದೇ ಮಕ್ಕಳು ಪೀಚು ಪೀಚಾಗಿದಾರೆ. ದೊಡ್ಡವರಿಗೂ ಶಕ್ತಿ ಕೊಡುತ್ತೆ.... ಹಣ್ಣು ತಿನ್ತಿದೀರೋ ಇಲ್ವೊ?'

ಟೊಮೇಟೋ, ಆಪಲ್ ಈಗ ಒಂದೇ ಬೆಲೆಯಾಗಿದೆ. ಕಿಲೋಗೆ 150 ರೂಪಾಯಿ. ಆಪಲ್ ಬೆಲೆ ಇಳಿಸಕ್ಕೆ ಆಗ್ಲಿಲ್ಲ. ಕಿಲೋಗೆ ಇಪ್ಪತ್ತು ರೂಪಾಯಿ ಇದ್ದ ಟೊಮೇಟೋವನ್ನ ಆಪಲ್ ಬೆಲೇಗೆ ಏರ್ಸಿದಾರೆ. ಏರಡೂ ಈಗ ಈಕ್ವಲ್ ಈಕ್ವಲ್!

'ಹೌದಾ?! ನಿಮ್ಮ ಎಕನಾಮಿಕ್ಸ್ ನನಗಂತೂ ಅರ್ಥವಾಗಲ್ಲ! ಹಣ್ಣು ಹಂಪಲು ಆರೋಗ್ಯಕ್ಕೆ ಬಹಳ ಮುಖ್ಯ, ಅಜ್ಜಿ. ಗುಡ್ ಹೆಲ್ತ್ ಡ್ರೈವ್ಸ್ ಕನ್‌ಟ್ರೀಸ್ ಎಕಾನಮಿ.'

'ನಿಜ. ಅದು ಪ್ಲಾನ್ 'ಎ' ಇರ್ಬೇಕು! ನಮಗೆ ಗವರ್ನಮೆಂಟು ಪ್ಲಾನ್ 'ಬಿ' ಕೊಟ್ಟಿದ್ದಾರೆ. ಪ್ಲಾನ್ 'ಬಿ' ಏನಪ್ಪಾಂದ್ರೆ, ನಮ್ಮ ಪ್ರಧಾನಿಯವರು ಹೇಳಿಕೊಟ್ಟ ಹಾಗೆ ನಾಲ್ಕೈದು ಯೋಗಾಸನ ಮಾಡಿದ್ರೆ ಅದರಿಂದ ಹೊಟ್ಟೆ ಹಸಿವೇ ಅಗೊಲ್ವಂತೆ ಕಣೋ! ಅಮೆರಿಕದಲ್ಲಿ ನಮ್ಮ ಪ್ರಧಾನಿ ಮೋದಿಯವರಿಗೆ ಒಬಾಮ ಕೊಟ್ಟ ಭರ್ಜರಿ ಭೋಜನಕೂಟದಲ್ಲಿ 56 ಬಗೆಯ ತಿನಿಸುಗಳು ಮಾಡಿದ್ದರಂತೆ! ಮೋದಿಯವರು ಅಲ್ಲಿಗೆ ಹೋಗುವ ಮುಂಚೆ ಅವರ ಫೇವರೈಟ್ ಯೋಗಾಸನಗಳನ್ನು ಮಾಡಿ ಹೋದಾಗ ಅಲ್ಲಿ ಎಲ್ಲರೂ ಸಿಕ್ಕಾಪಟ್ಟೆ ಮೇಯುತ್ತಿದ್ದಾಗ ಇವರು ಮಾತ್ರ ಒಂದು ಅಗಳೂ ತಿನ್ನದೆ, ಒಂದು ತೊಟ್ಟು ನೀರೂ ಬಾಯಿಗೆ ಹಾಕದೆ ಅವರ ಮಧ್ಯೆನೇ ಓಡಾಡುತ್ತಿದ್ದರಂತೆ! ಮುಂದಿನ 'ಮನ್ ಕಿ ಬಾತ್' ನಲ್ಲಿ ಮದುವೆ ಮುಂಜಿಗಳಲ್ಲಿ ನಾವು ಅವರ ತರಹ ಬಾಯಿಗೆ ಏನೂ ಹಾಕದೆ ಹೇಗೆ ಓಡಾಡಬಹುದು ಎಂದು ನಮಗೆಲ್ಲಾ ಹೇಳಿಕೊಡ್ತಾರೆ.''

'ಮನ್ ಕೀ ಭಾತ್ ಅಂದ್ರೆ ಏನಜ್ಜಿ? ಏನೇನು ಭಾತ್ ತಿನ್ನಬೇಕೂಂತ ಮನಸ್ಸಿನಲ್ಲಿ ಬರುವ ಆಸೆಗಳಾ?'

'ಭಾತ್ ಅಲ್ಲ ಕಣೋ! ಬಾತ್ ಅದು. ಅಂದ್ರೆ ಮಾತು. ಶುರೂಲಿ ನಾವೂ ಹಾಗೆ ಅಂದುಕೊಂಡಿದ್ವಿ. ಕೇಸರಿ ಭಾತ್, ಟೊಮೆಟೊ ಭಾತ್, ವಾಂಗಿ ಭಾತ್‌ಗಳನ್ನು ಹೇಗೆ ರುಚಿ ರುಚಿಯಾಗಿ ಮಾಡೋದು ಅಂತ ತೋರಿಸಿಕೊಡ್ತಾರೆ ಅಂತ ಅಂದುಕೊಂಡಿದ್ವಿ. ಆಮೇಲೆ ಗೊತ್ತಾಯ್ತು ಅವರ ಮನಸ್ಸಿನಲ್ಲಿದ್ದ ಒಂದೆರೆಡು ಮಾತುಗಳನ್ನು ಆಗಾಗ್ಗೆ ಭಾನುವಾರದ ಬೆಳಿಗ್ಗೆ 11 ಘಂಟೆಗೆ ರೇಡಿಯೋ ಮೂಲಕ ಹಂಚಿಕೊಳ್ತಾರೆ ಅಷ್ಟೆ.'

‘ಅಜ್ಜಿ! ನನಗೆ ಇನ್ನೊಂದು ಅರ್ಥವಾಗಲಿಲ್ಲ... 9000 ಕೋಟಿಯನ್ನು ಬ್ಯಾಂಕುಗಳು ಹೇಗೆ ಹಿಂದು ಮುಂದೆ ನೋಡ್ದೆ ಸಾಲ ಕೊಟ್ರು?’

‘ನೀನು ಅರ್ಥಶಾಸ್ತ್ರದಲ್ಲಿ ಪ್ರವೀಣನಾಗಿ ಹೀಗೆ ಹೇಳ್ತ್ಯಲ್ಲೋ, ಗೋಪಿ! ಸಾಲ ಒಟ್ಟು 9000 ಸಾವಿರ ಕೋಟಿ ಅಲ್ಲ. ಮಿಕ್ಕವರು – ಅದಾನಿ, ಅಂಬಾನಿ, ಲಂಬಾಣಿ ಅಂಥವರು ಒಂದು ಹತ್ತು ಜನ ಸೇರಿ 70,000 ಸಾವಿರ ಕೋಟಿ ಸಾಲ ಮಾಡೀದಾರಂತೆ ನಮ್ಮ ಬ್ಯಾಂಕುಗಳ ಹತ್ರ!’

‘ಲಂಬಾಣಿ ಯಾರು ಅಜ್ಜಿ?’

‘ಇವತ್ತು, ಇಪ್ಪತ್ತು ಮುವತ್ತು ಸಾವಿರಾರು ಕೋಟಿ ಸಾಲ ತೊಗೊಂಡು ನಾಳೆ ಅಡ್ರೆಸ್ ಇಲ್ದೆ ಓಡೋದ್ರೆ ಅವನು ಲಂಬಾಣಿ ಅಲ್ದೆ ಮತ್ತೇನೋ!’

‘ಹ..ಹಹ.. ಚೆನ್ನಾಗಿ ಹೇಳ್ದೆ ಅಜ್ಜಿ.. ಐ ಲೈಕ್ ಇಟ್..... ನಾನು ಮತ್ತೆ ದಸರಾ ಹಬ್ಬದ ಟೈಮಿಗೆ ಬಂದ್ರೂ ಬಂದೆ. ಆಗ ಇಲ್ಲಿಗೂ ಬರ್ತಿನಿ.’

‘ಖಂಡಿತ ಬಾಪ್ಪ. ನೀನು ಬಂದ್ರೆ ಏನಾದ್ರೂ ಎಕನಾಮಿಕ್ಸ್, ಅರ್ಥಶಾಸ್ತ್ರದ ವಿಚಾರ ಅರ್ಥವಾಗುವ ಹಾಗೆ ತಿಳಿಸ್ತಿಯ.’

‘ವಿಜಯ ದಶಮಿ ಹಬ್ಬಕ್ಕೆ ಬರ್ತಿನಿ.’

‘ಆ ನಾಲಕ್ಕು ದಿವಸ ನಾವೆಲ್ಲಾ ಉಪವಾಸ ಮಾಡ್ಬೇಕಾಗುತ್ತೋ ಏನೋ! ಪ್ರಧಾನಿ ಮೋದಿಯವರ ಸರ್ಕಾರ ಎರಡು ವರ್ಷ ಕಂಪ್ಲೀಟ್ ಮಾಡಿದ್ದಕ್ಕೆ ನಮ್ಮೆಲ್ಲರನ್ನೂ ಅವರ ಜೊತೆ ಸೇರಿ ಇದನ್ನು ಹಬ್ಬದ ಹಾಗೆ ಆಚರಿಸಬೇಕೆಂದು ರಾಷ್ಟ್ರದ ಮೂಲೆ ಮೂಲೆಗೂ ಹೋಗಿ ಜನರನ್ನು ರೆಡಿ ಮಾಡ್ತಿದಾರೆ. ನೀನೂ ನಮ್ಮ ಜೊತೆ ಸೇರ್ಕೊ. ಒಟ್ಟಿಗೆ ಆಚರಿಸೋಣ.’

‘ಹಬ್ಬ... ಉಪವಾಸ? ಮತ್ತೆ ಗೂಗ್ಲಿ ಹಾಕಿದ್ಯಾ ಅಜ್ಜಿ?’

‘ಟ್ರಿಕಲ್ ಡೌನ್ ಎಕನಾಮಿಕ್ಸ್ ಅಂತ ನೀನು ಹೇಳಿದ್ಯಲ್ಲಾ ಹೋದ ಸಲ.. ಮೇಲಿಂದ ಕೆಳಕ್ಕೇ ಆರ್ಥಿಕ ಪರಿಸ್ಥಿತಿ ಹರಿಯಬೇಕಂತೆ. ಕೆಳಗಿರೋವ್ರನ್ನ ಮೇಲೆ ಎತ್ತಕ್ಕೆ ಸಾಧ್ಯವಿಲ್ದಿದ್ರೆ ನಾವೇ ಕೆಳಗಡೆಗೆ ಹೋಗಿ ‘ನಾವೂ, ನೀವೂ ಒಂದೆ’ ಎಂದು ತೋರಿಸಿಕೊಡುವುದು ಇದರ ಉದ್ದೇಶ.

‘ನೀವು ಏನು ಮಾಡ್ತೀರಿ?’

‘ಏನೋ! ನೀನು ದೊಡ್ಡ ಎಕಾನಮಿಸ್ಟ್ ಆಗಿ ನನ್ನನ್ನು ಕೇಳ್ತಿಯಾ? ಇದೆಲ್ಲಾ ನಿನ್ನ ಕೈಯ ಹಿಂಭಾಗದ ಹಾಗೆ. ಅರೆದು ಕುಡಿದಿರ್ತಿಯಾ, ಅಲ್ವಾ?’

‘ಅಜ್ಜಿ! ಇಲ್ಲಿಯ ಎಕನಾಮಿಕ್ಸ್ ನನಗೆ ನಿಜವಾಗ್ಲೂ ಅರ್ಥವಾಗ್ತಿಲ್ಲ... ಸ್ವಲ್ಪ ವಿವರಿಸಿ ಹೇಳು.’

‘ನಮಗಿಂತ ಆರ್ಥಿಕ ಸ್ಥಿತಿ ಹೀನಾಯವಾಗಿರೋವ್ರು, ದಿನಾ ಉಪವಾಸ ಮಾಡೋದು ಆಶ್ಚರ್ಯವೇನಿಲ್ಲ. ನಾವೂ ಅವರ ಜೊತೆ ನಾಲ್ಕು ದಿನ ಉಪವಾಸ ಮಾಡೋದ್ರಿಂದ ಅವರಿಗೆ ಜೊತೆ ಕೊಟ್ಟಂಗೆ ಅಲ್ವಾ! ಹೀಗೆ ಎಲ್ಲಾರು ಉಪವಾಸ ಮಾಡಿದ್ರೆ ದೇಶಕ್ಕೆ

ಉಳಿತಾಯ ತಾನೇ? ದಸರಾಗೆ ಅದೇ ಸ್ಪೆಷಲ್ ಈ ವರ್ಷ. ಹೇಗೂ ನೀನೂ ನಮ್ಜೊತೆ ಇರ್ತಿಯಾ ಈ ವರ್ಷ.'

'ನನಗೆ.... ರಜ ಸಿಗುತ್ತೋ ಇಲ್ವೋ ನೋಡ್ಬೇಕು.... ಓಹೋ, ಈಗ ಅರ್ಥವಾಯ್ತು. ಶೇರಿಂಗ್ ದೆ ಪೈ. ನೀನು ಹೇಳೋದು ಸೊನ್ನೇನ ಹೇಗೆ ಹಂಚಿಕೊಳ್ಳಬಹುದು' ಅಂತ. ವಂಡರ್ಫುಲ್!

'ಹಾಗೆ ನೋಡಪ್ಪಾ... ನಮ್ಮಲ್ಲಿ ಆಗಾಗ್ಗೆ ಹಿಂದೂ – ಮುಸ್ಲಿಮರ ಗಲಾಟೆ ಇರುತ್ತೆ..'

'ಅದು ಎಲ್ಲಾ ಕಡೆ ಇದೆ ಅಜ್ಜಿ. ಇಟ್ ಈಸ್ ಎ ಯೂನಿವರ್ಸಲ್ ಪ್ರಾಬ್ಲಂ'

'ನಾವು ಅದನ್ನು ಸಾಲ್ವ್ ಮಾಡ್ಬಹುದು. ರಿಲಿಜಿಯಸ್ ಶೇರಿಂಗ್‌ನಿಂದ'

'ಅಜ್ಜಿ! ವಾಟ್ ಆರ್ ಯು ಸೇಯಿಂಗ್? ಇದನ್ನು ನೀನು ಸಾಲ್ವ್ ಮಾಡಿದ್ರೆ ನಿನಗೆ ನೊಬೆಲ್ ಪ್ರೈಜ್ ಖಂಡಿತ.'

'ಅವರ ಈದ್, ರಂಜಾನಿಗೆ ನಾವೂ ಸೇರಿ ಅವರ ಜೊತೆ ಉಪವಾಸ ಆಚರಿಸೋದು. ಇದು ಎಕಾನಮೀಗೂ ಒಳ್ಳೇದು, ರಿಲಿಜಿಯಸ್ ಸೆಂಟಿಮೆಂಟಿಗೂ ಒಳ್ಳೇದು. ಬೆಳಿಗ್ಗೆ ಒಂದಿಷ್ಟು ಬಾಯಿಗೆ ಉಪ್ಪಿಟ್ಟೋ, ಅವಲಕ್ಕಿನೋ ಬಿದ್ದರೆ ಸಾಕು, ಸಾಯಂಕಾಲ ಒಣ ಖರ್ಜೂರವೋ, ದ್ರಾಕ್ಷಿತಿಂದ್ರೆ ಅವತ್ತಿನ ಊಟದ ಶಾಸ್ತ್ರ ಮುಗಿದ್ಹಂಗೆ. ಇದನ್ನು ನಲ್ವತ್ತು ದಿವಸ ಮಾಡಿದ್ರೆ, ನಮ್ಮ ದೇಹದ ಕೊಬ್ಬು ಇಳಿಯುತ್ತೆ, ಶಾಂತಿ ನೆಲೆಸುತ್ತೆ, ದೇಶದ ಎಕಾನಮಿಗೂ ಒಳ್ಳೇದು... ಏನಂತಿಯಾ ಗೋಪಿ..?'

'ನಂಗೇನೂ ತೋಚ್ತಾ ಇಲ್ಲ... ಬ್ರಿಲಿಯಂಟ್.. ಯಾವುದೋ ಖಾರ ಜಾಸ್ತಿ ಆಯ್ತು ಅನ್ಸುತ್ತೆ. ಖಾರಾನೇ ಹಾಕಿಲ್ಲ ಅಂದ್ಯಲ್ಲಾ.. ನಿನ್ನ ಥಿಂಕಿಂಗ್‌ನಿಂದ ನನಗೆ ಖಾರ ಆಗಿರ್ಬೇಕು... ನನಗೆ ಸ್ವಲ್ಪ ಮಜ್ಜಿಗೆ ಕೊಡು ಅಜ್ಜಿ....'

'ನಾವು ಹಾಲು ಮಜ್ಜಿಗೆ ತರ್ಸಲ್ಲಪ್ಪ... ನೀರೇ ಒಳ್ಳೇದಂತಲ್ಲ.. ಕಾಯ್ಸಿದ್ದು ನೀರು.. ಪತಂಜಲಿ ಯೋಗ ಶಾಸ್ತ್ರದಲ್ಲಿ ಹೇಳಿರೋ ಹಾಗೆ.'

'ಪ್ರಧಾನ ಮಂತ್ರಿಗಳು ಅದೇ ಹೇಳಿದಾರಾ?.'

ಅದು ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ಹೇಳಿದಾರಂತಲ್ಲೋ ಗೋಪಿ! ಬಜೆಟ್ ಮಂಡಿಸುವಾಗ ನಮ್ಮ ಎಫ್.ಎಮ್. ಇನ್ನೊಂದು ವಿಷಯ ಹೇಳಿದ್ರು ನೋಡು... ಗವರ್ನಮೆಂಟಿನಲ್ಲಿ ಇರೊ ದುಡ್ಡು ನಮ್ಮದಂತೆ, ನಮ್ಮ ಹತ್ತಿರ ಇರೋ ದುಡ್ಡು ಅವರದಂತೆ... 'ಇದೇ ನಮ್ಮ ಎಕನಾಮಿಕ್ಸ್‌ನ ರಹಸ್ಯ!'

'ಬರ್ತೀವಿ ಅಜ್ಜಿ....ನಮಗೆ ಬೇರೆ ಕಡೇನೂ ಹೋಗ್ಬೇಕು.'

❑

1833ರವರೆಗೂ ಮೈಸೂರಿನ ಟಂಕಸಾಲೆಯಲ್ಲೇ ಅಚ್ಚಾಗುತ್ತಿದ್ದ ನಾಣ್ಯಗಳು 1833ರಿಂದ ಬೆಂಗಳೂರಲ್ಲಿ ಅಚ್ಚಾಗಲು ಪ್ರಾರಂಭವಾಯಿತು. ಈಗ ಮೈಸೂರಿನಲ್ಲಿ ನೋಟು ಮುದ್ರಣ ಸಂಸ್ಥೆ ಇರುವುದು ಹೆಗ್ಗಳಿಕೆ.

# ಸೊನ್ನೆಯ ಬೆಲೆ

**- ಆನಂದ**

ಸರ್, ಸೊನ್ನೆಯ ಬೆಲೆ ಎಷ್ಟು?

ಇದು ನನ್ನ ಹೈಸ್ಕೂಲ್ ಸಹಪಾಠಿ ಸುಮಾರು 60 ವರ್ಷಗಳ ಹಿಂದೆ ಕ್ಲಾಸಿನಲ್ಲಿ ಕೇಳಿದ ಪ್ರಶ್ನೆ. ಎಸ್ಸೆನ್ನೆಂ ಮೇಷ್ಟ್ರು ತಬ್ಬಿಬ್ಬಾದರು. ನಂತರ ಸಾವರಿಸಿಕೊಂಡು 'ನಾಳೆ ಹೇಳ್ತೀನಿ' ಎಂದರು. ಅವನ ಪುಣ್ಯ, 'ತಲೆಹರಟೆ' ಎಂದು ಅವನಿಗೆ ಬಾರಿಸಲಿಲ್ಲ. ಆದರೆ ಅವರಿಂದ ಉತ್ತರವೂ ಬರಲಿಲ್ಲ. ಆ ನನ್ನ ಸಹಪಾಠಿಗೆ ಸೊನ್ನೆಯ ಬೆಲೆ ತಿಳಿಯಿತೋ ಇಲ್ಲವೊ ಗೊತ್ತಾಗಲಿಲ್ಲ.

ಸೊನ್ನೆ ಒಂದು ಸಂಖ್ಯೆಯೆ? ಸೊನ್ನೆಗೆ ಬೆಲೆ ಇದೆಯೆ? ಇರಲೇಬೇಕಲ್ಲವೆ? ಇಲ್ಲದಿದ್ದರೆ ಅದು ಉಪಯೋಗದಲ್ಲಿರುತ್ತಲೇ ಇರುತ್ತಿರಲಿಲ್ಲ. ನಾವು ಮಕ್ಕಳಾಗಿದ್ದಾಗ ಶಾಲೆಯಲ್ಲಿ 1,2,3 ಕಲಿಸುತ್ತಿದ್ದರು. ಈಗಲೂ ಅಷ್ಟೆ. ಇಂಗ್ಲೀಷ್ ಮೀಡಿಯಂ ಶಾಲೆಗಳಲ್ಲಿ ಒನ್, ಟು, ತ್ರೀ... ಕಲಿಸುತ್ತಾರೆ. ನಂತರ ನಾವು ಸೊನ್ನೆ ಬಗ್ಗೆ ತಿಳಿದುಕೊಂಡೆವು. ಆದರೆ ಅದರ ಬೆಲೆ ಇನ್ನೂ ಅರ್ಥವಾಗಿಲ್ಲ. ಸಾವಿರದ ಮುನ್ನೂರು ವರ್ಷಗಳ ಹಿಂದೆ ಸೊನ್ನೆಯ ಆವಿಷ್ಕಾರವಾಯಿತು ಎಂದು ಚರಿತ್ರೆ ತಿಳಿಸುತ್ತದೆ. ಅಲ್ಲಿಂದ ಇಲ್ಲಿಯವರೆಗೂ ಹಣದುಬ್ಬರ ಎಷ್ಟೇ ಇರಲಿ ಅದರ ಬೆಲೆ ಅಷ್ಟೇ ಇದೆ. ಅದಕ್ಕೂ ಮುಂಚೆ ಸೊನ್ನೆ ಇಲ್ಲದೆ ಬದುಕು ಹೇಗೆ ಸಾಗಿತೊ ಗೊತ್ತಿಲ್ಲ. ಆದರೆ ಸೊನ್ನೆ ಈಗಿನ ಮೊಬೈಲ್‌ನಂತೆ, ಅದಿಲ್ಲದೆ ಬದುಕೇ ಇಲ್ಲ. ಆದರೆ ಸೊನ್ನೆ ಎಂದರೆ ಏನು?

ಒಬ್ಬ ಗಣಿತಜ್ಞನ ಪ್ರಕಾರ ಸೊನ್ನೆ ತಾನಾಗಿಯೇ ಒಂದು ಸಂಖ್ಯೆ ಆಗಿಲ್ಲದಿರಬಹುದು ಆದರೆ 1 ರಿಂದ 9ರವರೆಗಿನ ಸಂಖ್ಯೆಗಳ ಬದಿ ನಿಂತಾಗ ಅದಕ್ಕೆ ಅದರದ್ದೇ ಆದ ಒಂದು ಮಹತ್ವ ಬರುತ್ತದೆ. ಹೇಗೆಂದರೆ ಸೋನಿಯಾಜಿ, ರಾಹುಲ್‌ಜಿ, ಮೋದೀಜಿ ಜತೆ ನಿಂತು ಫೋಟೊ ತೆಗೆಸಿಕೊಂಡಂತೆ.


ಅರ್ಥವಾಗಲಿಲ್ಲವೆ? ಉದಾಹರಣೆಗೆ, 123 ತೆಗೆದುಕೊಳ್ಳಿ. ಇವುಗಳ ಮಧ್ಯೆ ಸೊನ್ನೆ ಸೇರಿಸಿ. ಆಗ ನೋಡಿ ಅದರ ಬೆಲೆ ಹೇಗೆ ಹೆಚ್ಚಾಗುತ್ತಾ ಹೋಗುತ್ತದೆ ಎಂದು 1023, 1203, 1230 ಇತ್ಯಾದಿ. ಆದರೆ ಬೆಲೆ ಹೆಚ್ಚಾಗಿದ್ದು ಯಾರದ್ದು? ಸೊನ್ನೆಯದೆ? ಇತರ ಸಂಖ್ಯೆಗಳದ್ದೇ? ಅಥವಾ ಇಬ್ಬರದ್ದೂ? ಸೋಜಿಗವಲ್ಲವೆ? ಷೇರು ಮಾರುಕಟ್ಟೆಯಲ್ಲಿ ನೀವು ಅಡ್ಡಾಡಿದರೆ ಸೊನ್ನೆಯ ಅಗಾಧವಾದ ಬೆಲೆ ಅರ್ಥವಾಗುತ್ತದೆ. ಆ ಮಾರುಕಟ್ಟೆಯ ಮೇಲೆ ಕರಡಿ / ಗೂಳಿ ದಾಳಿ ಮಾಡಿದಾಗ ಅದೆಷ್ಟೊ ಲಕ್ಷ ಕೋಟಿ ರೂಗಳಷ್ಟು ಲುಕ್ಸಾನು ಆಯಿತು ಎಂದು ಪತ್ರಿಕೆಗಳು ಆರ್ಭಟಿಸುತ್ತವೆ. ಆಗ ಸೊನ್ನೆಯ ಮಹತ್ವ ತಿಳಿಯಲು ಸಾಧ್ಯ. ಏಕೆಂದರೆ ಲಕ್ಷ ಕೋಟಿ ಬರೆಯಬೇಕಾದರೆ ಅದೆಷ್ಟೋ ಸೊನ್ನೆಗಳು ಬೇಕೇ ಬೇಕು. ಬರೆದು ನೋಡಿ. ಹಾಗೆಯೇ ಬಿಲಿಯನ್, ಟ್ರಿಲಿಯನ್‌ಗಳಲ್ಲಿ ಎಷ್ಟು ಸೊನ್ನೆಗಳಿವೆ ಎಂದು ತಿಳಿಯಲು ಪ್ರಯತ್ನಿಸಿ. ಈಗೇನೋ ಟ್ರಿಲಿಯನ್‌ಗಿಂತಲೂ ದೊಡ್ಡದಾದ ಕ್ವಾಡ್ರಿಲಿಯನ್ ಎಂಬುದು ಚಾಲನೆಗೆ ಬಂದಿದೆಯಂತೆ. ಅದರ ಸೊನ್ನೆಯ ಬಲ ಎಷ್ಟಿರಬಹುದು?

ಅಂದಹಾಗೆ ಬಿಲಿಯನ್, ಟ್ರಿಲಿಯನ್ ಬಗ್ಗೆ ಅಮೆರಿಕ ಇಂಗ್ಲೆಂಡ್ ನಡುವೆ ಒಮ್ಮತವಿಲ್ಲ. ದೇವನೊಬ್ಬ ನಾಮಹಲವು ಎಂಬಂತೆ ಬಿಲಿಯನ್ / ಟ್ರಿಲಿಯನ್ ಹೆಸರು ಒಂದೇ ಆದರೆ ಸೊನ್ನೆಗಳು ಹಲವಾರು. ಬ್ರಿಟಿಷ್ ಬಿಲಿಯನ್‌ನಲ್ಲಿ 12 ಸೊನ್ನೆಗಳು ರಾರಾಜಿಸಿದರೆ ಅಮೆರಿಕನ್ನರು 9 ಸೊನ್ನೆಗಳಿಗೇ ತೃಪ್ತಿಪಟ್ಟುಕೊಳ್ಳುತ್ತಾರೆ. ಹಾಗೆಯೇ, ಬ್ರಿಟಿಷ್ ಮಂದಿ ಟ್ರಿಲಿಯನ್ ನಮೂದಿಸಬೇಕಾದರೆ 1ರ ಮುಂದೆ 8 ಸೊನ್ನೆ ಸುತ್ತಬೇಕು. ಆದರೆ ಅಮೆರಿಕನ್ನರು ಜಾಣರು. ಏಕೆಂದರೆ 1ರ ಮುಂದೆ 12 ಸೊನ್ನೆ ಬರೆದರೆ ಅವರ ಟ್ರಿಲಿಯನ್ ಆಗೇ ಹೋಯಿತು. ಅಮೆರಿಕನ್ನರು ಜಾಣರೋ ಅಥವಾ ಸೋಮಾರಿಗಳೊ? ಅಂದಹಾಗೆ ನಮ್ಮ ಪುರಾಣಗಳಲ್ಲಿ ಬರುವ ಅಗಾಧ ಸಂಖ್ಯೆ ಅಕ್ಷೋಹಿಣಿಯಲ್ಲಿ ಎಷ್ಟು ಸೊನ್ನೆಗಳಿರಬಹುದು?

ಹೋಗಲಿ ಬಿಡಿ. ಒಂದು ಕೋಟಿ ಬರೆಯಬೇಕಾದರೆ ಎಷ್ಟು ಸೊನ್ನೆಗಳು ಬೇಕಾಗಬಹುದು ಎಂದು ಎಷ್ಟು ಮಂದಿಗೆ ಗೊತ್ತು? ನನಗೆ ಲಕ್ಷ ಬರೆಯುವಾಗಲೇ ಗೊಂದಲ ಶುರುವಾಗುತ್ತದೆ. ಅಂದಮೇಲೆ ಒಂದು ಲಕ್ಷಕೋಟಿ ಎಂದಾಗ ಎಷ್ಟು ಸೊನ್ನೆಗಳನ್ನು ಬರೆಯಲಿ? ಆದರೆ ನಮ್ಮ ಫೈನಾನ್ಸ್ ಮಿನಿಸ್ಟರ್‌ಗಳು ಬಜೆಟ್ ಸಮಯದಲ್ಲಿ ಸಾವಿರ ಕೋಟಿ, ಲಕ್ಷ ಕೋಟಿ ಆದಾಯ, ಖರ್ಚು ಎಂದು ಲೀಲಾಜಾಲವಾಗಿ ಓದಿಕೊಂಡು ಹೋಗುತ್ತಾರೆ. ಅವರಿಗಾದರೂ ಗೊತ್ತಿರುತ್ತದೆಯೇ ಅದರಲ್ಲಿ ಎಷ್ಟು ಸೊನ್ನೆಗಳಿವೆ ಎಂದು?

ಅಂದು 'ಸೊನ್ನೆ ಬೆಲೆ ಎಷ್ಟು ಸಾರ್?' ಎಂದು ನನ್ನ ಸಹಪಾಠಿ ಕೇಳಿದ ಮಹತ್ವದ ಪ್ರಶ್ನೆಗೆ ನಮ್ಮ ಮೇಷ್ಟ್ರು ಏಕೆ ಉತ್ತರಿಸಲಿಲ್ಲ ಎಂದು ಈಗ ನನಗೆ ಅರ್ಥವಾಗಿದೆ. ಈಗ ಅವರಿಲ್ಲ. ಆದರೆ ಅವರು ಹೋಗುವದಕ್ಕೂ ಮುಂಚೆ ಕಂಡುಕೊಂಡರೆ? ಗೊತ್ತಿಲ್ಲ.

❑



# ಪಾತತ್ತೆಯ ಲೆಕ್ಕಚಾರಗಳು

**- ಸಹನಾ ಪ್ರಸಾದ್**

'ಇಷ್ಟು ಜನರ ತಿಂಡಿಗೆ ಅದೆಷ್ಟು ದುಡ್ಡು!' ಎಂದು ಪಾತತ್ತೆ ಉದ್ಗರಿಸಿದರು. ಆದರೆ ಹಿಂದಿನ ಕಾಲದ ಅವರಿಗೆ ಇಂದಿನ ಕಾಲದ ಎಕಾನಮಿ ಗೊತ್ತೆ?

''ಅಲ್ಲಾ, ಇದೇನನ್ಯಾಯ. ಇಡ್ಲಿ ಎರಡಕ್ಕೆ 30 ರೂಪಾಯಿ. ಕಾಲು ಈರುಳ್ಳಿ ಹಾಕಿ ಕೆದಕಿದ ಉಪ್ಪಿಟ್ಟು 35 ರೂಪಾಯಿ. ಒಂದು ಕಾಫಿ 25 ರೂಪಾಯಿ! ಸುಲಿಗೆ! ಹಗಲು ದರೋಡೆ ಇದು! ನನಗೆ ಗೊತ್ತಿದ್ದರೆ ನಾನು ನಿಮ್ಮೊಟ್ಟಿಗೆ ಬರುತ್ತಲೇ ಇರಲಿಲ್ಲ. ಛೆ! ಇಷ್ಟು ಜನರ ತಿಂಡಿಗೆ ಎಷ್ಟು ದುಡ್ಡು! ಅಬ್ಬಬ್ಬಾ. ಅರ್ಧ ತಿಂಗಳ ತರಕಾರಿ ಬರುತ್ತಿತ್ತಲ್ಲ'' ಬಡಬಡಸುತ್ತಿದ್ದ ಪಾತತ್ತೆಯ ಬಾಯಿ ಮುಚ್ಚಿಸುವುದರಲ್ಲಿ ಆದಿತ್ಯನಿಗೆ ಸಾಕು ಸಾಕಾಯಿತು. ಅಷ್ಟರಲ್ಲಿ ಟ್ರೇ ಹಿಡಿದು ಬಂದ ವೇಟರ್ ಅವರ ಧಾಳಿಗೆ ತುತ್ತಾದ. ''ಏನಪ್ಪ, ಒಂದು ರೀತಿ ನೀತಿ ಬೇಡವೇ? ಕಾಲ ತುಟ್ಟಿ ನಿಜ, ಆದರೂ ಈ ರೀತಿಯ ಸುಲಿಗೆ ಮಾಡಬಹುದೆ? ಈ ಕಾಫಿ ಕಪ್ಪನ್ನು ನೋಡು. ನನ್ನ ಹಲ್ಲಿಗೆ ಸಾಕಾಗುವುದಿಲ್ಲ. ನಿನ್ನ ಹೋಟೆಲಲ್ಲಿ ನಾ ದಿನಾ ಕಾಫಿ ಕುಡಿದರೆ ಮುಗಿದೋಯ್ತು. ನನ್ನ ಮಗನ ಸಂಬಳವೆಲ್ಲಾ ಕಾಫಿಗೆ.'' ಅವನು ಜಾಣ. ಸಣ್ಣಗೆ ನಕ್ಕು ಟ್ರೇ ಇಟ್ಟು ಪರಾರಿಯಾದ. ''ಎರಡು ತೊಟ್ಟು'' ಕಾಫಿಯ ಬೆಲೆಯ ಗುಣಗಾನ ಮುಗುಯಯುವಷ್ಟರಲ್ಲಿ ಆದಿತ್ಯನಿಗೆ ಹೊರಟರೆ ಸಾಕೆನ್ನಿಸಿತ್ತು.

ಪಾತತ್ತೆ ಅಂದರೆ ಸುಮಾರು 60 ವರುಷದ ಗಟ್ಟಿಮುಟ್ಟಾದ ಆದಿತ್ಯನ ಸೋದರತ್ತೆ. ಸಾಧಾರಣವಾಗಿ ಅವರು ಪೂಜೆ, ಅಡುಗೆ, ಧಾರಾವಾಹಿ ಎಂದು ಬಹಳ ಬ್ಯುಸಿ. ಮಗನ ಮತ್ತು ಮಗನ ಸಂಸಾರದಲ್ಲಿ ಆರಾಮವಾಗಿ ಬೆರೆತು ಸಂತೃಪ್ತಿಯಿಂದಿರುವಾಕೆ. ಮಗನ ಸಂಸಾರ ಯಾವುದೊ ಟೂರ್ ಹೊರಟಾಗ ಈಗ ಸೋದರಳಿಯನ ಜತೆ ಒಂದು ದಿನ ಕಳೆಯಲು ಬಂದಿದ್ದಾರೆ.

''ಭಾನುವಾರ ನನ್ನಿಂದ ಅಡುಗೆ ನಿರೀಕ್ಷಿಸಲೇ ಬೇಡಿ'' ಎಂದು ಮಡದಿ ರತ್ನಳ ಉವಾಚ ಮತ್ತು ಅದಕ್ಕೆ ಕುಲಪುತ್ರ ರಂಜಿತ್ ಹಾಗೂ ಪುತ್ರೀರತ್ನ ರೀನಳ ಅನುಮೋದನೆ ದೊರಕಿದ ಮೇಲೆ ಪ್ರತಿ ಭಾನುವಾರ ಆ ಹೋಟೇಲ್, ಈ ದರ್ಶಿನಿ. ಮತ್ತೊಂದು ಢಾಬಾ, ಮಗದೊಂದು ಉತ್ತರ ಕರ್ನಾಟಕ ಜೋಳದ ರೊಟ್ಟಿ ಅಂಗಡಿ, ಹೀಗೆ ಸಾಗಿತ್ತು ಜೀವನ. ಗಂಡ ಹೆಂಡತಿ ದುಡಿಯುವುದರಿಂದ ಬೆಲೆ ಏರಿಕೆಯ ಬಿಸಿ ತಟ್ಟಿರಲಿಲ್ಲ. ಪಾತತ್ತೆಯ ತರಹ ''ಅಯ್ಯೋ, ಮನೆಯಲ್ಲಿ ಮಾಡಿದ್ದರೆ ಇದರ ಕಾಲು ಭಾಗ ಬೆಲೆ ಆಗುತ್ತಿರಲಿಲ್ಲವಲ್ಲ'' ಎಂದು ಹಲುಬುವ ಅಭ್ಯಾಸ ರತ್ನಳಿಗೆ ಇಲ್ಲದಿದ್ದರಿಂದ ಆದಿತ್ಯನಿಗೂ ಪರ್ಸ್ ಖಾಲಿ ಮಾಡಿಕೊಳ್ಳುವ ವಿನಃ ಬೇರೆ ದಾರಿಯೇ ಇರಲಿಲ್ಲ. ''ಇಡ್ಲಿ ಮಾಡುವುದು ಕಷ್ಟಾನಾ'' ಎಂದು ಒಮ್ಮೆ ನುಡಿದಿದ್ದಾಗ ಸುಮಾರು ಜಗಳವಾಗಿದ್ದು ಅವನು ಇನ್ನೂ ಮರೆತಿಲ್ಲ.

ಇರಲಿ. ಈಗ ತಮ್ಮೊಟ್ಟಿಗೆ ಪಾತತ್ತೆಯನ್ನು ಸಹ ಹೋಟೇಲಿಗೆ ಕರೆದೊಯ್ದಿರುವ ಈ ಸಂಸಾರದ ಸ್ಥಿತಿಯೇನು ನೋಡೋಣ ಬನ್ನಿ. ಮಕ್ಕಳು, ಅವರಮ್ಮನ ಕೆಂಗಣ್ಣು ಆದಿತ್ಯನನ್ನು ಸುಡುತ್ತಿತ್ತು. ಹಾಗೂ ಹೀಗೂ ಉಂಡು, ಬಿಲ್ಲು ತೆತ್ತಿ ಹೊರ ಬಂದಾಗ ಒಳಗಡೆ ಹೋಗಲು

ಇದ್ದ ಕ್ಯೂ ನೋಡಿ ಪಾತತ್ತೆ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ''ಅಯ್ಯೋ ಒಳ್ಳೆ ಭಿಕ್ಷಾನ್ನಕ್ಕಾಗಿ ನಿಂತಿರುವ ಹಾಗಿದೆಯಲ್ಲ!'' ಘಂಟೆ ಹೊಡೆದಂತೆ ಅವರ ಧ್ವನಿ. ಎಲ್ಲರೂ ತಮ್ಮನ್ನೆ ನೋಡುತ್ತಾರೆಂದು ಮಕ್ಕಳು ಬೇಗ ಬೇಗ ಹೆಜ್ಜೆ ಹಾಕಿದರು.

ಮಾಲ್‌ಗೆ ಹೋಗೋಣ ಎಂದು ಮಕ್ಕಳು ಹಟ ಹಿಡಿಯುತ್ತಾರೆಂದುಕೊಂಡಿದ್ದವನಿಗೆ ಅವರು ಮಾತನಾಡದೇ ಸುಮ್ಮನಿದ್ದದ್ದು ಅಚ್ಚರಿಯಾಯಿತು. ''ಸದ್ಯ ಸುಮ್ಮನಿರಿ, ಇನ್ನು ಅಲ್ಲಿಯೂ ನಮ್ಮ ಮಾನ ಹರಾಜಾಗುವುದು ಬೇಡ, ಸುಮ್ಮನೆ ಮನೆಗೆ ಹೋಗೋಣ. ಅನ್ನ, ಸಾರು, ಪಲ್ಯ ಬೇಗ ಮಾಡುವೆ. ಮೊಸರು ಕೊಂಡು ಹೋಗೋಣ'' ಪಿಸುಗುಟ್ಟಿದ ಮಡದಿಯತ್ತ ನೋಡಿದರೆ ತನ್ನ ಕಣ್ಣಲ್ಲಿ ಕಾಣುವ ನಗೆ ಅಭಾಸ ಮೂಡುವುದೆಂದು ಅವಳತ್ತ ನೋಡದೆ ಕಾರು ಮನೆಯತ್ತ ತಿರುಗಿಸಿದ.

''ಅತ್ತೆ ಅದು ನೀವು ಅಂದು ಕೊಂಡ ಹಾಗಲ್ಲ. ಈಗ ಇಡ್ಲಿ ಮಾಡಲು ಎಷ್ಟು ಕಷ್ಟ ಪಡಬೇಕು. ಉದ್ದಿನ ಬೇಳೆ, ಅಕ್ಕಿ ನೆನೆ ಹಾಕು, ರುಬ್ಬು, ಬೇಯಿಸು, ಚಟ್ನಿ ಮಾಡು, ಹೀಗೆ ಎಷ್ಟು ಸಮಯ ಹಿಡಿಸುತ್ತದೆ ಅಲ್ಲವಾ? ಆ ಸಮಯವನ್ನು, ಶ್ರಮವನ್ನು ಅವರು ದುಡ್ಡಿನಿಂದ ಅಳೆಯುತ್ತಾರೆ ಅಷ್ಟೆ. ನಿಮ್ಮ ಮಗ ಕಡಿಮೆ ಸಂಪಾದಿಸುತ್ತಾರೇನು? ಇನ್ನು ಮೇಲೆ ನೀವು ಸಹ ಭಾನುವಾರ ಅಡುಗೆ ಮನೆ ಬಂದ್ ಎಂದು ಘೋಷಿಸಿಬಿಡಿ. ನಿಮ್ಮ ಸೊಸೆ ಕೊಳ್ಳುವ ಸೀರೆಗಳು ಎಷ್ಟು ಕಡಿಮೆ ಆಗುತ್ತವೆ ನೋಡುವಿರಂತೆ. ಅದೂ ಅಲ್ಲದೆ ನೀವು ಆಗಾಗ್ಗೆ ಈಚೆ ತಿನ್ನುವುದರಿಂದ ಎಷ್ಟು ಹೋಟೆಲುಗಳು ಉದ್ಧಾರವಾಗುತ್ತದೆ, ಎಷ್ಟು ಜನರ ಹೊಟ್ಟೆ ಪಾಡು ನಡೆಯುತ್ತದೆ ಯೋಚಿಸಿ'' ಸಂಜೆ ಕಾಫಿಯ ಜತೆ ಕುರುಕುಲು ತಿನ್ನುತ್ತಾ ಅತ್ತೆಗೆ ಬೋಧನೆ ಮಾಡುತ್ತಿರುವ ಪತ್ನಿಯ ಮಾತು ಕೇಳಿ ಆದಿತ್ಯ ಪಿಸುಗುಟ್ಟಿದ: ''ಆರಾಮವಾಗಿ ಇರುವವರನ್ನು ನೀನೇಕೆ ಹಾಳು ಮಾಡುತ್ತಿ. ಅದಕ್ಕವಳು ಮೂಗು ಮುರಿದಳು'' ಪಾಪ ಸುಮ್ಮನಿರಿ, ಮನೆಯಲ್ಲಿ ಮಾಡಿದರೆ ದುಡ್ಡು ಉಳಿಯುತ್ತದೆ ಎಂದು ಅವರ ಭ್ರಾಂತು. ಅದರ ಶ್ರಮ, ಕೆಲಸ ಅವರಿಗೆ ಅರಿವು ಮಾಡಿಕೊಟ್ಟೆ ಅಷ್ಟೆ'' ಎಂದು ದುಪಟ್ಟಾ ಸರಿಪಡಿಸಿಕೊಂಡು ನಡೆದವಳತ್ತ ಆದಿತ್ಯ ಪೆಚ್ಚು ನಗೆ ಬೀರಿದ.

❑

---

ಮೈಸೂರಿನ ಹುಲಿ ಟಿಪ್ಪುಸುಲ್ತಾನನ ಕಾಲದಲ್ಲಿ ಕೊನೆಯ ಪಕ್ಷ ಹನ್ನೆರಡು ಟಂಕಸಾಲೆಗಳು ಶ್ರೀರಂಗಪಟ್ಟಣ, ನಗರ, ಗುತ್ತಿ, ಬೆಂಗಳೂರು, ಚಿತ್ರದುರ್ಗ, ಕಲ್ಲಿಕೋಟೆ, ಫರೂಕ್, ಸತ್ಯಮಂಗಲ, ದಿಂಡಿಗಲ್, ಗುರ‍್ರಂಕೊಂಡ, ಧಾರವಾಡ ಮತ್ತು ಮೈಸೂರುಗಳಲ್ಲಿ ಇದ್ದವು. ಈ ನಾಣ್ಯಗಳು ಎರಡು ರೂಪಾಯಿ, ಒಂದು ರೂಪಾಯಿ, ಅರ್ಧ ರೂಪಾಯಿ, ಕಾಲು ರೂಪಾಯಿ, ಎಂಟನೆಯ ಒಂದು ರೂಪಾಯಿ, ಮತ್ತು ಹದಿನಾರನೆಯ ಒಂದು ರೂಪಾಯಿ ಮೌಲ್ಯಗಳಲ್ಲಿದ್ದವು.

# ಗಳಕಿ ಉಳಕಿ

**- ಭೂಮಿತಾಯಿ**

**ಸ**ಣ್ಣೋರಿದ್ದಾಗ ಹಿಂಗಂದ್ರ ಸಾಕು, ನಮ್ಮಜ್ಜ 10, 20, ನಾಲ್ಕಾಣೆ ನಾಣ್ಯ ತಗದು ಕೊಡ್ತಿದ್ದ. ಸಣ್ಣಾಕಿ ಅಂತ ನಂಗ ನಾಲ್ಕಾಣೆ ಕೊಟ್ರೂ ನಂಗ ಹೂವಿನಂಥ ಹತ್ತು ಪೈಸೆ ನಾಣ್ಯನ ಛಂದ ಕಾಣ್ತಿತ್ತು. ನಾನು ಡಬ್ಬಿಗೆ ಹಾಕ್ತಿದ್ದೆ. ನಮ್ಮಣ್ಣಂದ್ರು ಖರ್ಚು ಮಾಡ್ತಿದ್ರು. ಹಿಂಗಾಗಿ ಅವರಿಗೆ ಕಡಿಮಿ ಬಜೆಟ್ ಸಿಗ್ತಿತ್ತು. ಸಣ್ಣ ಅಣ್ಣಗ 10 ಪೈಸೆ. ಆದ್ರ ಅಂವಾ ಭಾರಿ ಚಾಲಾಕು. ಹತ್ತು ಪೈಸೆನೆ ಛಂದದ ಅಂತ ಇಪ್ಪತ್ತ ಸಲ ನಮ್ಮುಂದ ಹೇಳಿ ಅದನ್ನ ಇಸ್ಕೊಂಡು, ನಾಲ್ಕಾಣೆ ನಾನಾಗೇ ಅಂವಗ ಕೊಡೂಹಂಗ ಮಾಡ್ತಿದ್ದ. ಜೊತಿಗೆ ಐದು ಪೈಸೆ ಕೊಬ್ಬರಿ ಪೆಪ್ಪರ್ ಮಿಂಟ್ ಬ್ಯಾರೆ ಕೊಡ್ತೀನಿ ಅಂತಿದ್ನಾ... ನಾ ಅಲ್ಲೇ ಕರಗಿ ಬಿಡ್ತಿದ್ದೆ. ನನ್ನ ಮುಖಾನೂ ಹತ್ತು ಪೈಸೆಯ ನಾಣ್ಯದ ಹಂಗೇ ಅರಳ್ತಿತ್ತು.

> **ಈಗ ನನ್ನ ಗಳಸೂ ಥಿಯರಿನೇ ಬದಲಿ ಆಗೇದ. ಉಳುಕಿನೂ ಗಳಕಿ ಅಲ್ಲ, ಸಾಲದ ಬಾಕಿ ಇಲ್ಲ ಅನ್ನೂದೇ ಗಳಕಿ ಅನಿಸಿಬಿಟ್ಟದ.**

ಸಂಜೀಮುಂದ ಠಣ್‌ಠಣಾಠಣ್ ಅನ್ನೂದು ನಮಗ ರೂಢಿ ಆಗಿತ್ತು. ಹೊರಗ ಹೋಗೂಮುಂದ ಎಲ್ಲಿ ಹೋಗ್ತಿ ಅಂತ ಕೇಳಬಾರದು ಅನ್ನೂದು ಅಜ್ಜನ ಕರಾರು. ಸಂಜೀಮುಂದ ಲೈಬ್ರರಿಗೆ ಹೋಗೂಮುಂದ ನಾವು ಅಜ್ಜನ್ನ ಅಡ್ಡಗಟ್ಟಿ ಕೇಳ್ತಿದ್ವಿ... ಠಣ್‌ಠಣಾಠಣ್ ಅಂತ. ನಮ್ಮ ಅಂಗೈಯಾಗ ಈ ನಾಣ್ಯಗಳು ಬಿಸಿ ಆಗ್ತಿದ್ವು.

ನಂಗ ಯಾವತ್ತೂ ರೊಕ್ಕ ಹೆಂಗ ಖರ್ಚು ಮಾಡಬೇಕು ಅನ್ನೂದು ಗೊತ್ತೇ ಆಗ್ತಿರಲಿಲ್ಲ. ಕೈಯಾಗ ಇರುವ ರೊಕ್ಕದಿಂದ ಒಂದು ತಾಸು ಸೈಕಲ್ ಆಡೂದ? ಇಲ್ಲಾ ಅರ್ಧ ತಾಸು ಬಾಡಗಿ ಸೈಕಲ್ ಆಡಿ, ಉಳದ ರೊಕ್ಕದಾಗ ಏನರೆ ತಿನ್ನಾಕ ತೊಗೊಳ್ಳೂದ? ತಿನ್ನಾಕ ತೊಗೊಂಡ್ರ ಅದು ಎಲ್ಲಾರಿಗೂ ಸಾಲ್ತದೋ ಇಲ್ಲೋ? ಅಣ್ಣದ್ಯಾರಿಗೆ ಬಿಟ್ಟು ತಿನ್ನೂದು ಹೆಂಗ... ಚೂರುಚೂರೆ ಕಡದು, ಗುಬ್ಬಿ ಎಂಜಲಾ ಮಾಡಿ ಕೊಟ್ರೂ, ಅದು ಅವರಿಗೂ ಸಾಲೂದಿಲ್ಲ, ನಂಗೂ ತಿಂದಂಗ ಆಗೂದಿಲ್ಲ... ಏನು ಮಾಡೂದು? ಇಂಥ ಎಲ್ಲ ಪ್ರಶ್ನೆಗಳನ್ನು ನನ್ನ ಮುಂದಿಟ್ಕೊಂಡು ಎಲ್ಲಾದಕ್ಕೂ ಗೋಣ ಅಳಗಾಡಿಸ್ಕೊಂತ ಕಟ್ಟೀಗೆ ಕೋಡ್ತಿದ್ದೆ. ಆಮೇಲೆ ಈ ನಿರ್ಧಾರ ತೊಗೊಳ್ಳೂದು ಭಾಳ ತ್ರಾಸಿನ ಕೆಲಸರಿ. ಅದಕ್ಕ ಗಟ್ಟಿ ಮನಸು ಬೇಕು. ನಾನು ಅಳ್ಳಕ ಮನಸಿನ ಹುಡುಗಿ. ಹಂಗಾಗಿ ಎಲ್ಲಾ ಬ್ಯಾಡನಿಸಿ ಡಬ್ಬ್ಯಾಗ ಕೂಡಿಡೂದೇ ಸುಖ ಅನಸ್ತಿತ್ತು. ಕೂಡಿಡೂದೆ ಖರೆ ಅಂದಮ್ಯಾಲೆ ನಾಕಾಣೆ ಆದ್ರೇನು, ಹತ್ತು ಪೈಸೆ ಆದ್ರೇನು... ಪಿಸ್ಸ... ಅಂತ ಮಣ್ಣಿನ ಕುಳ್ಳ್ಯಾಗ ಠಣಕ್ ಅಂತ ನಾಣ್ಯ ಹಾಕಿ ಸುಮ್ನಾಗ್ತಿದ್ದೆ.

ನಮ್ಮ ದೊಡ್ಡಣ್ಣ ಹಂಗಲ್ಲ. ಅಂವಾ ರೊಕ್ಕ ಕೂಡಿಡ್ತಿದ್ದ. ಅವನ ಗೆಳೆಯ ಒಬ್ಬ ಇದ್ದ. ರೆಹಮಾನ್ ಅಂತ. ಅವರು ನಮಗಿಂತ ಸ್ಥಿತಿವಂತರು. ಅವರಪ್ಪ ಮನೀಗೆ ಥರೇವಾರಿ ಪುಸ್ತಕ ತರಸೋರು. ಸಾಂಬೂ, ಚಾಚಾ ಚೌಧ್ರಿ, ಟಿಂಕಲ್, ಟಿನ್‌ಟಿನ್... ಮನೀಗೆ ತರಸೋರು.

ಇವೆಲ್ಲ ಲೈಬ್ರರಿಯೊಳಗ ಓದಾಕ ಬಿಡ್ತಿದ್ರು. ಆದ್ರ ಮನೀಗೆ ಕೊಡ್ತಿರಲಿಲ್ಲ. ಅದಕ್ಕ ನಮ್ಮಣ್ಣ ಎಂಟಣೆ ರೆಹಮಾನ್‌ಗ ಕೊಟ್ಟು ಒಂದಿನ ಓದಾಕ ಪುಸ್ತಕ ಇಸ್ಕೊಂಡು ಬರ್ತಿದ್ದ. ನನ್ನ ಎರಡನೆಯ ಅಣ್ಣ, ಕೂಡಿಡೂ ಬದಲು, ಈ ಕ್ಷಣ ಬದುಕಿಬಿಡಬೇಕು ಅನ್ನೂ ಹಂಗಿದ್ದ. ರೊಕ್ಕದಾವ. ಗರ್ದಿ ಗಮ್ಮತ್ತು ಕಂಡ್ತ, ನೋಡೇ ಬಿಡಾಂವ. ಸೈಕಲ್ ಬೇಕನಿಸಿದ್ರ ಆಡೇಬಿಡಾಂವ. ಕೂಡಿಟ್ಟು ಬಾಡಗಿ ಕೊಡೂ ಬದಲಿ, ಅಡಿ ಬಂದು ಕೊಡ್ತೇನಿ ಅಂತ ಉದ್ರಿ ಬರಸಾಂವ...

ಹಿರೇ ಅಣ್ಣಗ ಸಂಯಮದ ಬುದ್ಧಿ ಇತ್ತು. ಕೂಡಿಟ್ಟು ತನ್ನ ಆನಂದ ತಾ ಪಡೀತಿದ್ದ. ಕಿರಿಯಣ್ಣಗ ಸಾಹಸದ ಬುದ್ಧಿ. ಈಗಂದ್ರ ಈಗೇ ಮಾಡೂನು.. ಮುಂದಿಂದು ನೋಡಿದ್ರಾತು ಅಂತ.. ನಾ ಮಾತ್ರ ನನ್ನ ರೊಕ್ಕ ಕೂಡಿಟ್ಟು, ಹಿರೇಯಣ್ಣನ ಹತ್ರ ಪುಸ್ತಕದ ಚಿತ್ರಾನೂ ನೋಡಕ್ಕಿನೆ. ಸಣ್ಣಣ್ಣನ ಜೊತಿಗೆ ಪಟಾ ಹಾರಸೂದು, ಸೈಕಲ್ ತುಳಿಯೂದು ಎಲ್ಲಾ ಮಾಡ್ತಿದ್ದೆ.

ಇಷ್ಟೆಲ್ಲ ಯಾಕ ಹೇಳಬೇಕಾತಂದ್ರ ಜಿ.ಎಸ್.ಟಿ ಬಗ್ಗೆ ಎರಡೂ ಸದನಗಳ ನಡು ಎಷ್ಟೆಲ್ಲ ಚರ್ಚೆ ಆಗ್ತಿತ್ತು. ನಂಗ ಗಳಕಿ, ಉಳಕಿ ಎರಡೇ ಗೊತ್ತು. ಇವೆರಡರ ನಡೂ ಬರುವ ಸುಂಕದ ವಿಚಾರ ಮಾತ್ರ ತಲೀಗೆ ಹತ್ತೂದಿಲ್ಲ. ನನ್ನ ಲೆಕ್ಕದಾಗ ನಾ ಗಳಸಿದ್ದೆಲ್ಲವೂ ನನ್ನ ಗಳಕಿನೇ ಅಲ್ಲ. ಅದಕ್ಕೊಂದು ಖರ್ಚು ಇದ್ದೇ ಇರ್ತದ. ಉಳಕಿನೇ ಗಳಕಿ ಅಂದ್ಕೊಳ್ಳಾಕಿ. ಆದ್ರೇನು ಮಾಡೂದು, ಗಳಕಿ ಮತ್ತು ಖರ್ಚಿನ ನಡುವ ಉಳಕಿ ಯಾವತ್ತೂ ಇರೂದಿಲ್ಲ. ಹಂಗಾಗಿ ನನ್ನ ಗಳಕಿ ಏನೂ ಇಲ್ಲ ಅಂತಾನೇ ಹೇಳಬಹುದು.

ಊರಿಗೆ ಹೋದಾಗ ಕೆಲಸಕ್ಕ ಹೋಗ್ತಿ ಅಂತಲ್ಲಬೇ... ಅನ್ನೋರು. ಹೌದ್ರಿ ಅಜ್ಜಾರ... ಅನ್ನಾಕಿ ನಾನು. ಎಷ್ಟವಾ ಪಗಾರ ಅಂತ ಕೇಳೋರು. ನಾಲ್ಕಂಕಿ, ಐದಂಕಿ ಹಿಂಗೇ ಏನರೆ ಹೇಳಾಕ್ಕಿ. ಎಷ್ಟು ಉಳಸಿಬೇ..? ಮುಂದಿನ ಪ್ರಶ್ನೆ... ಒಂದೀಸು ಉಳಿತಾವ್ರಿ, ಅನ್ನಾಕಿ.

ನಮ್ಮಾಯಿ ಲೆಕ್ಕ ಬ್ಯಾರೆನ ಇರ್ತಿತ್ತು... ಗಳಕಿ ಅಂದ್ರ ಆ ವರ್ಷ ದೀಪಾವಳಿಗೆ ಇಲ್ಲಾ ಯುಗಾದಿಗೆ ಏನು ಬಂಗಾರ ತೊಗೊಂಡೆ ಅನ್ನೂದ್ರ ಮ್ಯಾಲೆ ಅಳ್ಯಕ್ಕಿ. ಭುಗುಡಿ ತೊಗೊಂಡ್ಯಾ? ಏನು ಕತ್ತಿ ಹಂಗ ದುಡದು ಗುಬ್ಬಿಹಂಗ ಕಾಳು ಜೋಡಿಹಾಕ್ಕಿ ಅನ್ನಾಕಿ. ಸರಾ ತೊಗೊಂಡ್ರ, ಚಪಲ್ಹಾರ ತೊಗೊಂಡ್ರ... (ಇದು ಏಳು ಎಳಿ ಸರಾರಿ. ಒಂದಲ್ಲ ಎರಡಲ್ಲ ಏಳೇಳು ಜನ್ಮಾನೂ ಇದನ್ನೇ ಹಾಕ್ಕೊಂಡು ಹುಟ್ಟಬೇಕು ಅನ್ನೂ ಚಪಲ ಹುಟ್ಟಿಸೂ ಹಾರ ಅದು. ಅದಕ್ಕೆ ಚಪಲ್ಹಾರ ಅನ್ನೋರು) ಝುಮಕಿ ತೊಗೊಂಡ್ರಷ್ಟೆ ಗಳಕಿ ಜೋರೆ ಐತಿ ಅನ್ನೂದು ಅಕಿನ್ನ ಲೆಕ್ಕ. ಆದ್ರ ಅಕಿನ್ನ ಲೆಕ್ಕಕ್ಕ ಎಂದೂ ನಾನು ದುಡೀಲೇ ಇಲ್ಲ ಅನ್ನಬಹುದು.


ಇನ್ನ ವ್ಯಾಪಾರಕ್ಕ ಹೋದ್ರಂತೂ ಎಲ್ಲಿ ಎಷ್ಟು ಕೊಟ್ಯಾ? ಎಷ್ಟು ಚಾಕಾಸಿ ಮಾಡಿದ್ಯ? ಎಷ್ಟು ಹೊಳ್ಳಿ ಇಸ್ಕೊಂಡೆ ಅನ್ನೂದು ಮೂರು ದಿನಾ ಆದ್ರೂ ತಿಳೀತಿರಲಿಲ್ಲ. ಹೊಳ್ಳಿ ಇಸ್ಕೊಳ್ಳೂಮುಂದ ಒಂದೀಟು ಹೆಚ್ಗಿ ಕೊಟ್ಟು, ಬಿಟ್ಟು ಬರೂದೆ ಭಾಳ ಆಗ್ತಿತ್ತು. ರೊಕ್ಕ ಕೊಟ್ಟ ಮ್ಯಾಲೆ ಹೊಳ್ಳಿ ಇಸ್ಕೊಳ್ಳೂಮುಂದ ಯಾವಾಗೂ ಗದ್ಲಾ ಮಾಡ್ಕೊಳ್ಳಾಕಿ ನಾನು. ಈ ಕಾರ್ಡು ಬಂದ ಮ್ಯಾಲೆ ಸಮಾಧಾನ ಆಗೈತ್ರಿಪ್ಪಾ. ಅವರೂ ನಮಗ ಕೊಡೂದು ಬ್ಯಾಡ, ನಾವೂ

ಅವರಿಂದ ಇಸ್ಕೊಳ್ಳೂದು ಬ್ಯಾಡ... ಕರಾರುವಕ್ಕಾಗಿ ಪೈಸೇಕ್ಕ ಪೈಸೆ ವಸೂಲಿ ಮಾಡೂ ವ್ಯವಸ್ಥೆ ನನ್ನಂಥ ಆರ್ಥಿಕ ನಿರಕ್ಷರಿಗಳಿಗೆ ಎಷ್ಟು ಉಪಕಾರ ಮಾಡೇದಂಥ ನನ್ನಂಥೋರಿಗೇ ಗೊತ್ತು.

ಆಫೀಸಿನಿಂದ ವರ್ಗಾ ಆದಾಗ ಗುಲ್ಬರ್ಗದೊಳಗ ಒಬ್ಬಾಕಿನೇ ಮಗಳ ಜೊತಿಗೆ ಇರಬೇಕಾಗಿತ್ತು. ಮದ್ಲ ತಿಂಗಳ ಸಂಬಳಾ ಬರೂತ್ಲೆ ಒಂದು ಕಾಪಿಯೊಳಗ ಬರದು ಇಡ್ತಿದ್ದೆ. ದಿನಸಿಗೆ ಇಷ್ಟು, ಸಾಲೀಗೆ ಇಷ್ಟು, ಶಿಕೋಣಿಗೊಂದಿಷ್ಟು.. ಟ್ರೇನಿಗೊಂದಿಷ್ಟು... ಗಾಬರಿಯಾಗಬ್ಯಾಡ್ರಿ... ಟ್ರೇನು ತೊಗೊತಿರಲಿಲ್ಲ. ಬೆಂಗಳೂರಿಗೆ ಬಂದುಹೋಗುವ ಖರ್ಚು.. ಆದ್ರ ದಿನಸಿ ಜೊತಿಗೆ ದವಾಖಾನಿ ಏನರೆ ಪಟ್ಟಿಗೆ ಸೇರಿತು ಅಂದ್ರ... ಟ್ರೇನಿನ ರೊಕ್ಕಕ್ಕ ಕಲ್ಲು ಬೀಳ್ತಿತ್ತು. ನಮ್ಮ ಸಂಸಾರದ ಗಾಲಿ ಹಳೀಬಿಟ್ಟಂಗೆ ಆಗ್ತಿತ್ತು. ಈಗಲೂ ಹಂಗೇರಿ.. ಆದ್ರ ಅರ್ಥವ್ಯವಸ್ಥೆಯ ಕೋರಿಲೇಶನ್ ಥಿಯರಿ ಇಲ್ಲಿ ಇಲ್ಟಾ ಪಲ್ಟಾ ನೋಡ್ರಿ. ನಮ್ಮದು ಖಾಲಿ ಆದ್ಹಂಗ ಡಾಕ್ಟರ್‌ಗಳ ಗಳಕಿ ಗೆರಿ ಮ್ಯಾಲೆ ಏರ್ತದ. ಈಗ ನನ್ನ ಗಳಸೂ ಥಿಯರಿನೇ ಬದಲಿ ಆಗೇದ. ಉಳಕಿನೂ ಗಳಕಿ ಅಲ್ಲ. ಸಾಲದ ಬಾಕಿ ಇಲ್ಲ ಅನ್ನೂದೇ ಗಳಕಿ ಅನಿಸಿಬಿಟ್ಟದ. ಇಲ್ಲಾಂದ್ರ ಸಾಲ ಮಾಡಿ, ಬಡ್ಡಿ ಕಟ್ಟೂದ್ರೊಳಗ ನಾವೆಲ್ಲ ಬಡ್ಡೀಮಕ್ಕಳು ಆಗಿಬಿಡ್ತಿದ್ವಿ. ಅದನ್ನಂತೂ ತಪ್ಪಿಸಿ ಬದಕಾಕತ್ತೀವಿ ಅನ್ನೂದೊಂದೇ ಸಮಾಧಾನ.

ಮೂರು ದಶಕ, ಹತ್ತು ಪೈಸೆ ನಾಣ್ಯ ಎಷ್ಟೆಲ್ಲ ಬದಲಿ ಆಗ್ಯಾವಂದ್ರ ಠಣ್‌ಠಣಾಠಣ್ ಅನ್ನೂಹಂಗೇ ಇಲ್ಲ ಈಗ... ಝುಣ್‌ಝುಣಾಝುಣ್ ಅನ್ನೂ ಹಂಗೂ ಇಲ್ಲ. ಈಗೇನಿದ್ರೂ ಸುಂಯ್.... ಟಪಕ್ (ಕಾರ್ಡು ಸ್ವೈಪು ಮಾಡೂದಷ್ಟೆ).

❑



# ಅನರ್ಥಶಾಸ್ತ್ರ

- ಡಾ. ಅರ್ಥಶಾಸ್ತ್ರಿ

## ನಿಯಮ

ಅರ್ಥಶಾಸ್ತ್ರಜ್ಞರ ಮೊದಲ ನಿಯಮ: ಪ್ರತಿ ಒಬ್ಬ ಅರ್ಥಶಾಸ್ತ್ರಜ್ಞನಿಗೂ ಒಬ್ಬ ಸಮಾನ ಮತ್ತು ವಿರುದ್ಧ ಅರ್ಥಶಾಸ್ತ್ರಜ್ಞ ಇರುತ್ತಾರೆ.

ಎರಡನೆ ನಿಯಮ: ಅವರಿಬ್ಬರೂ ತಪ್ಪು.

★★★

## ಎಷ್ಟು ಕೈ?

ನನಗೆ ಒಂದೇ ಕೈ ಇರುವ ಅರ್ಥಶಾಸ್ತ್ರಜ್ಞ ಬೇಕು ಎಂದು ಪ್ರಧಾನ ಮಂತ್ರಿಗಳು ಹೇಳಿದಾಗ ಆಶ್ಚರ್ಯ ಆಯಿತು.

ಏಕೆ?

ನೋಡಿ ನಾನು ಯಾವುದೇ ಸಮಸ್ಯೆ ನಮ್ಮ ಅರ್ಥಶಾಸ್ತ್ರಜ್ಞರ ಮುಂದೆ ಇಟ್ಟಾಗ ಅವರು ಆನ್ ದಿ ಒನ್ ಹ್ಯಾಂಡ್... ಎಂದು 10 ನಿಮಿಷ ವಿವರಿಸಿ ನಂತರ ಆನ್ ದಿ ಅದರ್ ಹ್ಯಾಂಡ್.. ಎಂದು ಮತ್ತೆ 10 ನಿಮಿಷ ನಿರರ್ಗಳವಾಗಿ ಕೊರೆಯುತ್ತಾರೆ.

★★★

## ಕಾಣದ ಕೈ

ಆರ್ಥಿಕ ಸ್ಥಿತಿ ಬಿಗಡಾಯಿಸಿದಾಗ ಮಂತ್ರಿಗಳು ಅದಕ್ಕೆ ಕಾಣದ ಕೈನ ಕೈವಾಡ ಎಂದು ಹೇಳಿ ನುಣುಚಿಕೊಳ್ಳಲು ಪ್ರಯತ್ನಿಸುವುದುಂಟು. ಅಂತಹ ಪರಿಸ್ಥಿತಿಯಲ್ಲಿ ವಿರೋಧ ಪಕ್ಷದ ನಾಯಕರು ಎಲ್ಲಿ ಆ ಕಾಣದ ಕೈ ಎಲ್ಲೂ ಕಾಣುತ್ತಲೇ ಇಲ್ಲವಲ್ಲ ಎಂದು ನಗಾಡಿದರಂತೆ.

★★★

## ಚೂರು

ಒಬ್ಬ ಆರ್ಥಿಕ ತಜ್ಞ ಪಿಜ್ಜಾ ಅಂಗಡಿಗೆ ಹೋಗಿ ಪಿಜ್ಜಾಗೆ ಆರ್ಡರ್ ಮಾಡಿದ. ಅದು ತಯಾರಾಗಿ ಬಂದಾಗ ಮಾಣಿ ಸರ್ ಇದನ್ನು 6 ಚೂರು ಮಾಡಲೊ 8 ಚೂರು ಮಾಡಲೊ? ಎಂದು ಕೇಳಿದ.

ನನಗೀಗ ತುಂಬಾ ಹಸಿವಾಗಿದೆ. ಎಂಟು ಚೂರು ಮಾಡು ಎಂದ ಆ ತಜ್ಞ.

★★★

## ಎಷ್ಟು ಇರಲಿ?

ಒಬ್ಬ ಗಣಿತಜ್ಞ, ಅಕೌಂಟೆಂಟ್ ಮತ್ತು ಅರ್ಥಶಾಸ್ತ್ರಜ್ಞ ಒಂದೇ ಕೆಲಸಕ್ಕೆ ಅರ್ಜಿ ಸಲ್ಲಿಸಿದರು. ಮೂವರನ್ನೂ ಸಂದರ್ಶನಕ್ಕೆ ಕರೆಯಲಾಯಿತು.

ಮೊದಲ ಸರದಿ ಗಣಿತಜ್ಞನಾಗಿದ್ದಿತು. ಎರಡು ಪ್ಲಸ್ ಎರಡು ಎಷ್ಟು? ನಾಲ್ಕು ಎಂಬ ಉತ್ತರ ಬಂದಿತು.

ಸರಿಯಾಗಿ ನಾಲ್ಕು?

ಹೌದು ಸರಿಯಾಗಿ ನಾಲ್ಕು ಎಂದ ಪ್ರಶ್ನೆ ಕೇಳಿ ಬೆರಗಾಗಿದ್ದ ಗಣಿತಜ್ಞ.

ಅಕೌಂಟೆಂಟ್‌ಗೂ ಅದೇ ಪ್ರಶ್ನೆ. ಸರಾಸರಿ ನಾಲ್ಕು. ಹತ್ತು ಪರ್ಸೆಂಟ್ ಆಚೀಚೆ, ಆದರೆ ಸರಾಸರಿ ನಾಲ್ಕು ಎಂದು ಅವನು ಉತ್ತರಿಸಿದ.

ಅರ್ಥಶಾಸ್ತ್ರಜ್ಞನ ಸರದಿ. ಒಳಗೆ ಹೋದ ಅವನಿಗೂ ಎರಡು ಪ್ಲಸ್ ಎರಡು ಎಷ್ಟು? ಅದೇ ಪ್ರಶ್ನೆ. ಅರ್ಥಶಾಸ್ತ್ರಜ್ಞ ಮೇಲೆದ್ದ, ಬಾಗಿಲು ಹಾಕಿ ಬಂದು ಎಷ್ಟು ಇರಲಿ ಎಂದು ನೀವು ಬಯಸುತ್ತೀರಿ? ಎಂದು ಕೇಳಿದ.

★★★

## ವರಮಾನ

ಬಿರುಗಾಳಿಗೆ ಸಿಕ್ಕಿದ ಇಬ್ಬರು ಅರ್ಥಶಾಸ್ತ್ರಜ್ಞರು ಒಂದು ದ್ವೀಪದಲ್ಲಿ ಆಶ್ರಯ ಪಡೆದರು. ಅವರಿಬ್ಬರ ಬಳಿ ಬಿಡಿಗಾಸೂ ಇರಲಿಲ್ಲ. ಆದರೇನು ಮೂರೇ ವರ್ಷಗಳಲ್ಲಿ ಅವರು ತಮ್ಮ ಟೋಪಿಗಳನ್ನು ಒಬ್ಬರಿಗೊಬ್ಬರಿಗೆ ಮಾರಾಟ ಮಾಡುತ್ತಾ ಲಕ್ಷಾಂತರ ರೂಪಾಯಿ ಗಳಿಸಿದರು.

★★★

## ಒಂದೇ ಸಮಸ್ಯೆ?

ಇಬ್ಬರು ವಿಶ್ವನಾಯಕರು ಮಾತನಾಡುತ್ತಿದ್ದಾರೆ. ಬೋರಿಸ್ ಬಿಲ್ ಗೆ ಹೇಳಿದ: ಬಿಲ್, ನನ್ನದೊಂದು ಸಮಸ್ಯೆ. ನನಗೆ 100 ಬಾಡಿಗಾರ್ಡ್ ಗಳಿದ್ದಾರೆ. ಅದರಲ್ಲಿ ಒಬ್ಬ ದ್ರೋಹಿ. ಆದರೆ ಅವನು ಯಾರೆಂದು ನನಗೆ ಗೊತ್ತಿಲ್ಲ.

ಬಿಲ್: ನನಗೆ ಸಲಹೆ ನೀಡಲು 100 ಮಂದಿ ಅರ್ಥಶಾಸ್ತ್ರಜ್ಞರು ಇದ್ದಾರೆ. ನಾನೇ ಏನೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಅವರ ಸಲಹೆ ಕೇಳಬೇಕು. ಅವರಲ್ಲಿ ಒಬ್ಬ ಮಾತ್ರ ನಿಜ ಹೇಳಿರುತ್ತಾನೆ.

ಬೋರಿಸ್: ಅಂದರೆ ನಮ್ಮಿಬ್ಬರದೂ ಒಂದೇ ತರಹದ ಸಮಸ್ಯೆ ಎಂದಾಯಿತು.

ಬಿಲ್: ಆದರೆ ನನ್ನ ವಿಷಯದಲ್ಲಿ ಪ್ರತಿ ಸಲವೂ ಯಾರು ನಿಜ ಹೇಳುತ್ತಾನೆ ಎಂಬುದು ಬದಲಾಗುತ್ತಿರುತ್ತದೆ.

★★★

## ಸೃಷ್ಟಿ ಪ್ರತಿ ಸೃಷ್ಟಿ

ಮೊದಲ ದಿನ ದೇವರು ಸೂರ್ಯನನ್ನು ಸೃಷ್ಟಿಸಿದ. ಸೈತಾನ ಬಿಸಿಲುಂಡೆ ಸೃಷ್ಟಿಸಿದ. ಎರಡನೆ ದಿನ ದೇವರು ಕಾಮ ಸೃಷ್ಟಿಸಿದ. ಸೈತಾನ ಮದುವೆಯನ್ನು ಸೃಷ್ಟಿಸಿದ. ಮೂರನೆಯ ದಿನ ದೇವರು ಒಬ್ಬ ಅರ್ಥಶಾಸ್ತ್ರಜ್ಞನನ್ನು ಸೃಷ್ಟಿಸಿದ. ಸೈತಾನನಿಗೆ ಈಗ ಯೋಚನೆ ಹತ್ತಿಕೊಂಡಿತು.

ಯೋಚಿಸಿ ಯೋಚಿಸಿ ಕೊನೆಗೆ ಇನ್ನೊಬ್ಬ ಅರ್ಥಶಾಸ್ತ್ರಜ್ಞನನ್ನು ಸೃಷ್ಟಿಸಿದ.

★★★

## ಕಾರಣ

ಜ್ಯೋತಿಷ್ಯ ಶಾಸ್ತ್ರ ಏಕೆ ಕಂಡುಹಿಡಿದರು? ಅರ್ಥಶಾಸ್ತ್ರವಾದರೂ ಸರಿ ಇದೆ ಎಂದು ತೋರಿಸಲು.

ಯಾರು ಮೊದಲು?

ದೇವರ ನಿಜವಾದ ವೃತ್ತಿ ಯಾವುದು ಎಂಬುದರ ಬಗ್ಗೆ ಅರ್ಥಶಾಸ್ತ್ರಜ್ಞ, ವೇದಾಂತಿ, ಜೀವವಿಜ್ಞಾನಿ ಮತ್ತು ವಾಸ್ತಶಿಲ್ಪಿ ಮಾತುಕತೆಯಲ್ಲಿ ತೊಡಗಿದ್ದರು. ವೇದಾಂತಿಯ ಪ್ರಕಾರ ದೇವರು ಒಬ್ಬ ವೇದಾಂತಿ ಏಕೆಂದರೆ ಮನುಷ್ಯ ಜೀವಿಸಲು ಬೇಕಾದ ತತ್ವಗಳನ್ನು ನಿರ್ಮಿಸಿದ.

ಜೀವವಿಜ್ಞಾನಿ ಒಪ್ಪಲಿಲ್ಲ. ಅದಕ್ಕೂ ಮುಂಚೆ ದೇವರು ಗಂಡು ಹೆಣ್ಣು ಮತ್ತು ಸಕಲ ಜೀವರಾಶಿಯನ್ನು ನಿರ್ಮಿಸಿದ. ಆದುದರಿಂದ ಅವನೊಬ್ಬ ಜೀವವಿಜ್ಞಾನಿ.

ತಪ್ಪು ಎಂದ ವಾಸ್ತುಶಿಲ್ಪಿ. ಅದಕ್ಕೂ ಮುಂಚೆ ಅವನು ಸ್ವರ್ಗ ಮತ್ತು ಭೂಮಿಯನ್ನು ನಿರ್ಮಿಸಿದ. ಭೂಮಿಗೆ ಮುಂಚೆ ಇದ್ದುದು ಗೊಂದಲ ಮತ್ತು ಅಸ್ತವ್ಯಸ್ಥ ಎಂದು ವಾದಿಸಿದ.

ಹೌದೆ? ಆ ಪರಿಸ್ಥಿತಿ ನಿರ್ಮಿಸಿದ್ದಾದರೂ ಯಾರೆಂದುಕೊಂಡಿರಿ? ಎಂದು ಅರ್ಥಶಾಸ್ತ್ರಜ್ಞ ಕೇಳಿದ.

★★★

## ಮೊದಲ ಅರ್ಥಶಾಸ್ತ್ರಜ್ಞ

ಕ್ರಿಸ್ಟಫರ್ ಕೊಲಂಬಸ್ ವಿಶ್ವದ ಮೊದಲ ಅರ್ಥಶಾಸ್ತ್ರಜ್ಞ ಎನ್ನಲಾಗಿದೆ. ಅವನು ಅಮೆರಿಕ ಸಂಶೋಧಿಸಲು ಹೊರಟಾಗ ಅವನಿಗೆ ತಾನು ಎಲ್ಲಿ ಹೋಗುತ್ತಿದ್ದೇನೆ ಎಂಬುದು ಗೊತ್ತಿರಲಿಲ್ಲ; ಅಲ್ಲಿ ತಲುಪಿದಾಗ ನಾನೆಲ್ಲಿದ್ದೀನಿ ಎಂಬುದು ಗೊತ್ತಿರಲಿಲ್ಲ. ಮತ್ತು ಸರ್ಕಾರಿ ಅನುದಾನದಲ್ಲಿ ಅವನು ಯಾತ್ರೆ ಹೊರಟಿದ್ದ.

❑

## ಕೃಷ್ಣದೇವರಾಯನ ಕಾಲದಲ್ಲಿ ಬೆಲೆಗಳು

ಶ್ರೇಷ್ಠ ದರ್ಜೆಯ ಹತ್ತು ದಾಳಿಂಬೆ ಹಣ್ಣುಗಳಿಗೆ ಒಂದು ಹಣದ ಬೆಲೆ, ಅಂದರೆ ಈಗಿನ ಇಪ್ಪತ್ತು ಪೈಸೆಗಳು. ಈಗಿನ ಎರಡು ರೂಪಾಯಿಗಳಿಗೆ ಆಗ ಹನ್ನೆರಡು ಕುರಿಗಳು ದೊರೆಯುತ್ತಿದ್ದವು. ಈಗಿನ ಹತ್ತು ಪೈಸೆಯ ಸಮನಾದ ನಾಣ್ಯಕ್ಕೆ ಆಗ ಹನ್ನೆರಡು ಪಾರಿವಾಳಗಳನ್ನೂ, ಮರು ದ್ರಾಕ್ಷಿ ಗೊಂಚಲುಗಳನ್ನೂ ಕೊಳ್ಳಬಹುದಿತ್ತು.

**Advertisement**

# Advertisement

# ಸಾಸಿವೆ ಡಬ್ಬಿ ಮತ್ತು ಬಾಳೆಕಾಯಿ ಲೆಕ್ಕ

**- ಬೇಲೂರು ರಾಮಮೂರ್ತಿ**

ಅವಳನ್ನು ನೋಡಿದರೆ, ನೆನೆಸಿಕೊಂಡರೆ ಅಯ್ಯೋ ಪಾಪ ಅನಿಸುತ್ತದೆ. ಅವಳಿಗೆ ಅವಳದೇ ಆದ ಒಂದು ಪರ್ಸು ಇರಲಿಲ್ಲ, ವ್ಯಾನಿಟಿ ಬ್ಯಾಗ್ ಎನ್ನುವ ಪದವೇ ಗೊತ್ತಿರಲಿಲ್ಲ. ಇವೆರಡೂ ಗೊತ್ತಿರಬೇಕು ಎಂದರೆ ಆಕೆಯ ಕೈಯಲ್ಲಿ ದುಡ್ಡು ಓಡಾಡುತ್ತಿರಬೇಕು. ಅದಂತೂ ಬಹಳ ಅಪರೂಪವೇ. ಇನ್ನು ಕಾಲಿಗೆ ಚಪ್ಪಲಿ ಇದ್ದುಬಿಟ್ಟರೆ ಅದೇ ಒಂದು ಐಷಾರಾಮ. ಹೀಗಿರುವಾಗ ಅವಳು ಅವಳಿಗೆ ವ್ಯಾನಿಟಿ ಬ್ಯಾಗು ಮತ್ತು ಪರ್ಸು ಇವುಗಳ ಅವಶ್ಯಕತೆಯಾದರೂ ಎಲ್ಲಿತ್ತು? ದುಡಿಯುವ ಹೆಣ್ಣಾಗಿರದ ಅವಳಿಗೆ ದುಡ್ಡು ಯಾರೂ ಕೊಡುತ್ತಿರಲಿಲ್ಲ. ಅವಳ ಕೆಲಸ ಏನಿದ್ದರೂ ಮನೆಗೆ ಬೇಕಾದ ಪದಾರ್ಥ ಏನೆಂದು, ಎಷ್ಟೆಂದು ತಿಳಿಸಬೇಕು. ಹೀಗಿರುವಾಗ ಅಸಲಿಗೆ ಅವಳ ಕೈಲಿ ಅಪರೂಪಕ್ಕೆ ನಾಲ್ಕು ಕಾಸು ಇದ್ದುಬಿಟ್ಟರೆ ಅದನ್ನು ಕೂಡಿಡುವುದೇ ಕಷ್ಟ. ಇಂಥಾ ನಾಲ್ಕು ಕಾಸು ಅವಳಿಗೆ ಬರುವುದಾದರೂ ಎಲ್ಲಿಂದ ಅಂದರೆ ಶ್ರಾವಣ, ಭಾದ್ರಪದ ಮಾಸಗಳಲ್ಲಿ ಹಬ್ಬಸಾಲುಗಳು ಬಂದಾಗ ಅವಳನ್ನು ಅಕ್ಕ ಪಕ್ಕದ ಮನೆಯವರು, ಹತ್ತಿರದ ನೆಂಟರು ಅರಶಿನ ಕುಂಕುಮಕ್ಕೆ ಬನ್ನಿ ಅಂತ ಕರೆಯುತ್ತಾರೆ. ಎಲೆಯಡಿಕೆ ಜೊತೆ ಮೂರು ಕಾಸು, ಆರು ಕಾಸು, ಹೆಚ್ಚೆಂದರೆ ಒಂದಾಣೆ ಇಟ್ಟು ಕೊಡುತ್ತಿದ್ದರು. ಹೀಗೆ ಬಂದ ಕಾಸುಗಳನ್ನು ಅವಳು ತನ್ನ ಸೇಫ್ ಡಿಪಾಸಿಟ್ ಲಾಕರ್‌ನಲ್ಲಿ ಇಡುತ್ತಿದ್ದಳು. ಪರ್ಸು, ದುಡ್ಡೇ ಇಲ್ಲದವಳಿಗೆ ಸೇಫ್ ಡಿಪಾಸಿಟ್ ಲಾಕರ್ ಎಲ್ಲಿಂದ ಬಂತು ಅಂದರೆ ಅದು ಅವಳ ಅಚ್ಚುಮೆಚ್ಚಿನ ಅಡಿಗೆ ಮನೆಯ ಬಡುವಿನ ಮೇಲೆ ಸಾಲಾಗಿ ಇಟ್ಟಿರುವ ಡಬ್ಬಗಳ ಪೈಕಿ ಇರುವ ಸಾಸಿವೆ ಡಬ್ಬ. ಆ ಕಾಲದ ಹೆಂಗಸರು ಯಾಕೆ ಸಾಸಿವೆ ಡಬ್ಬದಲ್ಲೇ ಕಾಸು ಮುಚ್ಚಿಡುತ್ತಿದ್ದರು ಎನ್ನುವುದಕ್ಕೂ ಒಂದು ಅರ್ಥವಿದೆ. ಅಪರೂಪಕ್ಕೆ ಒಮ್ಮೊಮ್ಮೆ ಗಂಡನೋ ಇಲ್ಲಾ ಬೆಳೆದ ಮಕ್ಕಳೋ, ಬಾಯಿ ತುರಿಸಿಕೊಳ್ಳಲು ಕಡ್ಲೆಕಾಯಿ ಬೀಜದ ಡಬ್ಬಕ್ಕೋ, ಕಡ್ಲೆ ಡಬ್ಬಕ್ಕೋ ಬೆಲ್ಲದ ಡಬ್ಬಕ್ಕೋ (ಆಗ ಸಕ್ಕರೆ ಅಪರೂಪ ಎಲ್ಲರ ಮನೇಲೂ ಬೆಲ್ಲವೇ) ಕೊಬ್ಬರಿ ಡಬ್ಬಕ್ಕೋ ಕೈ ಹಾಕಿದರೆ, ಅವುಗಳಲ್ಲೇನಾದರೂ ಕಾಸು ಕೂಡಿಟ್ಟಿದ್ದರೆ ಅದು ಅವರಿಗೆ ಸಿಕ್ಕಿಬಿಡುತ್ತಿತ್ತು. ಬಾಯಾಡಿಸಬೇಕು ಅನಿಸಿದರೆ ಅವರುಗಳು ಕೈ ಹಾಕುತ್ತಿದ್ದುದು ಇಂಥಾ ಡಬ್ಬಗಳಿಗೇ. ಆದರೆ ಅಪ್ಪಿ ತಪ್ಪಿಯೂ ಸಾಸಿವೆ ಡಬ್ಬಕ್ಕೆ ಕೈ ಹಾಕುತ್ತಿರಲಿಲ್ಲ. ಹೀಗಾಗಿ ಸಾಸಿವೆ ಡಬ್ಬ ಅತ್ಯಂತ ಹಿಂದಿನ ಸಾಲಿನಲ್ಲಿ ಇಟ್ಟಿರುತ್ತಿದ್ದರು ಮತ್ತು ಅದು ಅತ್ಯಂತ ಸುರಕ್ಷಿತವೂ ಆಗಿರುತ್ತಿತ್ತು. ಹೀಗೆ ಸಾಸಿವೆ ಡಬ್ಬದಲ್ಲಿ ಕೂಡಿಟ್ಟ ಕಾಸು ಎಷ್ಟಿದೆ ಅನ್ನೋದೋ ಗೊತ್ತಿರುತ್ತಿರಲಿಲ್ಲ. ಹೀಗೆ ಕೂಡಿಟ್ಟ ಕಾಸು ಮನೆಯ ಖರ್ಚಿಗೇ ಉಪಯೋಗವಾಗುತ್ತಿತ್ತೇ ಹೊರತು ಅವಳ ಸ್ವಂತಕ್ಕೆ ಖರ್ಚಾಗುತ್ತಿರಲಿಲ್ಲ. ಪಾಪ ಅವಳಿಗೆ ಸ್ವಂತ ಖರ್ಚು ಅಂತ ಏನಿತ್ತು? ಹೀಗಾಗಿ ಸಮಯ ಸಂದರ್ಭ ಬಂತು ಅಂದರೆ, ಇನ್ನೇನು ಬೇರೆ ದಾರಿಯೇ ಇಲ್ಲ ಅನಿಸಿದರೆ, ಆಗ ಸಾಸಿವೆ ಡಬ್ಬಕ್ಕೆ ಕೈ ಹಾಕುತ್ತಿದ್ದರು. ಆಗಿನ ಕಾಲದಲ್ಲಿ ಪಾಪ ಕಡಿಮೆ ಸಂಬಳದ, ಹೆಚ್ಚು ಮಕ್ಕಳ ಮನೆಯ ಯಜಮಾನ ತನ್ನ ಸಂಬಳದ ಹಣ

ಅಥವಾ ಪಿಂಚಣಿ ಹಣ ಎಲ್ಲಾ ಖಾಲಿಯಾದಾಗ ಹ್ಯಾಪ್ ಮೋರೆ ಹಾಕಿಕೊಂಡು ಲೇ ಇವಳೇ, ನಿನ್ನ ಸಾಸಿವೆ ಡಬ್ಬದಲ್ಲಿ ಏನಾದರೂ ಕಾಸು ಇಟ್ಟಿದೆಯಾ ನೋಡು ಅನ್ನುತ್ತಿದ್ದರು. ಆಕೆಗೆ ಮನಸ್ಸಿದ್ದರೆ ಇರೋ ಆರೋ ಮೂರೋ ಕಾಸನ್ನು ತೆಗೆದು ಕೊಡುತ್ತಿದ್ದಳು. ಇಲ್ಲದಿದ್ದರೆ ನೀವೇನು ನನಗೆ ಬಹಳಾ ಕಾಸು ಕೊಟ್ಟು ಇಟ್ಟಿದೀರ ಅದಕ್ಕೇ ಇವಾಗ ಕೇಳ್ತಾ ಇದೀರೇನೋ ಅಂದು ಕೊಂಕು ನುಡಿಯುತ್ತಿದ್ದಳು.

ಅವಳು ಹೀಗೆ ಮುಚ್ಚಿಡುತ್ತಿದ್ದ ಕಾಸು ಎಲ್ಲೋ ಅಪರೂಪಕ್ಕೆ ಒಮ್ಮೆ ಬಳೆಗಾರ ಬಂದರೆ, ಬಳೆಗಳು ಚನ್ನಾಗಿತ್ತು ಎಂದರೆ ಗಂಡನ ಬಳಿ ಹೋಗಿ ಏನೂಂದ್ರೆ ಬಳೆಗಾರ ಬಂದಿದಾನೆ, ಒಂದೆರಡು ಜೊತೆ ಬಳೆ ತಗೋಳೋಣ ಅಂತ, ದುಡ್ಡು ಕೊಡ್ತೀರಾ ಅಂತ ಕೇಳಿದರೆ ಗಂಡ ದುಡ್ಡಾ ನನ್ನತ್ರ ಎಲ್ಲಿದೆ ಅಂತ ತಲೆಯಾಡಿಸಿದ ಸಂದರ್ಭಗಳಲ್ಲಿ ಅವಳು ಸಾಸಿವೆ ಡಬ್ಬದಲ್ಲಿ ಕೂಡಿಟ್ಟ ಕಾಸು ಉಪಯೋಗವಾಗುತ್ತಿತ್ತು. ಕೆಲವು ವೇಳೆ ಮಕ್ಕಳು ಸ್ಕೂಲು ಪುಸ್ತಕ ತಗೋಬೇಕು ಅಂದಾಗ, ಪೆನ್ಸಿಲ್ ಮುರಿದುಹೋಗಿದೆ ಎಂದಾಗ ಪೆನ್ನಿಗೆ ಹೊಸ ನಿಬ್ಬು ಹಾಕಿಸಬೇಕು ಎಂದಾಗ, ದುಡ್ಡಿಲ್ಲದ ಗಂಡ ಮಕ್ಕಳನ್ನು ವಿನಾಕಾರಣ ಬೈದಾಗ ಅವಳು ಮಕ್ಕಳಿಗೆ ಸಾಸಿವೆ ಡಬ್ಬದಿಂದ ಕಾಸು ತೆಗೆದುಕೊಡುತ್ತಿದ್ದಳು. ನಂತರ ಮಕ್ಕಳು ಪೆನ್ನಿನ ನಿಬ್ಬು ಪೆನ್ಸಿಲು ಇತ್ಯಾದಿಗಳನ್ನು ತಂದೆಗೆ ತೋರಿಸಿ ನೋಡಪ್ಪಾ ಇದನ್ನು ಅಮ್ಮ ಕೊಡಿಸಿದಳು ಅಂದರೆ ಗಂಡ ಇದಕ್ಕೆ ನಿನ್ನತ್ರ ಎಲ್ಲಿತ್ತೇ ದುಡ್ಡು ಎನ್ನೋ ಪೌರುಷದ ಪ್ರಶ್ನೆಗೆ ಅವಳು ಉತ್ತರ ಕೊಡಬೇಕಾಗಿತ್ತು.

ಹೀಗೆ ಉಳಿದ ಕಾಸನ್ನೇನೋ ಸಾಸಿವೆ ಡಬ್ಬದಲ್ಲಿ ಹಾಕುತ್ತಾಳೆ ಸರಿ, ಆದರೆ ಬೇರೊಬ್ಬರ ಮನೆಗೆ ಅರಶಿನ ಕುಂಕುಮಕ್ಕೆ ಹೋದಾಗ ಅವರು ಕೊಟ್ಟ ಕಾಸನ್ನು ಜೋಪಾನವಾಗಿ ಮನೆಗೆ ತರೋದು ಹೇಗೆ. ಎಲೆಯಡಿಕೆ ಜೊತೆಯೇ ಇದ್ದರೆ ಅದು ಬಿದ್ದು ಹೋಗೋ ಸಾಧ್ಯತೆ ಇರುತ್ತೆ. ಈಗ ಎಲೆಯಡಿಕೆ ಕೊಟ್ಟೋರು ತಾಳಿ ಒಂದು ಕವರ್ ಕೊಡ್ತೀನಿ ಅಂತ ಪ್ಲಾಸ್ಟಿಕ್ ಕವರ್ ಕೊಡುತ್ತಾರೆ. ಇಲ್ಲದಿದ್ದರೆ ಒಂದು ಕವರ್ ಕೊಡಿ ಸೀತಮ್ಮ ಅಂತ ಇವರೇ ಕೇಳಿ ತಗೊಳ್ತಾರೆ. ಆದರೆ ಆಗೆಲ್ಲ ಪ್ಲಾಸ್ಟಿಕ್ ಹೆಸರೇ ಕೇಳಿರಲಿಲ್ಲ. ಇನ್ನು ಕವರ್ ಎಲ್ಲಿ ಬರಬೇಕು. ಎಲೆಯಡಿಕೆ ಜೊತೆ ಇಟ್ಟ ಮೂರು, ಆರು ಕಾಸು ಒಂದಾಣೆ, ಎರಡಾಣೆ ಇವುಗಳನ್ನು ಬಲಗೈಲಿ ತಗೊಂಡು ಅದನ್ನು ಎಡಗೈಗೆ ಹಸ್ತಾಂತರಿಸಿ ಅದನ್ನು ತಮ್ಮ ಬಾಳೆಕಾಯಿಗೆ ಸೇರಿಸಿಕೊಳ್ಳೋರು. ಏನಿದು ಬಾಳೆಕಾಯಿ ಅಂತ ಈಗಿನವರಿಗೆ ಅಚ್ಚರಿಯಾಗಬಹುದು. ಹಿಂದಿನ ಕಾಲದ ಹೆಂಗಸರೆಲ್ಲಾ ಉಡುತ್ತಿದ್ದುದು ಹದಿನೆಂಟು ಮೊಳದ ಸೀರೆಗಳನ್ನೇ, ನಿರಿಗೆಯನ್ನು ಮಡಿಸಿ ಸೊಂಟಕ್ಕೆ ಸಿಕ್ಕಿಸಿಕೊಳ್ಳುವಾಗ ಸೊಂಟದ ಬಳಿ ಸೀರೆಯ ಮಡಿಕೆ ಒಂದು ಬಾಳೆಕಾಯಿ ರೂಪ ಪಡೆದುಕೊಳ್ಳುತ್ತಿತ್ತು. ಅದರ ಒಳಪದರದಲ್ಲಿ ಕಾಸು ಇಟ್ಟುಕೊಳ್ಳಬಹುದಿತ್ತು. ಅದು ಖಂಡಿತಾ ಕೆಳಗೆ ಬೀಳುತ್ತಿರಲಿಲ್ಲ. ಕೆಲವು ಮನೆ ಗಂಡಸರು ತಮ್ಮ ಮನೆ ಹೆಂಗಸರು ಅಕ್ಕ ಪಕ್ಕದ ಮನೆಗಳಿಗೆ ಅರಶಿನ ಕುಂಕುಮಗಳಿಗೆ ಹೋಗಿ ಬರ್ತಾರೆ ಅಂದರೆ ಅವರು ಬಂದಾಗ ಎಲೆಯಡಿಕೆ ತರೋದನ್ನೇ ಕಾಯುತ್ತಿದ್ದರು. ಬಂದೊಡನೇ ವಿಳ್ಳೇದೆಲೆ ಜೊತೆ ಇರುವ ಕಾಸಿಗೆ ಕೈ ಹಾಕುತ್ತಿದ್ದರು. ಅದನ್ನು ಬೇಡ ಎನ್ನುವ ಧೈರ್ಯ ಹೆಂಗಸರಿಗೆ ಇರುತ್ತಿರಲಿಲ್ಲ. ಎಲೆಯಡಿಕೆಯ ಜೊತೆ ಬಂದ ಆಣೆಗಳು ಗಂಡನ ಕೈಗೆ

ಸಿಗಬಾರದು ಎಂದರೆ ಅದನ್ನು ಕೊಟ್ಟವರ ಮನೇಲೇ ಬಾಳೆಕಾಯಿಗೆ ಸೇರಿಸಿಬಿಡೋರು. ಆದರೆ ಎಷ್ಟೋ ಗಂಡಸರು ಬುದ್ಧಿವಂತರು. ಎಲ್ಲೇ ಕಾಸು ಆಗಲೇ ಅದನ್ನು ಬಾಳೆಕಾಯಿಗೆ ಸೇರಿಸಿಬಿಟ್ಯಾ ಎಲ್ಲಿ ತೆಗಿ ನನಗೆ ನಶ್ಯಕ್ಕೆ ಕಾಸು ಬೇಕಾಗಿತ್ತು ಅಂತ ಕೇಳಿ ಇಸ್ಕೊಳೋರು. ಆಗಿನ ಕಾಲದ ಹೆಂಗಸರು ತಮ್ಮಲ್ಲಿ ಉಳಿಯುವ ಚಿಕ್ಕ ಪುಟ್ಟ ಕಾಸುಗಳನ್ನು ಕೂಡಿಡಲು ಸಾಸಿವೆ ಡಬ್ಬ ಒಂದು ಸಾಧನವಾದರೆ ಬಾಳೆಕಾಯಿ ನೆರಿಗೆ ಹಣವನ್ನು ಅತ್ತಿತ್ತ ಸಾಗಿಸುವ ಸಾಧನವಾಗಿರೋದು.


ತಮ್ಮ ಮನೇಲಿ ಇನ್ಯಾರ ಕಣ್ಣಿಗಾದರೂ ಇದು ಬಿದ್ದರೆ ಅದಕ್ಕೆ ಉಳಿಗಾಲವಿಲ್ಲ ಎಂದುಕೊಳ್ಳುವ ಅನೇಕ ಹೆಂಗಸರು ತಮ್ಮಲ್ಲಿ ಉಳಿದ ಹಣವನ್ನು – ಸಾಸಿವೆ ಡಬ್ಬದಲ್ಲಿ ಇಟ್ಟರೂ ಅವರ ಮನೆಯವರು ತೆಗೆದುಬಿಡುತ್ತಾರೆ ಎನ್ನುವ ಭಯದಿಂದ – ಅಕ್ಕಪಕ್ಕದ ಮನೆಯವರಿಗೆ ಕೊಟ್ಟು ಸುಂದರಮ್ಮ ಇದನ್ನು ನಿಮ್ಮ ಮನೆ ಸಾಸಿವೆ ಡಬ್ಬದಲ್ಲಿ ಜೋಪಾನ ಮಾಡಿಡ್ರೀ, ನನಗೆ ಬೇಕಾದಾಗ ತಗೋತೀನಿ ಎನ್ನುತ್ತಿದ್ದರು. ಹೀಗೆ ಒಬ್ಬರ ಮನೆಯ ಸಾಸಿವೆ ಡಬ್ಬಿ ಇನ್ನೊಬ್ಬರ ಮನೆಯ ಹಣವನ್ನು ಕೂಡಿಡುವ ಬ್ಯಾಂಕೂ ಆಗುತ್ತಿತ್ತು. ಇಂಥಾ ಸಾಸಿವೆ ಡಬ್ಬದ ಕಾಸುಗಳು ಎಷ್ಟೋ ಸಾರಿ ಮನೆಯ ಮರ್ಯಾದೆಯನ್ನೂ ಕಾಪಾಡುತ್ತಿದ್ದವು. ಒಮ್ಮೊಮ್ಮೆ ಮನೆಯ ಗಂಡಸರು ಊರಿನಲ್ಲಿ ಇಲ್ಲ ಎಂದರೆ, ಅಪರೂಪಕ್ಕೆ ಯಾರಾದರೂ ನೆಂಟರು ಬಂದುಬಿಟ್ಟರೆ, ಮನೇಲಿ ಕೆಲವು ಪದಾರ್ಥಗಳು ಇಲ್ಲದಿದ್ದಾಗ ಅವರಿವರನ್ನು ಕೇಳೋದು ಹೇಗೆ ಎನಿಸಿ ಮನೇಲಿ ಇರುತ್ತಿದ್ದ ಸಾಸಿವೆ ಡಬ್ಬದ ಕಾಸಿನಿಂದ ಬೇಕಾದ ಪದಾರ್ಥ ತರಿಸುತ್ತಿದ್ದರು. ಹೀಗಾಗಿ ಆಗಾಗ ಇಷ್ಟೋ ಅಷ್ಟೋ ಎಷ್ಟೋ ಉಳಿದು ಸಾಸಿವೆ ಡಬ್ಬ ಸೇರಿದ ಕಾಸು ಮನೆಯ ಗೌರವವನ್ನು ಕಾಪಾಡುತ್ತಿತ್ತು. ಆದರೆ ಮನೆಯ ಮಕ್ಕಳ ಕಣ್ಣು ಈ ಸಾಸಿವೆ ಡಬ್ಬಕ್ಕೆ ಹೋಗದಂತೆ ಎಚ್ಚರ ವಹಿಸಬೇಕಾಗಿತ್ತು. ಮಕ್ಕಳು ಚಿಕ್ಕವರಾಗಿದ್ದಾಗ ಎತ್ತರದ ಹಲಗೆ ಅವರಿಗೆ ಸಿಗುತ್ತಿರಲಿಲ್ಲ. ಹೀಗಾಗಿ ತಾಪತ್ರಯ ಇಲ್ಲ. ಆದರೆ ಮಕ್ಕಳು ಬೆಳೆದು ಅಮ್ಮನೆತ್ತರಕ್ಕೆ ಬೆಳೆದಾಗ ಅವರಿಗೂ ಅಂಗಡೀಲಿ ಏನಾದರೂ ತಗೋಬೇಕು ಅನಿಸಿದಾಗ ಕೇಳಿದರೆ ಮನೇಲಿ ಕಾಸು ಹುಟ್ಟಲ್ಲ ಎನ್ನೋದು ಗೊತ್ತಾದಾಗ, ಬೇಡವೆಂದರೂ ಅಮ್ಮ ಮುಚ್ಚಿಟ್ಟಿರುವ ಸಾಸಿವೆ ಡಬ್ಬದ ಕಾಸಿನತ್ತ ಗಮನ ಹೋಗುತ್ತಿತ್ತು. ಹೀಗಾಗಿ ಹೆಂಗಸರು ಸಾಸಿವೆ ಡಬ್ಬದ ಸ್ಥಾನಗಳನ್ನು ಆಗಾಗ ಬದಲಾಯಿಸುತ್ತಿದ್ದರು.

ಆಗೆಲ್ಲಾ ಹೆಂಗಸರು ಹೊರಗೆ ಹೋಗುತ್ತಿದ್ದುದು ಎಂದರೆ ನೆರೆಹೊರೆಯ ಹೆಂಗಸರೊಂದಿಗೆ ಊರಿನಲ್ಲಿರುವ ಒಂದು ದೇವಸ್ಥಾನಕ್ಕೆ. ಅದೂ ಮನೆಲಿರುವ ಗಂಡನಿಗೆ ಹೇಳಿ ದೇವಸ್ಥಾನಕ್ಕೆ ಹೋಗಿ ಬರ್ತೀನಿ ಅಂದು ಹೋಗುತ್ತಿದ್ದರು. ಮನೆಯಲ್ಲಿರುವ ಗಂಡಸರಿಗೆ ಗೊತ್ತು ದೇವಸ್ಥಾನಕ್ಕೆ ಹೋಗಿ ಬರೋಕೆ ಎಷ್ಟು ಹೊತ್ತಾಗುತ್ತೆ ಅಂತ. ಅಷ್ಟು ಹೊತ್ತಿಗೆ ವಾಪಸ್ ಬಂದುಬಿಡಬೇಕು ಎನ್ನುವ ಧಾವಂತವೂ ಇರುತ್ತಿತ್ತು. ಆಗ ಹುಂಡಿಗೆ ಹಾಕೋಣ ಅಂತ ಕಾಸು ತಗೊಂಡು ಹೋಗೋರು. ಆಗ ಅವರ ಸೀರೆಯ ಸೆರಗಿನ ಬಾಳೆಕಾಯಿ ಸಹಾಯಕ್ಕೆ ಬರೋದು. ಅದರಲ್ಲಿ ಕಾಸನ್ನು ಹುದುಗಿಸಿಟ್ಟು ತಗೊಂಡು ಹೋಗೋರು. ಇನ್ನು ಯಾರಿಗಾದರೂ ಅಷ್ಟೋ ಇಷ್ಟೋ ಸಹಾಯ ಮಾಡಬೇಕು ಅಂದಾಗಲೂ ಹೀಗೆಯೇ ಹಣ ಸಾಗಾಟ ನಡೆಯುತ್ತಿತ್ತು. ಯಾರದ್ದಾದರೂ ಮನೆಯಲ್ಲಿ

ಮಗೂಗೆ ಆರತಿ ಎಂದರೆ ಅನೇಕ ಹೆಂಗಸರು ಹೋಗುತ್ತಿದ್ದರು. ಆರತಿ ತಟ್ಟೆಗೆ ಹಾಕೋಕೆ ದುಡ್ಡು ಇಲ್ಲದಿದ್ದಾಗ, ಅಥವಾ ದುಡ್ಡು ಮರೆತು ಬಂದಿರುವಾಗ ಪಕ್ಕದಲ್ಲಿರುವವರನ್ನು ಏನ್ರೀ ಸುಂದರಮ್ಮ ನಿಮ್ಮ ಬಾಳೆಕಾಯಿಂದ ನನಗೊಂದು ಕಾಸು ಕೊಟ್ಟಿರಿ ಆರತಿ ತಟ್ಟೆಗೆ ಹಾಕೋಕೆ. ನಾನು ನಾಳೆ ನಿಮಗೆ ಕೊಡ್ತೀನಿ ಅಂದು ಸಾಲ ಪಡೆಯುತ್ತಿದ್ದರು. ಆಗಿನ ಕಾಲದ ಸಾಲದ ವ್ಯವಹಾರ ಹೀಗೆ ಸಾಗುತ್ತಿತ್ತು. ಹೊರಗಿನ ವ್ಯವಹಾರ್ದಲ್ಲಿ ಲೆಕ್ಕಾಚಾರ ಹೇಗೆ ಮುಖ್ಯವೋ ಹಾಗೆಯೇ ಮನೆಯ ಒಳಗಿನ ಲೆಕ್ಕಾಚಾರದ ಲೆಕ್ಕವೂ ಬಹಳ ಮುಖ್ಯ. ಈಗಿನ ಹುಡುಗಿಯರು, ಹೆಂಗಸರು ಧಾರಾಳವಾಗಿ ದುಡಿಯುತ್ತಾರೆ, ಖರ್ಚೂ ಮಾಡುತ್ತಾರೆ. ಪಾಪ ಆಗಿನ ಕಾಲದ ಹೆಂಗಸರು ದುಡಿಯುವ ಸಾಧ್ಯತೆ ಇರಲಿಲ್ಲ, ಖರ್ಚಂತೂ ಕಡಿಮೆಯೇ. ಆದರೂ ತಮ್ಮ ಕೈಗೆ ಸಿಗುವ ಕೆಲವೇ ಕೆಲವು ಕಾಸುಗಳನ್ನು ಹೀಗೆ ಸಾಸಿವೆ ಡಬ್ಬದಲ್ಲಿ ಕೂಡಿಡುತ್ತಾ, ತಮ್ಮ ಸೀರೆಯ ಸೆರಗಿನ ಬಾಳೆಕಾಯಿಯಲ್ಲಿ ಸಾಗಿಸುತ್ತಾ ಇದೇ ನಮಗೆ ಅತ್ಯುತ್ತಮ ಅಂದುಕೊಳ್ಳುತ್ತಿದ್ದರು. ಈಗಿನ ಹೆಣ್ಣು ಮಕ್ಕಳಿಗೆ ಬಹುಶಃ ಸಾಸಿವೆ ಡಬ್ಬದ ಕಾಸು, ಬಾಳೆಕಾಯಿಯ ಕಾಸು ಇವುಗಳ ಬಗೆಗೆ ಪರಿಚಯ ಇರಲಾರದು. ಮನೆಯಲ್ಲಿ ಹಿರಿಯರು ನೆನಪಿಸಿಕೊಂಡಾಗ ಮಾತ್ರ ತಿಳಿಯಬಹುದು.

❑

## ಆರ್ಥಿಕ ಸ್ಥಿತಿಯ ಏಳುಬೀಳು



# ಅಮೇರಿಕಾ ಮೊಮ್ಮಗ

**- ನುಗ್ಗೆಹಳ್ಳಿ ಪಂಕಜ**

**ಸುಂ**ದರಮ್ಮನಿಗೆ ಖುಶಿಯೋ ಖುಶಿ! ವಟಾರದ ಬರ್ತಿ ಕುಣಿದಾಡಿಬಿಟ್ರು. ತಕ್ಷಣ ನೆರೆಹೊರೆಯವರೆಲ್ಲಾ ಸುತ್ತಲೂ ನೆರೆದ್ರು, ಒಂದೇ ಕುತೂಹಲದಿಂದ. ಗಂಭೀರ ಸ್ವಭಾವದ ಸುಂದರಮ್ಮ ಆ ರೀತಿ ಡ್ಯಾನ್ಸ್ ಮಾಡಿದ್ದನ್ನ ಈವರೆಗೂ ಯಾರೂ ಕಂಡಿದ್ದಿಲ್ಲ! ಅವರ ಅಮೇರಿಕಾ ಮಗ ನಮ್ಮ ಇಂಡಿಯಾಗೇ ಶಿಫ್ಟ್ ಆಗ್ತಿದಾನೋ? ಆಗವನು ಪ್ಯಾಲೆಸ್ ಆರ್ಚರ್ಡ್ಸನಲ್ಲೋ-ಡಾಲರ್‌ಕಾಲೊನಿನಲ್ಲೊ ಮನೆಮಾಡ್ತಾನೆ.... ತಾಯೀನ ಇಲ್ಲಿರೊಕ್ಕೆ ಬಿಡ್ತಾನೆಯೇ? ಈಗ ಅಂದ್ರೆ, ಒಬ್ಬಂಟಿಗಳಾದ ಸುಂದರಮ್ಮನಿಗೆ ಈ ವಟಾರದಲ್ಲಿ ಭದ್ರತೆ -ಜೊತೆ ಎರಡೂ ಉಂಟೂಂತ ಇಟ್ಟಿರೋದು......

''ಎಯ್, ನಾನೆಲ್ಲೂ ಹೊಗಲ್ಲ, ನಿಮ್ಮನ್ನೆಲ್ಲ ಬಿಟ್ಟು'' - ಅವರ ಮನಸ್ಸನ್ನ ಗ್ರಹಿಸಿದವರಂತೆ ಸುಂದರಮ್ಮ ಆಶ್ವಾಸನೆ ಕೊಟ್ರು- ''ನನ್ನ ಮೊಮ್ಮಗ - ಅದೇ, ಅಮೇರಿಕಾ ಮೊಮ್ಮಗ, ನಾಳೆ ಬರ್ತಿದಾನೆ, ಇಲ್ಲೇ ರಜೆ ಕಳೆಯೊಕ್ಕೆ'' - ಅಂತ ಘೋಷಿಸಿದ್ದೇ ತಡ, ಎಲ್ರೂ ಒಂದೇ ಸಂಭ್ರಮದಿಂದ ಕುಣಿದಾಡಿಬಿಟ್ರು, ಅಮೇರಿಕಾನೇ ತಮ್ಮ ವಟಾರಕ್ಕೆ ಬಂದು ಇಳಿಯತ್ತೇನೋ ಎಂಬಂತೆ!

ವಿಶಯ ಇಷ್ಟೆ- ಆ ಮೊಮ್ಮಗನಿಗೆ ಇಂಡಿಯಾನ ನೋಡ್ಬೇಕೂಂತ ಆಸೆ; ಸ್ವಲ್ಪ ದಿವಸ ಇಂಡಿಯನ್ ಗ್ರ್ಯಾನಿ ಜೊತೆ ಇರ್ಬೇಕೂಂತ ಹಂಬಲ! ''ಸ್ವಲ್ಪ ನಮ್ಮ ಆಚಾರ-ವಿಚಾರ ಎಲ್ಲಾದನ್ನೂ ಕಲಿಸ್ಕೊಡಮ್ಮಾ-ತೀರಾ ಅಮೆರಿಕನ್ ಹುಡುಗ ಆಗ್ಬಿಟ್ಟಿದಾನೆ!'' - ಅಂತ ಮಗ ಫೋನ್ಮಾಡಿದ್ದ - ''ನನ್ನ ಫ್ರೆಂಡ್ ಕರ್ಕೊಂಡು ಬಂದು ಬಿಡ್ತಾನೆ. ಒಂದು ತಿಂಗಳಾದ್ಮೇಲೆ ವಾಪಸ್ ಕರ್ಕೊಂಡು ಹೋಗ್ತಾನೆ-ಅ, ಇನ್ನೊಂದು ವಿಷಯ. ಅವನಿಗೆ ಕನ್ನಡ ಅಲ್ಪ-ಸ್ವಲ್ಪ ಅರ್ಥಾ ಆಗತ್ತೆ, ಆದ್ರೆ ಪಾಪ, ಮಾತಾಡೊಕ್ಕೆ ಬರಲ್ಲ; ನಿನ್ನ ವಠಾರದಲ್ಲಿರೊ ಕಮಲಮ್ಮನ ಸೊಸೆಗೆ ಇಂಗ್ಲೀಷ್ ಬರತ್ತಲ್ಲಾ, ಆಕೆ ಹೆಲ್ಪ್ ತಗೋ.''

ಬಂದಿಳಿದ ಮೊಮ್ಮಗ ಜೋರಾಗಿದ್ದ! ಒಳ್ಳೆ ಉದ್ದ-ಬಣ್ಣ! ವಠಾರದ ಹೆಂಗಸರೆಲ್ಲಾ ಲಟ್ಟಿಗೆ ಮುರಿದ್ರು; ಹೆಣ್ಣುಮಕ್ಕಳೆಲ್ಲಾ ಬಾಗಿಲು ಕಿಟಕಿಗಳ ಸಂದಿಯಿಂದ ಇಣುಕಿ ಇಣುಕಿ ನೋಡಿದ್ರು. ಸುಂದರಮ್ಮನಿಗೋ, ಒಂದೇ ಹೆಮ್ಮೆ! ತಮಗೆ ಬರ್ತಿದ್ದ ಹರಕು ಮುರುಕು ಇಂಗ್ಲೀಷಲ್ಲಿ ಮಾತಾಡಲು ನೋಡಿದ್ರು. ಎಲ್ಲದಕ್ಕೂ ಅವನು ''ಒಕೆ, ಒಕೆ'' - ಎಂದು ತಲೆ ಅಲ್ಲಾಡಿಸ್ತಿದ್ದ. ವಿಧಿಯಿಲ್ದೆ, ಮಗ ಹೇಳಿದಂತೆ ಕಮಲಮ್ಮನ ಸೊಸೆಗೆ ಹೇಳಿಕಳಿಸಿದ್ರು. ಜಂಬದಿಂದ ಓಡೋಡಿ ಬಂದ ಆಕೆಗೂ ಸ್ವಲ್ಪ ತಬ್ಬಿಬ್ಬು-ಹುಡುಗ ಅಮೇರಿಕನ್ ಆಕ್ಸೆಂಟ್ ಕೇಳಿ!

''ಕಡಬು ಗಾಡ್ ಅನ್ನ ನೋಡ್ಬೇಕಂತೆ - ಬನ್ನಿ, ಗಣೇಶನ ಗುಡಿಗೆ ಹೋಗೋಣ'' - ಕಮಲಮ್ಮನ ಸೊಸೆ ಕರ್ಕೊಂಡು ಹೋದಳು. ಹೋಗಿದ್ದೇ ತಡ - ''ನನ್ನ ಮೊಮ್ಮಗ - ಅಮೇರಿಕದಿಂದ ಬಂದಿದಾನೆ'' - ಹೆಮ್ಮೆಯಿಂದ ಸುಂದರಮ್ಮ ಅಲ್ಲಿದ್ದ ಭಟ್ಟರಿಗೆಲ್ಲಾ ಗುರುತು ಮಾಡಿಕೊಟ್ರು.

ತಕ್ಷಣ ಮೊಮ್ಮಗ ಮುಗುಳುನಗುತ್ತಾ – ''ಹಾಯ್'' – ಎಂದ, ಒಬ್ಬೊಬ್ಬರಿಗೂ. ಪಾಪ, ಆ ಭಟ್ಟರು ಅಮೇರಿಕಾಗೆ ಹೋಗಿಬಂದವ್ರಲ್ಲ. ಅಂತೆಯೇ ಈ ಸಂಭೋದನೆ ಅರ್ಥವಾಗ್ಲಿಲ್ಲ. ಸುಂದರಮ್ಮನ ಮುಖ ನೋಡಿದ್ರು. ''ಅಲ್ಲಿ ಎಲ್ರನ್ನೂ ಗ್ರೀಟ್ ಮಾಡೋದೇ ಹೀಗೆ'' – ಕಮಲಮ್ಮನ ಸೊಸೆ ವಿವರಿಸಿದಳು – ''ಪಾಪ, ಇಲ್ಲಿಯ ಶಿಷ್ಟಾಚಾರ ಗೊತ್ತಿಲ್ಲ, ಹುಡುಗನಿಗೆ; ಸ್ವಲ್ಪಸ್ವಲ್ಪವಾಗಿ ಕಲಿಸೋಣ ಅಂತ... ಅದಿರ್ಲಿ, ಹುಡುಗನ ಹೆಸರಲ್ಲಿ ಒಂದು ಅರ್ಚನೆ ಮಾಡಿ.'' ''ಅದಕ್ಕೇನಂತೆ, ಅಲ್ಲಿಯವರಿಗೆ ಮಾಡೋದು ನಮ್ಮ ಭಾಗ್ಯ! ಹೇಳಿ – ಗೋತ್ರ? ನಕ್ಷತ್ರ?'' ''ಭಟ್ಟರು ಪ್ರಶ್ನಿಸಿದ್ದೇ ತಡ, ಬಾಯಿಪಾಠ ಮಾಡಿಕೊಂಡಿದ್ದವನಂತೆ ಮೊಮ್ಮಗ ಒಪ್ಪಿಸಿಯೇ ಬಿಟ್ಟ! ಎಲ್ಲಾ ಸರಿ, ಆದ್ರೆ, ತನ್ನ ಹೆಸರನ್ನ ''ರಾಬೆ'' ಎಂದು ಅವನು ಹೇಳಿದಾಗ ಮಾತ್ರ, ಕಸಿವಿಸಿಯಾಯ್ತು ಅಜ್ಜಿಗೆ. ಅಲ್ಲಾ, ದಿವನಾಗಿ 'ರಾಘವೇಂದ್ರ' ಅಂತ ಅವನ ತಾತನ ಹೆಸರನ್ನ ಇಟ್ಟಿರಲಿಲ್ವೇ? ಮತ್ತೆ, ಈ 'ರಾಬೆ, ಗೂಬೆ, ಕಾಗೆ' – ಹೇಗಾಯ್ತು?

ಅದೇನೇ ಇರಲಿ, ಮೊಮ್ಮಗನಿಗೆ ಅದೆಷ್ಟು ಸಂತೋಷ ಆಯ್ತೆಂದರೆ, ಜೇಬಿನಲ್ಲಿದ್ದ ಡಾಲರ್ ನೋಟನ್ನ ಹಾಯಾಗಿ ಹಾಕ್ಬಿಟ್ಟನು, ಮಂಗಳಾರತಿಗೆ! ಆಹಾ, ಡಾಲರ್ ಮಹಿಮೆಯನ್ನ ಏನೆಂದು ಬಣ್ಣಿಸಲಿ? ಕಣ್ಮುಚ್ಚಿ ತೆಗೆಯುವುದ್ರೊಳಗೆ ಗಣಪತಿಯ ಕೊರಳಿನಲ್ಲಿದ್ದ ಕಡಬಿನ ಹಾರ ಟ್ರಾನ್ಸ್‌ಫರ್ ಆಯ್ತು, ಮೊಮ್ಮಗನ ಕುತ್ತಿಗೆಗೆ!

ಮತ್ತು ಆಶೀರ್ವಾದದ ಸುರಿಮಳೆ!

ತೃಪ್ತಿಯಿಂದ ಮೊಮ್ಮಗ ಅಲ್ಲಿಂದ ಹೊರಟಾಗ, ತಾವು ಅದೇ ತಾನೆ ಕಲ್ತಿದ್ದ ಹೊಸ ಅಮೆರಿಕನ್ ಪದ – ''ಹಾಯ್'' ಎನ್ನೋದನ್ನ ಹೇಳೊಕ್ಕೆ ಮರೀಲಿಲ್ಲ – ಭಟ್ಟರು!

''ಕಮ್ ಮೈ ಬಾಯ್, ಚಪ್ಪಲಿ ವೇರ್'' – ಕರೆದಳು, ಕಮಲಮ್ಮನ ಸೊಸೆ.

''ಚಪ್ಪಲಿ?'' – ಅವನು ಹುಬ್ಬೇರಿಸಿದ – ''ವಾಟ್ ಇಸ್ ಇಟ್?''

''ಚಪ್ಪಲಿ–ದಿಸ್'' ತಮ್ಮ ಚಪ್ಪಲೀನ ತೋರಿಸಿದಳು, ಕಮಲಮ್ಮನ ಸೊಸೆ – ''ಸ್ಲಿಪ್ಪರ್–ಸ್ಲಿಪ್ಪರ್''

''ಓ, ಚಪ್ಪಲಿ, ಚಪ್ಪಲಿ, ಚಪ್ಪಲಿ'' – ಹುಡುಗ ಬಾಯಿಪಾಠ ಮಾಡ್ದ; ಅಷ್ಟೇ ಅಲ್ಲ, ಭಕ್ತಿಭಾವದಿಂದ ಅವನ್ನು ತನ್ನ ಕಾಲುಗಳಿಗೆ ತೊಡಸಿದ್ದ

ಚಪ್ಪಲಿಯವನಿಗೆ ''ಸಿ ಯು'' – ಎಂದು ಹೇಳಿ ಅಜ್ಜಿಯನ್ನ ಹಿಂಬಾಲಿಸಿದ.

ಮಿಕಿಮಿಕಿ ನೊಡ್ತಾ, ಆ ಬಡಪಾಯಿ ನಿಂತ್ಬಿಟ್ಟ.

❑

---

1957ರಲ್ಲಿ ಭಾರತ ಸರ್ಕಾರವು ನಾಣ್ಯ ಪದ್ಧತಿಯನ್ನು ದಶಮಾಂಶ ಪದ್ಧತಿಗೆ ಬದಲಾಯಿಸಿತು. ಒಂದು ರೂಪಾಯಿಗೆ ನೂರು ಪೈಸೆಗಳೆಂದು ಗೊತ್ತುಪಡಿಸಲಾಯಿತು. 100, 50, 25, 10, 5, 2 ಮತ್ತು 1 ಪೈಸೆ ನಾಣ್ಯಗಳು ಬಳಕೆಗೆ ಬಂದವು.

– ದಂನಆ

- ವಾಟ್ಸ್‌ಅಪ್‌ನಲ್ಲಿ ಮದುವೆಯ ಕರೆಯೋಲೆ ಬಂದರೆ ಉಡುಗೊರೆಯ ಚಿತ್ರ ತೆಗೆದು ವಾಟ್ಸ್‌ಅಪ್‌ನಲ್ಲೇ ಕಳಿಸಬಹುದೆ?
- 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಈಗ ಯಾರಾದರು ಹೇಳಿದರೆ ಅವನ ಜಾತಿ ಯಾವುದಿರಬಹುದು ಎಂಬ ಕುತೂಹಲ ನಮಗೆ.
- ಯಾರಾದರು 'ಅದು ಅಸಾಧ್ಯ' ಎಂದು ಹೇಳಿದರೆ ಅದು ಅವರಿಗೆ ಮಾತ್ರ ಅಸಾಧ್ಯ ಎಲ್ಲರಿಗೂ ಅಲ್ಲ ಎಂಬುದು ನೆನಪಿರಲಿ.
- ನಿನ್ನ ನೋವು ನಿನಗೆ ಗೊತ್ತಾದರೆ ನೀನು ಬದುಕಿದ್ದೀಯ ಎಂದರ್ಥ. ಪರರ ನೋವು ಗೊತ್ತಾದರೆ ನೀನು ಮನುಷ್ಯನಾಗಿದ್ದೀಯ ಎಂದರ್ಥ.
- ಲೀಡರ್‌ಷಿಪ್ ಈಸ್ ಆಕ್ಷನ್ ನಾಟ್ ಪೊಸಿಷನ್.
- ಸೀರೆ ಉಟ್ಟರೆ ತೊಂದರೆ ಎಂದು ಅನೇಕ ಹೆಣ್ಣುಮಕ್ಕಳು ಗೊಣಗುತ್ತಾರೆ. ಆದರೆ ಕಿತ್ತೂರು ರಾಣಿ ಚೆನ್ನಮ್ಮ ಸೀರೆ ಉಟ್ಟುಕೊಂಡೇ ಬ್ರಿಟೀಷರನ್ನು ಎದುರಿಸಿದಳು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಉರಿಯುವ ಚಿತೆಯ ಮುಂದೆ ಅನುಭವಿಸಬಲ್ಲ ಶಾಂತಿಯೇ ನಿಜವಾದ ಶಾಂತಿ.
- ಟು ಲೀಡ್ ಪೀಪಲ್ ವಾಕ್ ಬಿಹೈಂಡ್ ದೆಮ್.
- ಸಾಯೋದಿಕ್ಕೆ ಒಂದು ವಯಸ್ಸು ಅಂತ ಇರೋದಿಲ್ಲ. ಆದರೆ ಒಂದು ಕಾರಣ ಇರುತ್ತದೆ.
- ಅಷ್ಟೋತ್ತರ, ಸಹಸ್ರನಾಮಗಳೆಲ್ಲ ಒಬ್ಬ ದೇವರ ಸಮಾನಾರ್ಥ ಪದಗಳು (ಸಿನಾನಿಮ್ಸ್).
- ಆ ರೌಡಿ ಜೇಬಿನಿಂದ ರಾಂಪುರಿ ತೆಗೆದರೆ ಈಕೆ ಕಾಲಿನಿಂದ ಕೊಲ್ಹಾಪುರಿ ತೆಗೆದಳು.
- ಆದಾಯ ತೆರಿಗೆ ಲೆಕ್ಕ 2+2=3.
- ಐ ಆಮ್ ರಿಚ್ ಬಟ್ ನಾಟ್ ಅಟ್ಯಾಚಡ್ ಟು ಮನಿ.
- ಸೂರ್ಯ ನಮಗೆ ಬೆಳಕು ನೀಡುತ್ತಾನೆ. ಏಕೆ ಎಂದು ತಿಳಿಯುವ ಕುತೂಹಲ ನಮಗಿಲ್ಲ. ಆದರೆ ನೋವು, ಕೆಡಕು, ಹಸಿವು, ಸೊಳ್ಳೆ, ಮೂರ್ಖತನ ಮುಂತಾದವುಗಳಿಗೆ ಕಾರಣ ಹುಡುಕುತ್ತೇವೆ.
- ನಿಮ್ಮ ಬದುಕಿನ ಮೇಲೆ ಪರಿಣಾಮ ಬೀರುವುದು ನೀವು ಜೋರು ದನಿಯಲ್ಲಿ ಹೇಳುವ ಮಾತುಗಳಲ್ಲ; ಒಬ್ಬರೇ ಇದ್ದಾಗ ನೀವು ನಿಮಗೇ ಹೇಳಿಕೊಳ್ಳುವ ಮಾತುಗಳಿಂದ.
- ಟೆನ್ಷನ್ ಈಸ್ ಹು ಯು ಥಿಂಕ್ ಯು ಶುಡ್ ಬಿ. ರಿಲಾಕ್ಸೇಷನ್ ಈಸ್ ಹು ಯು ಆರ್.

❑

# ಈ ಪಾಟಿ ಮದ್ವೇನಾ?

- ಕುಮುದಾ ಪುರುಷೋತ್ತಂ

**ಶಾ**ಲೆಯ ಗೆಳತಿ ಶಾರಿ ತನ್ನ ಮಗನ ಮದುವೆಗೆ ಬರಲೇಬೇಕೆಂದು ಒತ್ತಾಯಪೂರ್ವಕವಾಗಿ ಫೋನಿನಲ್ಲಿ ಆಹ್ವಾನಿಸಿದ್ದಲ್ಲದೆ ಶಾಲೆಯಸಹಪಾಠಿಗಳೆಲ್ಲಾ ಬರ್ತಾಇದ್ದಾರೆ ನೀನೂ ಬಂದ್ರೆ ಮದುವೇ ಮನೇಲಿ ಸಂದೀಲಿ ಸಮಾರಾಧನೆ ಅನ್ನುವಂತೆ ಒಂದು ಚಿಕ್ಕಗೆಟ್ಟುಗೆದರ್ ಆಗುತ್ತೆ ಎಂದು ಪುಟ್ಟಮಕ್ಕಳಿಗೆ ಚಾಕಲೇಟ್ ಆಸೆ ತೋರಿಸುವಂತೆ ತೋರಿಸಿದ್ದಳು. ಅಂಚೆಯಲ್ಲಿ ಬಂದ ಆಹ್ವಾನಪತ್ರಿಕೆಯಲ್ಲಿ ವಧು ವಿದೇಶೀ ಮೂಲದವಳು ಎಂಬುದು ಕಂಡು ಕುತೂಹಲವೂ ಸೇರಿ ಮುಹೂರ್ತದವೇಳೆಗೆ ಕೈಯಲ್ಲೊಂದು ಉಡುಗೊರೆ ಪೊಟ್ಟಣ ಹಿಡಿದು ಹೊರಟೆ. ಕಲ್ಯಾಣಮಂಟಪ ಹುಡುಕುವುದೇನೂ ಕಷ್ಟವಾಗಲಿಲ್ಲವೆನ್ನಿ! ರಸ್ತೆಯ ಆರಂಭದಲ್ಲೇ ಟನ್‌ಗಟ್ಲೆ ಹೂವಿನಿಂದ ಹೆಣೆದ ಪ್ರವೇಶದ್ವಾರ ಕೂಗಿ ಕರೆಯಿತು. ರಸ್ತೆಯ ಆರಂಭದಿಂದ ಕಲ್ಯಾಣಮಂಟಪದವರೆಗೂ ಎರಡೂಪಕ್ಕ ಇಳಿಬಿಟ್ಟಿದ್ದ ಸಾಲುಸಾಲು ಲೈಟ್ ಬಲ್ಬುಗಳು, ಮೈಸೂರು ಅರಮನೆಯಂತೆ ಝುಗಿಝುಗಿಸುತ್ತಿದ್ದ ಕಲ್ಯಾಣಮಂಟಪ ನಮ್ಮೂರಿನಲ್ಲಿ ನಿಜಕ್ಕೂ ವಿದ್ಯುತ್ ಅಭಾವವಿದೆಯೇ ಎಂದು ಸಂದೇಹಿಸುವಂತಿತ್ತು. ಮುಂಬಾಗಿಲಿನಲ್ಲಿ ಪುಟ್ಟದೊಂದು ಕಾರಂಜಿ ಆಹ್ವಾನಿತರಿಗೆ ಪನ್ನೀರು ಸಿಂಪಡಿಸುತ್ತಿತ್ತು. ಯಂತ್ರ ಮಾನವರಂತೆ ಸಾಲಾಗಿನಿಂತ ಸಮವಸ್ತ್ರದ ಯುವತಿಯರು ಬಲವಂತದ ನಗೆ ಅಂಟಿಸಿಕೊಂಡು ಕುರುಕಲು, ಹಣ್ಣಿನ ರಸ ನೀಡುತ್ತಾ ಒಳಕ್ಕೆ ದಾರಿ ತೋರಿಸುತ್ತಿದ್ದರು. ಹಣ್ಣಿನ ರಸ ಗುಟುಕಿಸುತ್ತಾ ಹಾಲಿನೊಳಕ್ಕೆ ಕಾಲಿಟ್ಟೆ. ಸಭಾಂಗಣದಲ್ಲಿ ಸಾವಿರಕ್ಕೂ ಹೆಚ್ಚಿನ ಮೆತ್ತನ ಸೋಫಾಗಳು ಬಿಳಿ ಗವುಸು ಹೊದ್ದು ಬನ್ನಿ ಇಲ್ಲಿ ಕುಳಿತುಕೊಳ್ಳಿ ಎಂದು ಸ್ವಾಗತಿಸುತ್ತಿದ್ದುವು. ನನ್ನದೋ ಹೇಳಿಕೇಳಿ ಮಿಡ್ಲ್ ಕ್ಲ್ಯಾಸ್ ಬುದ್ಧಿ. ಸಮಾರಂಭದ ಬಳಿಕ ಇಷ್ಟೊಂದು ಬಿಳಿ ಗವುಸುಗಳನ್ನು ಒಗೆಯಲು ಎಷ್ಟು ಸಾವಿರ ಲೀಟರ್ ನೀರು ಖರ್ಚಾಗಬಹುದೆಂದು ನನ್ನ ತಲೆ ಲೆಕ್ಕಿಸುತ್ತಿತ್ತು! ಜೊತೆಜೊತೆಗೇ ಕುಡಿಯುವ ನೀರಿಗಾಗಿ ಪರದಾಡುತ್ತಾ ಕೊಡಹಿಡಿದು ಹೊರಟ ಹೆಂಗಸರು ಕಣ್ಮುಂದೆ ಕುಣಿದರು! ಇದರ ಜೊತೆಜೊತೆಗೇ ಈ ನೆವದಿಂದಾದರೂ ನೂರಾರುಮಂದಿಗೆ ಉದ್ಯೋಗ ದೊರಕುತ್ತದಲ್ಲಾ ಎಂಬ ಬೆಳ್ಳಿಯಂಚಿನ ಯೋಚನೆ ಬಂದು ಸಮಾಧಾನದಿಂದಲೇ ಮುಂದೆ ನಡೆದೆ.

ವೇದಿಕೆಯ ಎಡಪಕ್ಕ ಹಾಕಿದ್ದ ಕುರ್ಚಿಗಳಲ್ಲಿ ಗೆಳತಿಯರನ್ನು ಕಂಡು ಆ ಗುಂಪಿನಲ್ಲಿ ನಾನೂ ಒಬ್ಬಳಾದೆ. ಹಸೆಮಣೆಯ ಮೇಲೆ ವಧೂವರರು ಹೊಗೆಯುಗುಳುತ್ತಿದ್ದ ಅಗ್ನಿಯ ಮುಂದೆ ಕಣ್ಣೀರ್ಗರೆಯುತ್ತಾ ಕುಳಿತಿದ್ದರು. ಪಾಪ ಮೊದಲೇ ಕೆಂಪಗಿದ್ದ ವಿದೇಶೀ ವಧು ಮುಖವನ್ನು ಇನ್ನೂ ಕೆಂಪಾಗಿಸಿಕೊಂಡು ಕರ್ಚೀಫಿನಲ್ಲಿ ಕಣ್ಣು ಮೂಗೊರಿಸಿಕೊಂಡು ಕಷ್ಟಪಡುತ್ತಿದ್ದಳು.

''ಬಹಳ ಅದ್ದೂರಿ ಮದ್ವೆ ಅಲ್ವೇನೇ'' ಎಂದೆ ಪಕ್ಕದಲ್ಲಿದ್ದ ಪಮ್ಮೀಗೆ. ''ಇದೇನ್ಮಹಾ ಬಿಡು. ಶಾರಿ ಪಿಟ್ಸಬರ್ಗಿನಲ್ಲಿ ಮಾಡಿದ್ದ ಮದುವೆ ಇನ್ನೂ ಅದ್ದೂರಿಯಾಗಿತ್ತು.''

''ಅಂದ್ರೆ ನೀ ಹೇಳೋದೂ.......ಆ ವಿವಾಹ ವಿಚ್ಛೇದನ ಆಯ್ತಾ?

''ಬಿಡ್ತೂ ಅನ್ನೇ. ಅದೆಲ್ಲಾ ಏನೂ ಇಲ್ಲಾ. ಇಲ್ಲಿಯ ಬಂಧುಗಳಿಗಾಗಿ ಅದೇ ಹುಡ್ಗೀನೇ ಕೊಟ್ಟು ಮದ್ವೇ ಮಾಡ್ತಿದಾಳೆ ಶಾರಿ. ಅದರ ಹಿನ್ನೆಲೇ ಹೇಳ್ತೀನಿ ಕೇಳು. ಹೋದ ವರ್ಷ ಶಾರಿ ಅವ್ಳ ಗಂಡ ಇಬ್ರೂ ಅಮೇರಿಕದಲ್ಲಿದ್ದ ಮಗನ ಮನೇಗೆ ಹೋದ್ರಂತೆ. ಮನೆಗೆ ಹೋದಾಗ ಮಗನ ಬೆಡ್ರೂಮ್ನಿಂದ ಒಂದು ಬಿಳೀ ಹುಡ್ಗಿ ಬಂದು ಹಾಯ್ ಅಂತ ಕೈ ಬೀಸಿ ಹೊರಟು ಹೋದ್ಲಂತೆ. ಯಾರೋ ಆ ಹುಡ್ಗೀ ಅಂತ ಸಾರಿ ಕೇಳಿದ್ರೆ ನನ್ನ ಸಂಗಾತಿ ಮರಿಯಮ್ ಅಂತ ಹೆಸ್ರು ಅಂದ್ನಂತೆ! ಪಾಪ ಶಾರಿ ಶಾಕ್ ಆಗಿ ಏನೂ ತೋಚ್ದೆ ಬಿಕ್ಕೀಬಿಕ್ಕೀ ಅತ್ಲಂತೆ.

''ಯಾಕೋ ಹೇಳ್ದೆ ಕೇಳ್ದೆ ಮದ್ವೆ ಮಾಡ್ಕೊಂಡೆ? ಹೇಳಿದ್ರೆ ನಾವೇ ಮುಂದೆ ನಿಂತು ಶಾಸ್ತ್ರೋಕ್ತವಾಗಿ ಮದ್ವೆ ಮಾಡ್ತಿರ್ಲಿಲ್ವೇ?''

''ಅಮ್ಮಾ ಸುಮ್ಸುಮ್ನೆ ಎಗರಾಡ್ಬೇಡ. ನಾನವ್ಳನ್ನ ಮದ್ವೆ ಆಗಿಲ್ಲ. ಒಟ್ಟಿಗೆ ಇದ್ದೀವಿ ಅಷ್ಟೆ'' ಎಂದ ಕೂಲಾಗಿ ಅದೊಂದು ಮಾಮೂಲಿ ವಿಷ್ಯ ಅನ್ನುವಂತೆ! ಶಾರಿಗೆ ಗಾಯದ ಮೇಲೆ ಬರೆ ಹಾಕಿದಂತಾಯ್ತು. ರಾದ್ಧಾಂತ ಮಾಡಿದ್ಲು. ಅವಳ ಗೋಳು ನೋಡ್ಲಾರ್ದೆ ಮಗ ಮರಿಯಮ್ ಅನ್ನು ಮದುವೆಯಾಗಲು ಒಪ್ಪಿದ್ನಂತೆ. ಆದ್ರೆ ಅವ್ಳನ್ನು ಒಪ್ಪಿಸುವ ಜವಾಬ್ದಾರಿ ತಾಯಿಗೇ ತಗಲು ಹಾಕಿದ್ನಂತೆ. ಒಂದು ಒಳ್ಳೇ ದಿನ ಶಾರಿ ಭಾವಿ ಸೊಸೆಯನ್ನು ಕೂಡಿಸಿಕೊಂಡು ಮದುವೆಯ ಪಾವಿತ್ರ್ಯತೆ, ಪರಸ್ಪರ ಬದ್ಧತೆ, ಸಮಾಜದ ನೈತಿಕತೆ, ಕುಟುಂಬ ವ್ಯವಸ್ಥೆಯ ಸಾಮಾಜಿಕ ಹಿನ್ನೆಲೆ, ಮುಂದಿನ ಪೀಳಿಗೆಯ ಹಿತರಕ್ಷಣೆ ಹೀಗೆ ಗೊತ್ತಿರುವ ಮತ್ತು ಗೊತ್ತಿಲ್ಲದ ವಿಷಯದ ಮೇಲೆ ಕ್ಲಾಸ್ ತೆಗೆದುಕೊಂಡಳಂತೆ. ಕೇಳಿ ಕೇಳಿ ಚಿಟ್ಟಾದ ಆ ಹುಡುಗಿ ಹುಬ್ಬು ಭುಜ ಕುಣಿಸಿ ಎರಡೂ ಕೈ ಮೇಲೆತ್ತಿ ವಿಸ್ತಾರವಾಗಿ ಹರಡಿ ''ಅಷ್ಟೇ ತಾನೇ? ಇಂಡಿಯನ್ ವೆಡ್ಡಿಂಗ್‌ಗಳು ತುಂಬಾ ಕಲರ್‌ಫುಲ್ ಅಂತಾರೆ. ಲೆಟ್ ಮಿ ಹ್ಯಾವ್ ಸಮ್ ಫನ್'' ಎಂದು ಒಪ್ಪಿಗೆ ಕೊಟ್ಟುಬಿಟ್ಲಂತೆ.

ಅಂದಿನಿಂದ್ಲೇ ಮದ್ವೆ ತಯಾರಿ ಶುರುವಾಯ್ತು. ಒಂದೇ ವಾರ್ದಲ್ಲಿ ಊರ್ನಿಂದ ಜವಳಿ, ಜವಾಹಿರಿ ಎಲ್ಲಾ ವಿಮಾನದಲ್ಲಿ ಹಾರಿಬಂತು. ಹೇಳಿಕೇಳಿ ಅಮೇರಿಕಾ. ಅಲ್ಲಿ ಬಂಧುಗಳಿಗೆ ಕೊರತೆಯೇ? ಬಾದರಾಯಣ ಸಂಬಂಧಿಗಳೆಲ್ಲಾ ಮುಹೂರ್ತಕ್ಕೆ ಬಂದು ಜಮಾಯಿಸಿದರು. ಅಲ್ಲಿನ ಹಿಂದೂ ಮಂದಿರದ ಅರ್ಚಕರು ಶಾಸ್ತ್ರೋಕ್ತವಾಗಿ ವಿವಾಹವಿಧಿ ನಡೆಸಿಕೊಟ್ಟರು.

ಪಮ್ಮಿ ತನ್ನ ನಿರೂಪಣೆ ಮುಗಿಸುತ್ತಿದ್ದಂತೆ ವೇದಿಕೆಯಿಂದಲೇ ನನ್ನನ್ನು ಕಂಡ ಶಾರಿ ಅಲ್ಲಿಂದಲೇ ಕೈ ಬೀಸಿ ಕೆಳಗಿಳಿದು ಬಂದಳು.

ಬಹಳ ಅದ್ಧೂರಿ ಮದ್ವೆ ಮಾಡಿತಿದ್ದೀ. ಅಮೇರಿಕದಲ್ಲಿ ಇದಕ್ಕಿಂತಾ ಅದ್ದೂರಿಯಾಗಿ ಮಾಡಿದ್ಯಂತೆ? ಅಭಿನಂದಿಸಿದೆ.

''ಅಯ್ಯೋ ಅದೊಂದು ದೊಡ್ಡ ಕಥೆ. ಅಲ್ಲಿ ಮದ್ವೆ ಮುಗ್ಸಿ ಇಲ್ಲಿಗೆ ಬಂದ್ಮೇಕ್ಲೆ ನಮ್ಮತ್ತೆ ವರಾತ ಹಚ್ಚಿದ್ರು. ನನ್ನನ್ನು ಬಿಟ್ಟು ಹೇಗೆ ನೀನಲ್ಲಿ ಮದ್ವೆ ಮಾಡ್ದೆ? ನಾನು ನನ್ನ ಮೊಮ್ಮಗನ ಮದ್ವೆ ಕಣ್ತುಂಬ ನೋಡ್ಬೇಡ್ವೇ?

ಅದೇನು ಮಾಡ್ತೀಯೋ ನನಗೆ ಗೊತ್ತಿಲ್ಲ. ನಾನಂತೂ ಅವನ ಮದ್ವೆ ನೋಡ್ದೆ ಸಾಯೋಲ್ಲ ಅಂತ ಸತ್ಯಾಗ್ರಹ ಮಾಡಿಬಿಟ್ರು. ಅವರ ಮನಸ್ಸಿನ ಸಂತೋಷಕ್ಕಾಗಿ ಮತ್ತೊಮ್ಮೆ ಮಾಡ್ಬೇಕಾಯ್ತು.

''ಹೋಗ್ಲಿ ಬಿಡೇ. ನಿನ್ನ ಮಗನಿಗೆ ಎರಡು ಮದ್ವೆ ಯೋಗ ಇತ್ತೂಂತ ಕಾಣುತ್ತೆ. ಅದಕ್ಕೇ ಮಾಡಿದೀಯಾ''

''ಅಯ್ಯೋ, ನೀನು ತಪ್ಪು ತಿಳಿದಿದ್ದೀ. ಇದು ಇಷ್ಟಕ್ಕೇ ಮುಗೀಲಿಲ್ಲ. ನನ್ನ ಸೊಸೆ ಫ್ರೆಂಚ್ ಮೂಲದವಳು. ಅವಳ ಅಪ್ಪ ಅಮ್ಮ ಸಂಪ್ರದಾಯಸ್ತರು. ಮಗಳ ಮದ್ವೆ ಚರ್ಚಿನಲ್ಲಿ ಅವರ ಪದ್ಧತಿಯಂತೆಯೇ ಆಗ್ಬೇಕಂತೆ. ಬರೋ ವಾರ ಅಲ್ಲಿನ ಚರ್ಚಿನಲ್ಲಿ ಮದ್ವೆ ಮಾಡ್ತಾರೆ. ನಾನು ಯಜಮಾನರು ಹೋಗ್ತಾ ಇದ್ದೀವಿ''

ಮುಟ್ಟಿದ್ದಕ್ಕೆ ಮೂರು ಬಾರಿ. ಆಮೇಲೆ ಮುಕ್ತಾಯ ಅಂತಿಟ್ಕೋ ಎಂದೆ.

''ಮುಕ್ತಾಯ ಎಲ್ಬಂತು? ಇನ್ನು ಇದೆ. ಬರೋ ವರ್ಷ ಅಮೇರಿಕದಲ್ಲೇ ಅವ್ರಿಬ್ರ ಸ್ನೇಹಿತ್ರು ಸಹೋದ್ಯೋಗಿಗಳಿಗಾಗಿ ಮದ್ವೆ ರಿಸೆಪ್ಷನ್ ಇಟ್ಕೊಂಡಿದ್ದಾರೆ. ನನ್ನ ಮಗ ಆಗ ನೀನು ಡ್ಯಾನ್ಸ್ ಮಾಡ್ಬೇಕಾಗ್ಬಹುದು. ಯಾವ್ದಾದ್ರು ಕ್ಲಾಸಿಗೆ ಸೇರಿ ಡ್ಯಾನ್ಸ್ ಕಲ್ತುಕೋ ಅಂತಿದ್ದಾನೆ. ನೀನೇ ಹೇಳು. ನಾನು ಈ ವಯಸ್ಸಿನಲ್ಲಿ ಈ ಮೈ ಹೊತ್ಕೊಂಡು ಡ್ಯಾನ್ಸ್ ಮಾಡಿದ್ರೆ ಚೆನ್ನಾಗಿರುತ್ತೇನೇ?'' ಮುಖ್ಯವಾದ ಪ್ರಶ್ನೆಯನ್ನೇ ಕೇಳಿದ್ದಳು. ಅಷ್ಟರಲ್ಲಿ ಮೈಕಿನ ಮೂಲಕ ಪುರೋಹಿತರ ಧ್ವನಿ ಬಂದು ಅಪ್ಪಳಿಸಿತು.

''ವರನತಾಯೀ ಎಲ್ಲಿದ್ರೂ ಬನ್ನಿಮ್ಮಾ. ಮುಹೂರ್ತಕ್ಕೆ ವೇಳೆಯಾಯ್ತು. ಇಲ್ಲಿರೋ ತಟ್ಟೇಲಿ ಮಾಂಗಲ್ಯ ಇಡೋದು ಮರ್ತಿದೀರಾ. ತಂದಿಡೀ ಎಂದು ಶಾರೀ ಮರ್ಯಾದೇನ ಮೂರುಕಾಸಿಗೆ ಹರಾಜು ಹಾಕಿದ್ರು. ಅವ್ಳು ನಾಲಿಗೆ ಕಚ್ಚಿಕೊಂಡ್ಳು. ''ಅಯ್ಯೊ ದೇವ್ರೆ! ಪಿಟ್ಸ್ ಬರ್ಗ್‌ಮದ್ವೇಲಿ ಕಟ್ಟಿದ ತಾಳಿ ಅವಳ ಕುತ್ಕೇಲಿ ಹಾಗೇ ಇದೆ. ಈಗೇನು ಮಾಡ್ಲಿ? ಕೈ ಕೈ ಹಿಸುಕಿಕೊಂಡ್ಳು. ಕಿಲಾಡಿ ಪಮ್ಮಿ ಸುಮ್ನಿದ್ರೆ ಕೇಳಿ! ''ಲೇ ಶಾರಿ. ಸೋಸೇನ ರೂಮಿಗೆ ಕರ್ಕೊಂಡುಹೋಗಿ ಮಾಂಗಲ್ಯ ತೆಗೆದು ತಂದು ತಟ್ಟೇಲಿಡು. ಮತ್ತೊಮ್ಮೆ ಮಾಂಗಲ್ಯ ಧಾರಣೆಯಾಗ್ಲಿ. ಪರಿಹಾರ ಸೂಚಿಸಿದ್ಲು. ಅದೇನು ಆಕಸ್ಮಿಕ್ವೋ ಏನೋ. ಆ ಸಮಯಕ್ಕೆ ಸರಿಯಾಗಿ ವಾಲಗದವ ಸೀತಾ ಕಲ್ಯಾಣ ವೈಭೋಗಮೇ ರಾಮ ಕಲ್ಯಾಣ ವೈಭೋಗಮೇ..... ನುಡಿಸತೊಡಗಿದ!

ಈಚೆಗೆ ಬಂದ ಸುದ್ದಿ. ಶಾರಿ ಮಗನಿಗೆ ಮತ್ತೆ ವಧು ಹುಡುಕುತ್ತಿದಾಳಂತೆ. ಮೊದಲಿನದ್ಯಾಕೋ ಸರಿಹೋಗಲಿಲ್ಲವಂತೆ. ಬಡವರಾದ್ರೂ ಸರಿ, ಸಂಪ್ರದಾಯಸ್ಥರ ಮನೆ ಹುಡುಗಿಯೇ ಬೇಕಂತೆ. ನಾನಂತೂ ಮತ್ತೊಂದು ಮದುವೆಯ ಊಟಕ್ಕೆ ಕಾಯ್ತಾ ಇದ್ದೀನಿ.

❑

---

ರೋಮ್ ದೇಶದ ಸ್ತ್ರೀಯರಿಗೆ ಪಚ್ಚೆಯು ಬಹಳ ಪ್ರಿಯವಾಗಿತ್ತು. ಅದು ಕರ್ನಾಟಕದ ಕೆಲವು ಭಾಗಗಳಲ್ಲಿ ದೊರಕುತ್ತಿತ್ತು. ರೋಮಿನ ವ್ಯಾಪಾರಿಗಳು ಬಂದು ತಮ್ಮ ನಾಣ್ಯಗಳನ್ನು ಕೊಟ್ಟು ಪಚ್ಚೆಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಇದರಿಂದಾಗಿಯೇ ಆಗಿನ ಕಾಲದಲ್ಲಿ ಚಲಾವಣೆಯಲ್ಲಿದ್ದ ಅನೇಕ ರೋಮನ್ ನಾಣ್ಯಗಳು ಕರ್ನಾಟಕದಲ್ಲಿ ದೊರಕಿವೆ.

# ''ಆತ್ಮಹತ್ಯೆ'' ಫಜೀತಿ

**- ಡಿ.ವಿ. ಗುರುಪ್ರಸಾದ್**

ಇನ್ಸ್‌ಪೆಕ್ಟರ್ ರಾಮಪ್ಪ ಆಗತಾನೇ ತಮ್ಮ ಪೊಲೀಸ್ ಠಾಣೆಗೆ ಬಂದು ತಮ್ಮ ಕುರ್ಚಿಯಲ್ಲಿ ಆಸೀನರಾಗಿ ಅಂದಿನ ವೃತ್ತಪತ್ರಿಕೆಯನ್ನು ಸಮಾಧಾನದಿಂದ ಓದುತ್ತಿದ್ದರು. ಅಂದಿನ ದಿನ ಯಾವುದೇ ಮೆರವಣಿಗೆಗಳು, ಬಂದ್‌ಗಳು, ಇಲ್ಲವೇ ಬೇರಿತರ ಕಾನೂನು-ಸುವ್ಯವಸ್ಥೆ ಸಮಸ್ಯೆಗಳು ಇರದೇ ಹೊದದ್ದರಿಂದ ರಾಮಪ್ಪ ಪ್ರಸನ್ನ ವದನರಾಗಿದ್ದರು. ಅಷ್ಟರಲ್ಲಿ ಅವರ ಮುಂದೆ ಕಾನ್ಸ್‌ಟೇಬಲ್ ಲಕ್ಷ್ಮಣ್ ಬಂದು ನೀಟಾಗಿ ಸೆಲ್ಯೂಟ್ ಹೊಡೆದ. ಓದುತ್ತಿದ್ದ ವೃತ್ತಪತ್ರಿಕೆಯಿಂದ ತಲೆ ಎತ್ತದೇ ಹುಬ್ಬನ್ನು ಏರಿಸಿ ''ಏನು?'' ಎಂದು ಪ್ರಶ್ನಿಸಿದರು ರಾಮಪ್ಪ.

''ಸಾರ್, ನನಗೆ ಒಂದು ವಾರದ ರಜೆ ಬೇಕಾಗಿದೆ'' ಎಂದ ಕಾನ್ಸ್‌ಟೇಬಲ್ ಲಕ್ಷ್ಮಣ್. ರಾಮಪ್ಪ ಓದುತ್ತಿದ್ದ ಪೇಪರನ್ನು ಪಕ್ಕಕ್ಕೆ ಎಸೆದು, ''ಏನು, ನನ್ನನ್ನು ಚೇಷ್ಟೆ ಮಾಡಲು ಬಂದಿದ್ದೀಯಾ? ಮುಂದಿನ ವಾರದ ಪೊಲೀಸ್ ಮುಷ್ಕರದಲ್ಲಿ ಪಾಲ್ಗೊಳ್ಳಲು ರಜೆ ಕೇಳುತ್ತಿದ್ದೀ ಎಂದು ನನಗೆ ಗೊತ್ತು. ಖಂಡಿತಾ ರಜೆ ಕೊಡುವುದಿಲ್ಲ'' ಎಂದು ಗಟ್ಟಿ ದನಿಯಲ್ಲಿ ರೇಗಿದರು. ಕಾನ್ಸ್‌ಟೇಬಲ್ ಲಕ್ಷ್ಮಣ್, ''ಸರ್, ನಾನು ಹದಿಮೂರು ವರ್ಷ ಈ ಇಲಾಖೆಯಲ್ಲಿ ಯಾವುದೇ ಒಂದು ಕಪ್ಪು ಚುಕ್ಕೆ ಇಲ್ಲದೇ ಕೆಲಸ ಮಾಡಿದ್ದೇನೆ. ನನ್ನ ಒಬ್ಬಳೇ ಮಗಳ ಲಗ್ನ ಮಾಡಬೇಕಾಗಿದೆ, ಹೀಗಾಗಿ ನನಗೆ ರಜೆ ಬೇಕಾಗಿದೆ'' ಎಂದು ತನ್ನ ಕೈಯಲ್ಲಿದ್ದ ಆಮಂತ್ರಣ ಪತ್ರಿಕೆಯನ್ನು ಇನ್ಸ್‌ಪೆಕ್ಟರ್ ಮುಂದೆ ಇಟ್ಟ. ಅದನ್ನು ನೋಡಿದ ಇನ್ಸ್‌ಪೆಕ್ಟರ್, ''ಲಕ್ಷ್ಮಣಾ, ನೂರು ರೂಪಾಯಿ ಕೊಟ್ಟರೆ ಈ ರೀತಿ ಪತ್ರಿಕೆಗಳನ್ನು ಯಾರು ಬೇಕಾದರೂ ಮುದ್ರಿಸಿ ಕೊಡುತ್ತಾರೆ. ನನನ್ನೇ ಮಂಗನನ್ನಾಗಿ ಮಾಡಲು ಏಕೆ ಹೊರಟಿದ್ದೀ?'' ಎಂದರು. ಇದನ್ನು ಕೇಳಿದೊಡನೆ ಲಕ್ಷ್ಮಣ ಓಡಿ ಬಂದು ಇನ್ಸ್‌ಪೆಕ್ಟರ್ ಸಾಹೇಬರ ಕಾಲನ್ನು ಬಿಗಿಯಾಗಿ ಹಿಡಿದು, ''ಸರ್, ನಿಮ್ಮ ಬಳಿ ನಾನು ಸುಳ್ಳು ಹೇಳಿದರೆ ನನ್ನ ನಾಲಿಗೆಗೆ ಹುಳ ಬೀಳುತ್ತದೆ. ಖಂಡಿತಾ ನಾನು ಸುಳ್ಳು ಹೇಳುತ್ತಿಲ್ಲಾ. ನನ್ನ ಮೇಲೆ ದಯವಿಟ್ಟು, ರಜೆ ಕೊಡಿ'' ಎಂದ.

''ಲಕ್ಷ್ಮಣಾ, ಈ ಬಗ್ಗೆ ನಾನೇನೂ ಮಾಡಲು ಬರುವುದಿಲ್ಲ. ಇಲಾಖೆಯ ಮೇಲೆ ತಮಗಿರುವ ಬೇಸರವನ್ನು ವ್ಯಕ್ತಪಡಿಸಲು ಪೊಲೀಸರು ಸಾಮೂಹಿಕ ರಜೆ ಹಾಕುತ್ತಾರೆ ಎಂದು ನಿಮ್ಮ ಸಂಘಟನೆಯ ಮುಖ್ಯಸ್ಥ ಹೇಳಿಕೆ ನೀಡಿರುವುದು ಎಲ್ಲರಿಗೂ ತಿಳಿದಿದೆ. ಹೀಗಾಗಿ ಮುಂದಿನ ವಾರ ಯಾರಿಗೂ ರಜೆ ಕೊಡಬಾರದೆಂದು ಮೇಲಾಧಿಕಾರಿಗಳು ಕಟ್ಟುನಿಟ್ಟಾಗಿ ಆಜ್ಞೆ ಹೊರಡಿಸಿದ್ದಾರೆ. ನನಗೆ ಏನನ್ನೂ ಮಾಡಲು ಬರುವುದಿಲ್ಲ. ಬೇಕಾದರೆ ನೀನು ಮೇಲಾಧಿಕಾರಿಗಳ ಬಳಿಯೇ ಹೋಗಿ ನಿನ್ನ ರಜೆ ಮಂಜೂರು ಮಾಡಿಸಿಕೋ'' ಎಂದು ಅವನನ್ನು ತಮ್ಮ ಕೊಠಡಿಯಿಂದ ಹೊರಗೆ ಸಾಗಹಾಕಿದರು.

ಅದೇ ಸಂಜೆ ಕೂಡಲೇ ತಮ್ಮನ್ನು ಕಾಣಲು ಡಿಸಿಪಿ ಸಾಹೇಬರು ರಾಮಪ್ಪನನ್ನು ತಮ್ಮ ಕಛೇರಿಗೆ ಕರೆಸಿಕೊಂಡರು. ರಾಮಪ್ಪ ಅಲ್ಲಿಗೆ ಹೋದಾಗ ಸಾಹೇಬರು ಗರಂ ಆಗಿದ್ದರು. ''ಏನ್ರೀ, ಇಲಾಖೆಯಲ್ಲಿ ಇಷ್ಟು ವರ್ಷ ಕೆಲಸ ಮಾಡಿದ್ದೀರಿ. ನಿಮಗಿನ್ನೂ ಬುದ್ಧಿ

ಬರಲಿಲ್ಲವೇ? ಯಾರಿಗೂ ರಜೆ ನೀಡಬೇಡಿ ಎಂದು ನಿಮಗೆ ಆದೇಶಿಸಿದರೆ, ನೀವು ನಿಮ್ಮ ಕಾನ್ಸ್‌ಟೇಬಲ್‌ನನ್ನು ರಜೆಗಾಗಿ ನನ್ನ ಬಳಿ ಕಳುಹಿಸುತ್ತೀರಾ? ಇನ್ನು ಮೇಲೆ ಹೀಗೆ ಮಾಡಿದರೆ ನಿಮಗೇ ಮೆಮೋ ಕೊಡಬೇಕಾಗುತ್ತದೆ, ಎಚ್ಚರ'' ಎಂದು ಕಳುಹಿಸಿದರು. ಈ ಘಟನೆಯಿಂದ ಬೇಸರಗೊಂಡ ರಾಮಪ್ಪ ಠಾಣೆಗೆ ವಾಪಸ್ಸಾದ ಕೂಡಲೇ ಲಕ್ಷ್ಮಣ್‌ನನ್ನು ಕರೆಸಿಕೊಂಡು ಎಲ್ಲರೆದುರೂ ಹಿಗ್ಗಾ ಮುಗ್ಗಾ ಬೈದು, ''ನೀನು ರಜೆ ಹೋದರೆ ಖಂಡಿತಾ ಇಲಾಖಾ ಕ್ರಮ ಎದುರಿಸಬೇಕಾಗುತ್ತದೆ'' ಎಂದು ಹೆದರಿಸಿದರು.

ಮಾರನೆಯ ದಿನ ಇನ್ಸ್‌ಪೆಕ್ಟರ್ ತಮ್ಮ ಪೊಲೀಸ್ ಠಾಣೆಗೆ ಬಂದಾಗ ಠಾಣೆ ಭಣಗುಟ್ಟುತ್ತಿತ್ತು. ಒಬ್ಬ ಸೆಂಟ್ರಿ ಹಾಗೂ ಇಬ್ಬರು ಹೆಡ್‌ಕಾನ್ಸ್‌ಟೇಬಲ್‌ಗಳ ಹೊರತಾಗಿ ಬೇರೆ ಯಾರೂ ಹಾಜರಿರಲಿಲ್ಲ. ''ಏಕೆ ಯಾವ ಸಿಬ್ಬಂದಿಯೂ ಇಲ್ಲ'' ಎಂದು ರಾಮಪ್ಪ ಇದ್ದವರನ್ನು ಕೇಳಿದರು.

''ಸರ್, ತಾವು ನಿನ್ನೆ ಕಾನ್ಸ್‌ಟೇಬಲ್ ಲಕ್ಷ್ಮಣ್‌ನೊಂದಿಗೆ ವ್ಯವಹರಿಸಿದ ಕ್ರಮದ ವಿರುದ್ಧ ಪ್ರತಿಭಟನೆ ಎಂದು ಎಲ್ಲರೂ ಸಾಮೂಹಿಕ ರಜೆ ಹಾಕಿದ್ದಾರೆ'' ಎಂದ ಸೆಂಟ್ರಿ. ಗಾಬರಿಗೊಂಡ ಇನ್ಸ್‌ಪೆಕ್ಟರ್ ಸಿಬ್ಬಂದಿಯ ಗೈರುಹಾಜರಿಯ ಬಗ್ಗೆ ಕೂಡಲೇ ಮೇಲಾಧಿ ಕಾರಿಗಳಿಗೆ ವೈಯರ್ ಲೆಸ್ ಮೂಲಕ ಸಂದೇಶ ಕಳುಹಿಸಿದರು.

ಅರ್ಧಗಂಟೆಯಲ್ಲೇ ಜಂಟಿ ಪೊಲೀಸ್ ಆಯುಕ್ತರು ಇನ್ಸ್‌ಪೆಕ್ಟರ್ ರಾಮಪ್ಪರಿಗೆ ತಮ್ಮನ್ನು ನೋಡಲು ಬರ ಹೇಳಿದರು. ಭಯದಿಂದಲೇ ರಾಮಪ್ಪ ಸಾಹೇಬರ ಕಛೇರಿಗೆ ಹೋದರು. ರಾಮಪ್ಪನನ್ನು ಕಂಡ ಜಂಟಿ ಆಯುಕ್ತರು ತಮ್ಮ ಮುಖದಲ್ಲಿ ಯಾವುದೇ ಭಾವನೆಯನ್ನು ತೋರಿಸದೇ ಸಮಾಧಾನದಿಂದಲೇ, ''ನಿಮ್ಮನ್ನು ಈ ಕ್ಷಣದಿಂದಲೇ ಜಾರಿಗೆ ಬರುವಂತೆ ಅಮಾನತ್ತು ಮಾಡಲಾಗಿದೆ'' ಎಂದು ಹೇಳಿ ತಮ್ಮ ಕಾರ್ಯದರ್ಶಿಯ ಮೂಲಕ ಅಮಾನತ್ತು ಆದೇಶವನ್ನು ಜಾರಿ ಮಾಡಿಸಿಯೇ ಬಿಟ್ಟರು. ''ಸರ್, ನನ್ನದೇನೂ ತಪ್ಪಿಲ್ಲ. ಸಿಬ್ಬಂದಿ ಸಾಮೂಹಿಕ ರಜೆ ಹೋದದ್ದಲ್ಲಿ ನನ್ನ ಪಾತ್ರವೇನೂ ಇಲ್ಲ'' ಎಂದು ರಾಮಪ್ಪ ಸಮಜಾಯಿಷಿ ನೀಡಿದರೂ ಆ ಮಾತುಗಳನ್ನು ಸಾಹೇಬರು ಕಿವಿಗೇ ಹಾಕಿಕೊಳ್ಳಲಿಲ್ಲ. ಖಿನ್ನರಾದ ರಾಮಪ್ಪ ಕೂಡಲೆ ತಮ್ಮ ನಿವಾಸಕ್ಕೆ ಮರಳಿದರು. ''ಏನ್‌ರೀ, ಇಷ್ಟು ಬೇಗನೇ ಮನೆಗೆ ಬಂದಿರಿ. ಮೈ ಸರಿಯಾಗಿಲ್ಲವೇ'' ಎಂದು ಕೇಳಿದಳು ಮಡದಿ. ''ಮೈ ಸರಿಯಾಗಿದೆ, ಮನಸ್ಸು ಸರಿಯಾಗಿಲ್ಲ'' ಎಂದ ರಾಮಪ್ಪ ನಡೆದ ಘಟನೆಗಳನ್ನು ಶ್ರೀಮತಿಗೆ ವಿವರಿಸಿದರು.

ಮಾರನೆಯ ದಿನ ಬೆಳಿಗ್ಗೆ ನಗರ ಪೊಲೀಸ್ ಆಯುಕ್ತರು ತಮ್ಮ ಕಛೇರಿಗೆ ಹೋದಾಗ, ಕಛೇರಿಯ ಬಾಗಿಲಲ್ಲೇ ಒಬ್ಬ ಹೆಣ್ಣು ಮಗಳು ನಿಂತಿದ್ದು ನೋಡಿ, ಆಕೆಯನ್ನು ಕೋಣೆಯೊಳಗೆ ಬರ ಹೇಳಿದರು. ''ಯಾವ ಕಾರಣಕ್ಕೆ ನನ್ನನ್ನು ನೋಡಲು ಬಂದಿರಿ'' ಎಂದು ಆಯುಕ್ತರು ವಿಚಾರಿಸಿದಾಗ ಒಮ್ಮಿಂದೊಮ್ಮೆಲೇ ದೊಡ್ಡ ದನಿಯಲ್ಲಿ ಆ ಹೆಣ್ಣು ಮಗಳು ''ಯಾವ ಕಾರಣಕ್ಕಾಗಿ ನನ್ನ ಗಂಡನನ್ನು ನೀವು ಅಮಾನತ್ತು ಮಾಡಿದ್ದೀರಿ. ನಿಮಗೇನು ನ್ಯಾಯ, ನೀತಿ, ಧರ್ಮ ಇಲ್ಲವೇ? ಇನ್ಸ್‌ಪೆಕ್ಟರ್ ರಾಮಪ್ಪನವರ ಅಮಾನತ್ತು ಆದೇಶ ವಾಪಸ್ಸ್ ಪಡೆಯಲೇಬೇಕು'' ಎಂದಳು. ಇವಳ ಮಾತು ಕೇಳಿ ಸಾಹೇಬರ ಮುಖ

ರೋಷದಿಂದ ಕೆಂಪಾಗಿ ಸೆಂಟ್ರಿಯನ್ನು ಒಳಗೆ ಕರೆದು'' ಇವಳನ್ನು ಇಲ್ಲಿಂದ ಹೊರಗೆ ಕಳಿಸು'' ಎಂದರು. ಆ ಸೆಂಟ್ರಿ ತನ್ನ ಬಳಿ ಹೋದಾಗ, ''ನನ್ನ ಮೈ ಮುಟ್ಟಿದರೆ ಹುಷಾರ್'' ಎಂದು ಹೆದರಿಸಿದ ರಾಮಪ್ಪನವರ ಪತ್ನಿ, ತನ್ನ ಪರ್ಸಿನಲ್ಲಿದ್ದ ಒಂದು ಬಾಟಲ್ ಹೊರಕ್ಕೆ ತೆಗೆದು, ''ಸ್ವಾಮಿ, ಇದು ವಿಷ, ನಾನು ಸತ್ತರೆ ನೀವೇ ಜವಾಬ್ದಾರರು'' ಎಂದು ಹೇಳಿ ಬಾಟಲ್‌ನಲ್ಲಿದ್ದ ದ್ರವವನ್ನು ಒಂದೇ ಗುಟುಕಿಗೆ ಕುಡಿದು ಕೆಳಗೆ ಬಿದ್ದಳು. ಗಾಬರಿಯಾದ ಸಾಹೇಬರು ಸಿಬ್ಬಂದಿಯನ್ನು ಕರೆಸಿ ಕೂಡಲೇ ಆಕೆಯನ್ನು ಆಸ್ಪತ್ರೆಗೆ ಸೇರಿಸಲು ಹೇಳಿ ಅರ್ಧಗಂಟೆಯಲ್ಲೇ ತಮ್ಮ ಕಛೇರಿಗೆ ರಾಮಪ್ಪನನ್ನು ಕರೆಸಿಕೊಂಡು, ''ನೋಡಿ ಇನ್ಸ್‌ಪೆಕ್ಟರ್, ನೀವು ನಿಮ್ಮ ಶ್ರೀಮತಿಗೆ ಬುದ್ಧಿ ಮಾತುಗಳನ್ನು ಹೇಳಬೇಕು. ವಿಷಯ ಮುಂದುವರೆಯಲು ಬಿಡಬೇಡಿ'' ಎಂದು ಹೇಳಿದಲ್ಲದೆ ಇನ್ಸ್‌ಪೆಕ್ಟರ್ ರಾಮಪ್ಪನವರ ಅಮಾನತ್ತು ಆದೇಶವನ್ನೂ ತತ್‌ಕ್ಷಣದಿಂದಲೇ ಹಿಂಪಡೆದರು. ಖುಷಿಗೊಂಡ ರಾಮಪ್ಪ ಆಸ್ಪತ್ರೆಗೆ ಹೋಗಿ ಪತ್ನಿಯನ್ನು ನೋಡುವ ಬದಲು ಸೀದಾ ಪೊಲೀಸ್‌ಠಾಣೆಗೆ ಹೋಗಿ ಮತ್ತೆ ತಮ್ಮ ಕುರ್ಚಿಯಲ್ಲಿ ವಿರಾಜ ಮಾನರಾದರು.

ಮರುದಿನ ಮೇಲಾಧಿಕಾರಿಗಳ ಆದೇಶದಂತೆ ರಾಮಪ್ಪ ಕಾನ್ಸ್‌ಟೇಬಲ್ ಲಕ್ಷ್ಮಣನನ್ನು ಅಮಾನತ್ತು ಮಾಡಿದರು. ಅದೇ ಸಂಜೆ ಕಾನ್ಸ್‌ಟೇಬಲ್ ಲಕ್ಷ್ಮಣ ಗೊಳೋ ಎಂದು ಅಳುತ್ತಾ ಇನ್ಸ್‌ಪೆಕ್ಟರ್ ಮುಂದೆ ಹಾಜರಾಗಿ ''ಏನ್ ಸಾರ್, ಹೀಗೆ ಮಾಡಿದಿರಿ, ನಾಳೆ ನನ್ನ ಮಗಳ ಲಗ್ನವಿದೆ ಎಂದು ಗೊತ್ತಿದ್ದೂ ಅಮಾನತ್ತು ಮಾಡಿದ್ದೀರಿ. ಯಾವ ಮುಖವಿಟ್ಟುಕೊಂಡು ನನ್ನ ಮಗಳ ಧಾರೆ ಎರೆಯಲಿ ಹೇಳಿ ಮದುವೆ ಮುಗಿಯುವವರೆಗಾದರೂ ನನ್ನ ಅಮಾನತ್ತು ಆದೇಶ ವಾಪಸ್ಸು ಪಡೆಯಿರಿ'' ಎಂದ. ಕೆಕ್ಕರಗಣ್ಣಿನಿಂದ ಅವನನ್ನೇ ನೋಡಿದ ರಾಮಪ್ಪ, ''ಸಾಧ್ಯವೇ ಇಲ್ಲ ಗೆಟ್ ಔಟ್'' ಎಂದರು. ಕೂಡಲೇ ತನ್ನ ಪ್ಯಾಂಟಿನ ಜೇಬಿನಿಂದ ಒಂದು ಬಾಟಲ್ ಹೊರತೆಗೆದ ಲಕ್ಷ್ಮಣ್ ಅದರಲ್ಲಿದ್ದ ಪೆಟ್ರೋಲ್ ಅನ್ನು ತನ್ನ ಮೈಮೇಲೆ ಸುರಿದುಕೊಂಡು, ''ನಾನು ಬದುಕಿದ್ದೇನು ಪ್ರಯೋಜನ ಸರ್, ನನ್ನ ಮಗಳನ್ನು ಅನಾಥೆಯನ್ನಾಗಿ ಮಾಡಲು ನೀವೇ ಕಾರಣ'' ಎಂದು ಹೇಳಿ ಬೆಂಕಿಕಡ್ಡಿಯನ್ನು ಗೀರಿ ಮೈಗೆ ಬೆಂಕಿ ಹತ್ತಿಸಿಕೊಂಡೇ ಬಿಟ್ಟ. ಇದನ್ನು ನೋಡಿ ದಿಗ್ಭ್ರಾಂತರಾದ ರಾಮಪ್ಪ ಪಕ್ಕದಲ್ಲೇ ಇದ್ದ ಆಸ್ಪತ್ರೆಗೆ ತಾವೇ ಖುದ್ದಾಗಿ ಲಕ್ಷ್ಮಣನನ್ನು ದಾಖಲು ಮಾಡಿ ಹೇಗಾದರೂ ಮಾಡಿ ಲಕ್ಷ್ಮಣನ ಜೀವ ಉಳಿಸಬೇಕೆಂದು ಅಲ್ಲಿದ್ದ ವೈದ್ಯರನ್ನು ಬೇಡಿಕೊಂಡರು.

ಅದೇ ರಾತ್ರಿ ಡಿಸಿಪಿ ಸಾಹೇಬರು ತಾವೇ ಖುದ್ದಾಗಿ ರಾಮಪ್ಪನವರ ಅಮಾನತ್ತು ಆದೇಶವನ್ನು ಜಾರಿ ಮಾಡಿದರು.

❑

1636ರಿಂದ 1659ರವರೆಗೆ ರಾಜ್ಯಭಾರ ಮಾಡಿದ ಕಂಠೀರವ ನರಸರಾಜ ಒಡೆಯರು ಮೊಟ್ಟಮೊದಲಿಗೆ
ಟಂಕಸಾಲೆಯೊಂದನ್ನು ಸ್ಥಾಪಿಸಿ ನಾಣ್ಯಗಳನ್ನು ಅಚ್ಚು ಹಾಕಿಸಲು ಪ್ರಾರಂಭಿಸಿದರು. ಇದಕ್ಕೆ ಕಂಠೀರಾಯ ಹಣ ಎಂದು ಹೆಸರಾಗಿತ್ತು.

# ಕಿರಿಯರಿಗಾಗಿ ಭಗವದ್ಗೀತೆ

### ಪರಿಚಯಿಸಿದವರು: ಗೋಪಾಲ್

ಇಂಗ್ಲೀಷ್ ಮೂಲ: ರೂಪಾ ಪೈ – ಕನ್ನಡಕ್ಕೆ: ಎಂ. ಶಿವಕುಮಾರ್

ಪ್ರಕಾಶಕರು: ಸಪ್ನ ಬುಕ್ ಹೌಸ್. ಬೆಲೆ: ರೂ. 200/–

ಸಪ್ನ ಆನ್ ಲೈನ್‌ನಲ್ಲಿ ಲಭ್ಯ

ಗೀತೆಯಂತಹ ಅಧ್ಯಾತ್ಮಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಕೈಯಿಂದ ಮುಟ್ಟಬೇಕಾದರೂ ಮಾನಸಿಕ ಸಿದ್ಧತೆ ಬೇಕು ಎಂದು ನಂಬಿರುವ ಸ್ಕೂಲ್ ಆಫ್ ಥಿಂಕಿಂಗ್‌ಗೆ ಸೇರಿರುವ ಗುಂಪಿನವ ನಾನು. ತುಂಬಾ ಹಿಂದೆ ಗೀತೆಯನ್ನು ಓದಲು ರಾಮಕೃಷ್ಣಾಶ್ರಮದಿಂದ ಒಂದು ಪುಸ್ತಕ ತಂದಿದ್ದೆ ಅದರ ಹೆಸರು ಗೀತಾರ್ಥಚಿಂತನೆ ಎಂದೇನೋ ಇತ್ತು. ಆಶ್ರಮದ ಹಿರಿಯ ಸ್ವಾಮಿಗಳು ಅದನ್ನು ಬರೆದಿದ್ದು ಆಗಲೇ ಹಲವಾರು ಮುದ್ರಣ ಕಂಡಿತ್ತು. ಅದರಲ್ಲಿನ ಶ್ಲೋಕ, ತಾತ್ಪರ್ಯ, ವಿವರಣೆ ಇವೆಲ್ಲವನ್ನೂ ಕಷ್ಟಪಟ್ಟು ಓದಿದ್ದೆ. ಆಮೇಲೆ ಅದೇನು ನೆನೆದರೂ ತಲೆಯಲ್ಲಿ ಒಂದು ಎಳ್ಳಿನಷ್ಟೂ ಉಳಿದಿರಲಿಲ್ಲ! ನಂತರ ಇದು ನನಗೆ ಹೇಳಿಸಿದ್ದೇ ಅಲ್ಲ ಅಂತ ಕೈಬಿಟ್ಟಿದ್ದೆ. ನಂತರ ಸುಮಾರು ಸಲ ಗೀತೆ ಓದಬೇಕು ಅಂತಲೋ ಅಥವಾ ಮತ್ಯಾವುದಾದರೂ ಅಧ್ಯಾತ್ಮದ ಪುಸ್ತಕ ಕೈಯಲ್ಲಿ ಹಿಡಿದರೆ ಸಾಕು ಮನಸ್ಸು ಎಲ್ಲೋ ಓಡಿ ಬಿಡುತ್ತಿತ್ತು. ಶ್ರೀ ಶಿವಕುಮಾರ್ ಅವರು ಕಿರಿಯರಿಗಾಗಿ ಭಗವದ್ಗೀತೆಯನ್ನು ಕೊಟ್ಟಾಗ ಮತ್ತೆ ಕಬ್ಬಿಣದ ಕಡಲೆ ತಿನ್ನಬೇಕಲ್ಲಾ ಎನ್ನುವ ಭಯದೊಂದಿಗೇ ಪುಸ್ತಕ ಮನೆಗೆ ತಂದೆ. ಎರಡು ದಿವಸ ಅದರತ್ತ ಕಣ್ಣೆತ್ತಿಯೂ ನೋಡಲಿಲ್ಲ. ಮೂರನೇ ರಾತ್ರಿ ಕೈಯಲ್ಲಿ ಪುಸ್ತಕ ಹಿಡಿದುಕೂತವನು ಎದ್ದದ್ದು ಕೊನೇ ಪೇಜಿನ ಕೊನೇ ಸಾಲು ಓದಿದ ನಂತರ! ಅದರಿಂದ ನಾನು ತಿಳಿದಿದ್ದ ಒಂದು ನಂಬಿಕೆ ಕೊಂಚ ಬದಲಾಯಿಸಿಕೊಂಡೆ! ಚಿಕ್ಕ ಹುಡುಗರು ಮತ್ತು ಹುಡುಗಿಯರೂ ದೊಡ್ಡವರೂ ಸೇರಿದ ಹಾಗೆ ಖುಷಿಯಿಂದ ಸಂಭ್ರಮದಿಂದ ಒಂದು ಗೀತೆಯಂತಹ ಪುಸ್ತಕವನ್ನು ಅಭ್ಯಾಸ ಮಾಡಬಹುದು ಎಂದು ಶ್ರೀ ಶಿವಕುಮಾರ್ ಅವರು ರೂಪಿಸಿದ್ದಾರೆ. ಇಂಗ್ಲಿಷ್ ಮೂಲದ್ದು ಇದು ಎಂದು ಅವರು ಘೋಷಿಸಿಕೊಂಡಿರುವುದರಿಂದ ಮಾತ್ರ ನಮಗೆ ಇದಕ್ಕೊಂದು ಮೂಲವಿದೆ ಎಂದು ಗೊತ್ತಾಗುತ್ತದೆ! ಬಹುಶಃ ಈ ಘೋಷಣೆಯಿಲ್ಲದಿದ್ದರೆ ಇದು ಮೂಲ ನಮ್ಮದೇ ಎನ್ನುವಂತೆ ಇಲ್ಲಿ ಪರಿಸರದ ಭಾಷಾ ಪ್ರಯೋಗವಾಗಿದೆ. ಒಟ್ಟಾರೆಯಾಗಿ ಕನ್ನಡ ಸಾರಸ್ವತಲೋಕಕ್ಕೆ ಈ ಗ್ರಂಥ ಒಂದು ಅಮೂಲ್ಯ ಕೊಡುಗೆ ಮತ್ತು ಗೀತೆಯನ್ನು ಪರಿಚಯಿಸುವಲ್ಲಿ ಅಪೂರ್ವ ಪ್ರಯತ್ನ ಎಂದು ಗಂಟಾಘೋಷವಾಗಿ ಹೇಳಬಹುದಾದ ಕೃತಿ. ಕಿರಿಯರಿಗಾಗಿ ಗೀತೆ ಬಂದಿದೆ, ಹಾಗೆಯೇ ಕಿರಿಯರಿಗಾಗಿ ಮಿಕ್ಕ ಕಬ್ಬಿಣದ ಸ್ಟೀಲಿನ ಪ್ಲಾಟಿನಮ್ಮಿನ ಕಡಲೆಗಳೂ ಬರಲಿ ಎಂದು ಆಶಿಸುತ್ತೇನೆ. ಶ್ರೀಮತಿ ರೂಪಾ ಪೈ ಅವರು ಇಂಗ್ಲಿಷಿನಲ್ಲಿ ರಚಿಸಿರುವ ದಿ ಗೀತಾ ಫಾರ್ ದಿ ಚಿಲ್ಡ್ರನ್ ಗ್ರಂಥವನ್ನು ಶ್ರೀ ಶಿವಕುಮಾರ್

ಅವರು ಕನ್ನಡದಲ್ಲಿ ತಂದಿದ್ದು ಅದನ್ನು ಕಿರಿಯರಿಗಾಗಿ ಭಗವದ್ಗೀತೆ ಎಂದು ಹೆಸರಿಸಿದ್ದಾರೆ. ಗೀತೆಯ ಬಗ್ಗೆ ಮಕ್ಕಳು ತಮ್ಮ ಆಸಕ್ತಿಯನ್ನು ಬೆಳೆಸಿಕೊಳ್ಳಲು ಈ ಪುಸ್ತಕ ಸಹಾಯ ಮಾಡುತ್ತದೆ ಎಂದು ಮುನ್ನುಡಿಯಲ್ಲಿ ಶಿವಕುಮಾರ್ ಅವರು ಹೇಳಿದ್ದಾರೆ. ಪುಸ್ತಕ ಕೈಗೆ ತೆಗೆದುಕೊಂಡು ಮೊದಲ ಪುಟ ತೆರೆದ ಹಾಗೆಯೇ ಸರಳವಾಗಿ ಬೇಸರ ಬರದ ಹಾಗೆ ಓದಿಸಿಕೊಂಡು ಹೋಗುವ ಗುಣಹೊಂದಿರುವ ಈ ಪುಸ್ತಕ ಹಿರಿಯರಿಗೂ ತಕ್ಕದ್ದು ಎನ್ನುವ ಭಾವನೆ ಹಲವು ಪುಟ ಓದುತ್ತಿದ್ದ ಹಾಗೆಯೇ ಹುಟ್ಟಿಸುತ್ತದೆ.

ಮೊದಲ ಪ್ಲಸ್ ಪಾಯಿಂಟ್ ಅಂದರೆ ಮಾಮೂಲಾಗಿ ಈ ರೀತಿಯ ಪುಸ್ತಕಗಳು ಹೊಡೆಸುವ ಬೋರ್ ಅನ್ನು ಇದು ಎಲ್ಲಿಯೂ ಮಾಡುವುದಿಲ್ಲ, ಬದಲಿಗೆ ಮುಂದಕ್ಕೆ ಓದುವ ಆಸಕ್ತಿ ಹುಟ್ಟಿಸುತ್ತದೆ. ಒಂದೇ ಸಿಟ್ಟಿಂಗ್‌ನಲ್ಲಿ ಓದಿ ಮುಗಿಸುವ ಸೆಳೆತ ಇದರಲ್ಲಿ ಎದ್ದುಕಾಣುವ ಅಂಶ. ಈ ಪುಸ್ತಕ ಅನುವಾದ ಎಂದು ಎಲ್ಲಿಯೂ ಅನಿಸುವುದಿಲ್ಲ, ಇದು ಮತ್ತೊಂದು ಹೆಗ್ಗಳಿಕೆ. ಕ್ಲಿಷ್ಟ ಅನಿಸಬಹುದಾದ ವಿಷಯಗಳೂ ಸಹ ಬರವಣಿಗೆಯ ಆಪ್ತ ಮನೋಭಾವದಿಂದ ಸಲೀಸಾಗಿ ಬಿಡುತ್ತದೆ. ಅದರ ಜೊತೆಗೆ ರೀಡರ್ ಫ್ರೆಂಡ್ಲಿ ಧೋರಣೆ ಪುಸ್ತಕವನ್ನು ಮೆಚ್ಚಿಸುವ ಅಂಶಗಳಲ್ಲಿ ಒಂದು.

ರೀಡರ್ ಫ್ರೆಂಡ್ಲಿ ಅಂದೆ, ದಿನನಿತ್ಯದ ಅನೇಕ ಸಮಸ್ಯೆಗಳು ಆಗುಹೋಗುಗಳು ಇಲ್ಲಿ ಗೀತೆಯ ವಿವರ ನೀಡುತ್ತಾ ತಳಕಿ ಹಾಕಿಕೊಂಡು ಕಬ್ಬಿಣದ ಕಡಲೆ ಆಗಬಹುದಾಗಿದ್ದ ಅಪಾಯವನ್ನು ನಿವಾರಿಸಿ ಬಿಡುತ್ತದೆ. ಬಲ್ಬು ಮತ್ತು ಟ್ರೆಡ್ಮಿಲ್ ಬಗ್ಗೆ ಹರಿಯುವ ಯೋಚನಾಲಹರಿ, ಟ್ರೆಡ್ಮಿಲ್ ಮೇಲೆ ಟವಲ್ಲುಗಳನ್ನು ಒಣಗಿಹಾಕಲು ಉಪಯೋಗಿಸಲಾಗುತ್ತದೆ ಎನ್ನುವ ಸತ್ಯದೊಂದಿಗೆ ನಿಮ್ಮ ಮುಖದಲ್ಲಿ ನಗೆ ಚಿಮ್ಮಿಸುತ್ತದೆ. ಹೀಗೆ ನಗೆ ಚಿಮ್ಮಿಸುವ ಅನೇಕ ಪುಟಗಳು ನಿಮ್ಮನ್ನು ಗೀತೆ ಎ ಲೈಟರ್ ರೀಡಿಂಗ್ ಅಂತ ಅನಿಸುವಷ್ಟು ಆಕರ್ಷಕವಾಗಿದೆ. ಗೀತೆಯನ್ನು ಡ್ರಾಮಾಟೈಸ್ ಮಾಡಿ ಅಲ್ಲಿನ ಪ್ರಮುಖ ಪಾತ್ರಧಾರಿಗಳಾದ ಕೃಷ್ಣ, ಅರ್ಜುನ, ಸಂಜಯ ಮತ್ತು ಧೃತರಾಷ್ಟ ಇವರುಗಳನ್ನು ಪಾತ್ರಧಾರಿಗಳ ಹಾಗೆ ಚಿತ್ರಿಸಿರುವುದು ಒಂದು ಹೊಸಾ ನೋಟ.

ಪ್ರತಿ ಅಧ್ಯಾಯವನ್ನು ಪುಸ್ತಕದಲ್ಲಿ ಮೂರು ಭಾಗ ಮಾಡಲಾಗಿದೆ. ಮೊದಲು ಕೃಷ್ಣಾರ್ಜುನ ಸಂವಾದ, ಎರಡನೆಯದು ಗೀತೆಯಿಂದ ಕಲಿಯಬೇಕಾದ ಪಾಠಗಳು ಹಾಗೂ ಮೂರನೆಯದು ಆ ಅಧ್ಯಾಯಕ್ಕೆ ಸಂಬಂಧಿಸಿದ ಒಂದು ಶ್ಲೋಕ, ಅದರ ವಿವರಣೆ. ಇದು ಓದುವಿಕೆಗೆ ಹೇಗೆ ಪೂರೈಕೆಯಾಗುತ್ತದೆ ಎಂದರೆ ಮೊದಲನೆಯದು ಸಲೀಸಾಗಿ ಗೀತೆಯ ಪಾಠಕ್ಕೆ ಸರಿಹೊಂದಿದೆ. ಎರಡನೆಯ ಭಾಗದಲ್ಲಿ ಈಗಿನ ಪೀಳಿಗೆಗೆ ಅರ್ಥವಾಗುವಂತೆ ಗೀತೆಯ ಪಾಠವನ್ನು ಹೇಳಿರುವುದು ಅತ್ಯುತ್ತಮ ಸಂವಹನ ರೀತಿ ಮತ್ತು ಮೂರನೇ ಭಾಗದಲ್ಲಿ ಒಂದು ಶ್ಲೋಕ ಮತ್ತು ಅದರ ಅರ್ಥ. ಅದನ್ನು ಗಟ್ಟಿಯಾಗಿ ಹೇಳಿಕೊಳ್ಳಿ ಎನ್ನುವ ಸೂಚನೆ. ಇದರಿಂದ ಮಕ್ಕಳ ತಂದೆ ತಾಯಿಗಳಿಗೆ ಸಂತೋಷ ಖುಷಿ ಎಲ್ಲವೂ ಸಿಗುತ್ತದೆ. ಮತ್ತೊಂದು ಖುಷಿ ಕೊಡುವ ಅಂಶವೆಂದರೆ ನಡು ನಡುವೆ

ಕಾಣಿಸಿಕೊಳ್ಳುವ ಬೇರೆ ಬೇರೆ ಸಾಹಿತಿಗಳ ಉತ್ತಮ ಪುಸ್ತಕಗಳ ಉಲ್ಲೇಖ. ಒಂದೆರೆಡು ಉದಾಹರಣೆಗಳೆಂದರೆ ಜಾಕ್ ಅಂಡ್ ದಿ ಬೀನ್ ಸ್ಟಾಕ್ ಕತೆಯನ್ನು ಅಶ್ವತ್ಥ ವೃಕ್ಷದ ಉಪಮೆಗೆ ಹೋಲಿಸಿರುವುದು. ಟು ಕಿಲ್ ಎ ಮಾಕಿಂಗ್ ಬರ್ಡ್ (ಹಾರ್ಪರ್ ಲೀ) ಪುಸ್ತಕದ ಪಾತ್ರ ಆಟ್ಟಿಕಸ್ ಅನ್ನು ಉದಾಹರಿಸಿರುವುದು. ಈ ಹೋಲಿಕೆಯ ಉತ್ತುಂಗ ಎದ್ದು ಕಾಣುವುದು ವಿಶ್ವರೂಪದರ್ಶನವನ್ನು ತಿಳಿಸುವ ಉಮೇದಿನಲ್ಲಿ. ಆಟಂ ಬಾಂಬ್ ಸ್ಫೋಟವಾದಾಗ ಖ್ಯಾತ ಅಣುವಿಜ್ಞಾನಿ ಒಪನ್ ಹೈಮರ್ ಗೀತೆಯ ಶ್ಲೋಕಗಳನ್ನು ಮತ್ತೆ ಮತ್ತೆ ಉದ್ಗರಿಸುತ್ತಾನೆ. ಆಕರ್ಷಕ ಚಿತ್ರಗಳನ್ನು ಸಾಯನ್ ಮುಖರ್ಜಿ ರಚಿಸಿದ್ದು ಅವು ಸಂದರ್ಭೋಚಿತವಾಗಿದೆ ಮತ್ತು ಮನ ಸೆಳೆಯುತ್ತದೆ.

❑

---

ಕರ್ನಾಟಕ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ಕಾಲವು ಸುವರ್ಣಯುಗವೆನಿಸಿದೆ. ವಿಜಯನಗರದಲ್ಲಿ ಹತ್ತಾರು ನಮೂನೆಯ ಚಿನ್ನದ, ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ವಿವಿಧ ಮೌಲ್ಯಗಳಲ್ಲಿ ಅಚ್ಚಾಗುತ್ತಿದ್ದವು. ನಾಣ್ಯಗಳ ಮೇಲಿನ ಬರಹದಲ್ಲಿಯೂ ಮತ್ತು ಅವುಗಳ ಮೇಲೆ ಇರುತ್ತಿದ್ದ ದೇವತೆಗಳ ಚಿತ್ರದಲ್ಲಿಯೂ ವಿಶೇಷವಾದ ವೈವಿಧ್ಯತೆಯು ಕಾಣುತ್ತಿತ್ತು. ವಿಜಯನಗರದ ನಾಣ್ಯಗಳು ಜನಾನುರಾಗಿಯಾಗಿದ್ದುದೂ ಅಲ್ಲದೇ ಅವು ಮುಂದಿನ ನಾಣ್ಯಗಳಿಗೆ ಮಾದರಿಯಾಗಿದ್ದವು. ವಿಜಯನಗರದ ಕಾಲದಲ್ಲಿ ಮುತ್ತು ರತ್ನಗಳನ್ನು ಮಾರುಕಟ್ಟೆಯಲ್ಲಿ ಮಾರುತ್ತಿದ್ದರು ಎಂದು ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಮಾರ್ಗದರ್ಶಿಗಳು ಒಂದು ಜಾಗವನ್ನು ತೋರಿಸುತ್ತಾರೆ. ಇದರಿಂದಾಗಿ ವಿಜಯನಗರದ ಅರಸರ ಕಾಲವನ್ನು ಕರ್ನಾಟಕ ನಾಣ್ಯ ಇತಿಹಾಸದಲ್ಲಿಯೂ ಸುವರ್ಣಯುಗವೆಂದು ಕರೆಯಬಹುದು. ರಾಜರ ಕಾಲದಲ್ಲಿ ಕಪ್ಪಕಾಣಿಕೆ ಮತ್ತು ತೆರಿಗೆಗಳನ್ನು ನಾಣ್ಯ ರೂಪದಲ್ಲಿಯೂ ಮತ್ತು ಅದಕ್ಕಿಂದ ವಿಶೇಷವಾಗಿ ಧಾನ್ಯರೂಪದಲ್ಲಿಯೂ ಕೊಡುವ ಪದ್ಧತಿಯು ಆಚರಣೆಯಲ್ಲಿತ್ತು.

# ಕನಸಿಗೊಂದು ಸೂಟು!

**- ಎಂ.ಕೆ. ಭಾಸ್ಕರ ರಾವ್**

ವಿಚಿತ್ರ ಆದರೂ ಸತ್ಯ ಎನ್ನುವುದಕ್ಕೆ ಈ ಕಂತು ಒಂದು ಉತ್ತಮ ಉದಾಹರಣೆಯಾಗಬಲ್ಲದು. ಸಿನಿಮಾರಂಗದಲ್ಲಿ ನಡೆಯುವುದೆಲ್ಲವೂ ವಿಚಿತ್ರವೂ ಸತ್ಯವೂ ಆಗಿರುವಾಗ ಇದರಲ್ಲೇನು ಮಹಾ ಎಂದು ಮೂಗೆಳೆಯುವವರು ಕೂಡಾ ಈ ನಿದರ್ಶನವನ್ನು ಲಘು ಹೃದಯದೊಂದಿಗೆ ಸ್ವಾಗತಿಸುತ್ತಾರೆಂಬ ನಂಬಿಕೆ ನನ್ನದು.

**ಕಥಾ ನಾಯಕ ಜೀತದಾಳು ಎಂದ ಮೇಲೆ ಕಾಸ್ಟ್ಯೂಮ್ ಪ್ರಶ್ನೆ ಎಲ್ಲಿ ಬರ್ತದ್ರೀ?**

ಈ ಹೀರೋ ಕಥಾನಾಯಕ (ಕನಾ) ಈಗ ನಮ್ಮೊಂದಿಗೆ ಇಲ್ಲ. ಅತ್ಯಂತ ಸೃಜನಶೀಲ ಪ್ರವೃತ್ತಿಯ ನಾಯಕ, ಹತ್ತಾರು ಪ್ರಯೋಗ ನಡೆಸಿ ಉದ್ಯಮದ ಒಳ ಹೊರಗಿನ ಗಮನವನ್ನು ತನ್ನತ್ತ ಎಳೆದಿದ್ದ ಮಹಾಶಯ. ಆ ಮನುಷ್ಯನ ಒಡನಾಟಕ್ಕೆ ಬಂದವರೆಲ್ಲರೂ ಆ ಪಾದರಸ ಸದೃಶ್ಯ ವ್ಯಕ್ತಿತ್ವ ಕಂಡು ಬೆರಗಾದವರೇ. ಆ ದಿನಗಳಲ್ಲಿ ಅತ್ಯಂತ ಬೇಡಿಕೆಯ ಸಿನಿಮಾ ಹೀರೋ ಆಗಿದ್ದರೂ ರಂಗಭೂಮಿಯನ್ನು ಎದೆಗೆ ಅಪ್ಪಿಕೊಂಡು ಕಾರ್ಯಪ್ರವೃತ್ತರಾಗಿದ್ದ ಈ ನಟ, ಸಿನಿಮಾ ರಂಗದೊಳಗೆ ಪಿಡುಗಿನಂತೆ ಬೆಳೆಯುತ್ತಿದ್ದ ಹುಚ್ಚಾಟಕ್ಕೆ ಒಂದು ಅಂತ್ಯ ಹಾಡುವ ಮನೋಭೂಮಿಕೆಯನ್ನೂ ಹೊಂದಿದ್ದರು. ಆದರೆ ವಿಧಿ ಅವರನ್ನು ಬದುಕಗೊಡಲಿಲ್ಲ.

ಜೀವಿತಾವಧಿಯಲ್ಲಿ ಹತ್ತಿರ ಹತ್ತಿರ ನೂರು ಸಿನಿಮಾಗಳಲ್ಲಿ, ಅದೂ ಕೇವಲ 10-12 ವರ್ಷದ ಕ್ಷಿಪ್ರ ಅವಧಿಯಲ್ಲಿ ನಾಯಕನಾಗಿ ಅಭಿನಯಿಸಿದ್ದ ಈ ಕಲಾವಿದ, ವಾಣಿಜ್ಯ ಸಿನಿಮಾದಲ್ಲಿ ಅಭಿನಯಿಸಿ ಹಣ ಮಾಡುತ್ತಿದ್ದರು. ಅದೇ ಹಣವನ್ನು ಉತ್ತಮ ಹಾಗೂ ಸದಭಿರುಚಿಯ ಸಿನಿಮಾ ನಿರ್ಮಾಣಕ್ಕೆ ವಿನಿಯೋಗಿಸುತ್ತಿದ್ದರು. ಅವರ ಗಳಿಕೆಯ ಒಂದು ಭಾಗ ರಂಗಭೂಮಿಗೆ ಹೋಗುತ್ತಿತ್ತು. ಅದೊಂದು ರೀತಿಯಲ್ಲಿ ಎರಡು ಕುದುರೆ ಸವಾರಿ. ಆದರೆ ಅವರೆಂದೂ ಮುಗ್ಗರಿಸಲಿಲ್ಲ, ಅಷ್ಟರಮಟ್ಟಿಗೆ ಸಮತೋಲನ ಕಾಯ್ದುಕೊಂಡಿದ್ದರು.

ವಾಣಿಜ್ಯಕ ಸಿನಿಮಾಗಳಲ್ಲಿ ಅಭಿನಯಿಸಲು ಶುರು ಮಾಡಿಕೊಂಡ ನಂತರದಲ್ಲಿ ಬೇಕು-ಬೇಡ ಎಂಬ ಆಯ್ಕೆಯ ಅವಕಾಶ ಕಡಿಮೆ. ಒಂದೋ ಒಪ್ಪಿಕೊಳ್ಳಬೇಕು ಅಥವಾ ದೂರ ಸರಿಯಬೇಕು. ಇಂಥ ಸಂದರ್ಭದಲ್ಲಿ ಒಬ್ಬ ನಿರ್ಮಾಪಕ, ಜೀತದಾಳುಗಳ ಪಡಿಪಾಟಲನ್ನು ಹೇಳುವ ಕಥಾವಸ್ತುವನ್ನು ಹೊತ್ತು ಈ ನಟನ ಕಾಲ್‌ಶೀಟ್ ಕೇಳಿ ಪಡೆದರು. ಕ್ರೂರ ಶ್ರೀಮಂತ. ಕನಾ ಅವನಲ್ಲಿ ಜೀತದಾಳು. (ನಿಮ್ಮ ಊಹೆ ಸರಿ) ಆ ಶ್ರೀಮಂತನಿಗೋ ಅಪ್ಸರೆಯಂಥ ಸುಂದರ ಮಗಳು. ಕನಾ ಜೀತದಾಳಾಗಿದ್ದರೂ ಆಕೆ ಅವನಿಗೆ ಮನ ಸೋಲುತ್ತಾಳೆ. ಹೌದೇ ಹೌದು. ಕಥೆ ನೀವು ಊಹಿಸಿದಂತೆಯೇ ಸಾಗುತ್ತದೆ. ಕನಾ ಬೇಡಬೇಡವೆಂದರೂ ಅವರಿಬ್ಬರಲ್ಲಿ ಪ್ರೇಮಾಂಕುರವಾಗುತ್ತದೆ. ಜೀತದಾಳುವಿನ ಕಥೆಯನ್ನು ಮುಗಿಸಲು ಶ್ರೀಮಂತ ಹರ ಸಾಹಸ ಮಾಡಿಯೂ, ಪ್ರಹ್ಲಾದನನ್ನು ಕೊಲ್ಲಿಸುವ

ಯತ್ನ ಮಾಡಿ ಹಿರಣ್ಯ ಕಶ್ಯಪು ಸೋತಂತೆ ಪರಾಭವಗೊಳ್ಳುತ್ತಾನೆ. ಹೋರಾಟದ ಕೊನೆಯಲ್ಲಿ ಶ್ರೀಮಂತ ಸೋಲುತ್ತಾನೆ, ಜೀತದಾಳು ಗೆದ್ದು ಸುಂದರಿಯ ಕೈಯನ್ನು ಹಿಡಿಯುತ್ತಾನೆ. ತೆರೆಯ ಮೇಲೆ ಶುಭಂ ಮೂಡುತ್ತದೆ.

ಇಷ್ಟೇ ಆದರೆ ಕಥೆಗೆ ಅದನ್ನು ಆಧರಿಸಿದ ಸಿನಿಮಾಕ್ಕೆ ಮಜಾ ಬರುವುದಾದರೂ ಹೇಗೆ...? ಒಂದಿಷ್ಟು ಹೊಡೆದಾಟ ಬಡಿದಾಟ ಬೇಡವೇ...? ಮಳೆಯಲ್ಲಿ ತೊಯ್ಯುತ್ತ ಮರ ಸುತ್ತಿ ಕುಣಿಯುವ ಹಾಡು ಬೇಡವೇ...? ತಂತ್ರ ಪ್ರತಿಯಂತ್ರ ಷಡ್ಯಂತ್ರ ಕಥೆಯ ಕುತೂಹಲಕರ ಓಟಕ್ಕೆ ಬೇಡವೇ...? ಇದೆಲ್ಲ ಮಸಾಲೆ ಅರೆಯುವುದಕ್ಕೆ ಹೆಸರಾದ ನಿರ್ದೇಶಕರು ಚಿತ್ರಕಥೆಯನ್ನು ಸಿದ್ಧಪಡಿಸಿದ್ದಾಯಿತು. ಕನಾ ನಟನಷ್ಟೇ ಅಲ್ಲ, ಸಿನಿಮಾ ನಿರ್ದೇಶಕನೂ ಹೌದಾಗಿದ್ದರು. ಚಿತ್ರಕಥೆಯನ್ನು ಓದದೆ ಕ್ಯಾಮೆರಾ ಮುಂದೆ ತಾನು ಬರುವುದಿಲ್ಲ ಎನ್ನುವುದು ಅವರು ಹಾಕುವ ಸೌಮ್ಯ ಷರತ್ತುಗಳಲ್ಲಿ ಒಂದಾಗಿತ್ತು.

ಚಿತ್ರ ಕಥೆಯನ್ನು ಪಕ್ಕಕ್ಕೆ ಇಟ್ಟ ನಿರ್ಮಾಪಕ, ಯಾವುದಕ್ಕೂ ಒಮ್ಮೆ ನಟನೊಂದಿಗೆ ಚರ್ಚಿಸಿ ಕೊನೆಯ ನಿರ್ಧಾರಕ್ಕೆ ಬರುವ ತೀರ್ಮಾನಕ್ಕೆ ಬಂದರು. ಸರಿ, ಮೀಟಿಂಗ್ ಫಿಕ್ಸ್ ಆಯಿತು. ಕಥೆ ಕೇಳಿದ ಕನಾ ಒಕೆ ಎಂದರು. ಹೀರೋಗೆ ಎಂಥ ಕಾಸ್ಟ್ಯೂಮ್ ಇರಬೇಕೆಂಬುದು ನಿರ್ಮಾಪಕ – ನಿರ್ದೇಶಕರ ನೆಕ್ಸ್ಟ್ ಕ್ವೆಶ್ಚನ್. ಖಳನಂತೆ ಹಹ್ಹಹ್ಹಾ ಎಂದು ನಕ್ಕು ಸಿಗರೇಟಿನ ದೀರ್ಘ ದಂ ಎಳೆದ ಕನಾ, ''ಅಲ್ರೀ ಕಥಾ ನಾಯಕ ಜೀತದಾಳು ಎಂದ ಮೇಲೆ ಕಾಸ್ಟ್ಯೂಮ್ ಪ್ರಶ್ನೆ ಎಲ್ಲಿ ಬರ್ತದ್ರೀ. ಒಂದು ಖಾಕಿ ನಿಕ್ಕರ್ ಮೇಲೊಂದು ಮಾಸಲು ಅಂಗಿ ಇಷ್ಟೇ ಸಾಕು, ಹೆಗಲ ಮೇಲೊಂದು ಚಿಂದಿಯಾದ ಟವೆಲ್ ಇರಲಿ. ತೋಟ, ಗದ್ದೆ, ಕಾಡು ಮೇಡಲ್ಲಿ ಚಿತ್ರೀಕರಣ ನಡೆಯೋದ್ರಿಂದ ಒಂದು ಜೊತೆ ಹವಾಯಿ ಚಪ್ಪಲಿ ಇರಲಿ'' ಎಂದು ಮಾತು ಮುಗಿಸಿದರು.

ಶೂಟಿಂಗ್ ಶುರುವಾಗಿ ಸುಸೂತ್ರವಾಗಿ ಮುಂದುವರಿಯಿತು. ಆ ನಟನೇ ಹಾಗೆ. ಒಪ್ಪಿಕೊಂಡ ಕೆಲಸ ಎಲ್ಲೂ ಯಾವುದಕ್ಕೂ ನಿಲ್ಲುವುದು ಆ ಮಹರಾಯನಿಗೆ ಇಷ್ಟವಾಗದ ವಿಚಾರ. ಒಂದೆರಡು ಹಾಡುಗಳ ಚಿತ್ರೀಕರಣ ಬಿಟ್ಟರೆ ಉಳಿದೆಲ್ಲ ಸನ್ನಿವೇಶಗಳೂ ಮುಕ್ತಾಯವಾದವು. ಅದಕ್ಕೂ ಸಮಯ ಕೂಡಿಬಂತು ಹಾಡಿನ ಚಿತ್ರೀಕರಣಕ್ಕೆಂದು ಚಿಕ್ಕಮಗಳೂರು, ಸಕಲೇಶಪುರ... ಹೀಗೆ ಎರಡು ಮೂರು ಸ್ಥಳಗಳನ್ನು ಆಯ್ಕೆ ಮಾಡಿದ್ದೂ ಆಯಿತು. ದಿನಾಂಕವೂ ನಿಗದಿಯಾಯಿತು. ಕನಾ, ಅಲ್ಲಿಗೆ ಹಿಂದಿನ ಸಂಜೆಯೇ ಬಂದು ಸೇರಿಕೊಂಡರು. ರಾತ್ರಿ ಉಳಿದ ರೂಮಿನಲ್ಲೇ ಬೆಳಗ್ಗೆ ಮೇಕಪ್ ಮಾಡಿಕೊಂಡು ಚಿತ್ರೀಕರಣದ ತಾಣ ಸೇರುವುದು, ಸಂಜೆವರೆಗೂ ಚಿತ್ರೀಕರಣ ನಡೆಸುವುದು ತೀರ್ಮಾನ.

ಕನಾ, ಊಟ ಪೂರೈಸೋ ಹೊತ್ತಿಗೆ ಕಾಸ್ಟ್ಯೂಮ್ ಬಂತು. ಅದನ್ನು ನೋಡಿದ ಕನಾ ಅಕ್ಷರಶಃ ಬೆಚ್ಚಿಬಿದ್ದರು. ನೋಡಿದರೆ ಅದು ಹಾಲ್ನೊರೆ ಬಣ್ಣದ ಥ್ರಿ ಪೀಸ್ ರೇಮಂಡ್ ಸೂಟ್. ಆ ಕಾಲದಲ್ಲೇ ಏನಿಲ್ಲವೆಂದರೂ ಹತ್ತು ಹದಿನೈದು ಸಾವಿರಕ್ಕೆ ಕಡಿಮೆ ಇಲ್ಲದ ಬೆಲೆ ಬಾಳುವ ಸೂಟು. ಜೊತೆಗೆ ಬೆಲೆ ಬಾಳುವ ಟೈ, ರೇಬಾನ್ ಗಾಗಲ್ಸ್, ಮಿರಿಮಿರಿ ಮಿಂಚುವ ಬೂಟು ಮ್ಯಾಚಿಂಗ್ ಸಾಕ್ಸ್. ಖಾಕಿ ಚಡ್ಡಿ, ಹರಕಲು ಅಂಗಿಯ ಹೈದ ಜೀತದಾಳುವಿಗೆ ಈ ಅದ್ಧೂರಿ ವಸ್ತ್ರೋಪಚಾರ ಯಾಕೆ ಎನ್ನುವುದು ಅರ್ಥವಾಗದ ಕನಾ, ಪಕ್ಕದ ರೂಮಿನಲ್ಲೇ ಇದ್ದ ನಿರ್ದೇಶಕರಿಗೆ ಕರೆ ಕಳಿಸಿದರು. ನಿರ್ದೇಶಕರ ಜೊತೆ ನಿರ್ಮಾಪಕರೂ ಬಂದರು.

ವಿಷಯ ತಿಳಿದ ಇಬ್ಬರೂ ಒಂದೇ ಧ್ವನಿಯಾಗಿ ''ಅದು ಕನಸಿನ ಸೀನ್‌ಗೆ ಸಾರ್'' ಎಂದರು. ಜೀತದಾಳು ಇಂಥ ಕನಸನ್ನು ಕಾಣೋದು ಅಂದರೆ ತೀರಾ ಕೃತಕವೆನಿಸುತ್ತದೆ ಎನ್ನುವುದು ಕನಾ ವಾದ. ನಿರ್ಮಾಪಕ, ನಿರ್ದೇಶಕರು ಆ ವಾದವನ್ನು ಒಪ್ಪಿಕೊಂಡೇ ಪ್ರತಿವಾದ ಮಂಡಿಸಿದರು. ''ನೀವು ಹೇಳೋದು ಕರ್ರೆಕ್ಟ್ ಸಾರ್. ಆದರೆ ಆ ಸನ್ನಿವೇಶ ನಾಯಕಿಯದು ಸಾರ್. ಜೀತದಾಳುವಿಗೆ ಕನಸು ಬೀಳೋಲ್ಲ ಸರ್. ಆದರೆ ಹೀರೋಯಿನ್ ಶ್ರೀಮಂತರ ಮಗಳು ಸಾರ್, ಅವಳಿಗೆ ತನ್ನ ಪ್ರಿಯಕರ ಭಾರೀ ಹಣವಂತನಂತೆ, ಸೂಟು ಬೂಟು ಧರಿಸಿ ತನ್ನೊಂದಿಗೆ ಹಾಡಿ ಕುಣಿದಂತೆ ಕನಸು ಬೀಳುತ್ತದೆ. ಇದು ನ್ಯಾಚುರಲ್ ಆಗಿರೋಲ್ವ ಸಾರ್...'' ಎಂದು ಅಲ್ಲಾಡಲಾಗದಂತೆ ಪಟ್ಟು ಹಾಕಿದರು. ಕನಾಗೆ ಮಾತಾಡಲು ಇನ್ನೇನೂ ಇರಲಿಲ್ಲ. ಬಾಯಿ ಮುಚ್ಚಿಕೊಂಡು ತಯಾರಾಗಿ ಶೂಟಿಂಗ್‌ಗೆ ಕಾರನ್ನೇರಿದರು.

❑

---

## ಬೆಕ್ಕಿನ ಸಮಸ್ಯೆ

**ಸರ್ ಐಸ್ಯಾಕ್ ನ್ಯೂಟನ್ ಅವರ ಮನೆಯಲ್ಲಿ ಮೂರು ಬೆಕ್ಕುಗಳಿದ್ದವು. ಮೂರೂ ಬೇರೆ ಬೇರೆ ಸೈಜಿನವು. ನ್ಯೂಟನ್ ಅವರು ತಮ್ಮ ಪ್ರಯೋಗಾಲಯದಲ್ಲಿ ಕೆಲಸದಲ್ಲಿ ನಿರತರಾಗಿರುವಾಗ ಅಲ್ಲಿಗೂ ಬಂದು ಗಲಾಟೆ ಮಾಡುತ್ತಿದ್ದವು. ಇದನ್ನು ತಪ್ಪಿಸಲು ನ್ಯೂಟನ್ ಅವರು ಬಾಗಿಲು ಹಾಕಿಕೊಳ್ಳುತ್ತಿದ್ದರು. ಆದರೆ ಬೆಕ್ಕುಗಳು ಹೊರಗಿನಿಂದ ತಮ್ಮ ಕೈ ಕಾಲಿನ ಉಗುರಿನಿಂದ ಬಾಗಿಲು ಕೆರೆಯುತ್ತಿದ್ದವು. ಇದು ಅವರ ಪ್ರಯೋಗದ ಕೆಲಸಗಳಿಗೆ ತೊಂದರೆ ಮಾಡುತ್ತಿದ್ದವು. ಕೆಲವು ದಿನ ಕಳೆದ ಮೇಲೆ ನ್ಯೂಟನ್ ಅವರು ಬಾಗಿಲಿಗೆ ಮೂರು ಬೇರೆ ಬೇರೆ ಸೈಜಿನ ರಂಧ್ರಗಳನ್ನು ಕೊರೆಸಿದರಂತೆ. ಯಾಕೆಂದರೆ ಮೂರೂ ಬೆಕ್ಕುಗಳು ಆ ರಂಧ್ರದಿಂದ ಬಂದು ಹೋಗಿ ಮಾಡಿಕೊಂಡಿರಲಿ ತಮಗೆ ತೊಂದರೆ ಆಗಲ್ಲ ಅಂತ. ಒಂದೆರಡು ದಿನಗಳ ನಂತರ ಮನೆಗೆ ಬಂದ ಸ್ನೇಹಿತರು ಏನಿದು ಬಾಗಿಲಿಗೆ ರಂಧ್ರ ಅಂತ ಕೇಳಿದರೆ ನ್ಯೂಟನ್ ಬೆಕ್ಕುಗಳ ಸಮಸ್ಯೆ ವಿವರಿಸಿದಾಗ ಸ್ನೇಹಿತರು ಅಲ್ಲಾ ನ್ಯೂಟನ್ ದೊಡ್ಡದಾದ ರಂಧ್ರದಲ್ಲಿಯೇ ಮೂರೂ ಬೆಕ್ಕುಗಳು ಬಂದು ಹೋಗಿ ಮಾಡುತ್ತಿದ್ದವು. ಅವುಗಳ ಅಳತೆಗೆ ತಕ್ಕ ಹಾಗೆ ಮೂರು ರಂಧ್ರ ಕೊರೆಸುವ ಅವಶ್ಯಕತೆ ಏನಿತ್ತು ಅಂತ ಪ್ರಶ್ನಿಸಿದಾಗ ನ್ಯೂಟನ್ ಪೆಚ್ಚಾದರು.**